
ಗೌರಿ ಲಂಕೇಶರ


ಲಂಕೇಶ್

ಜೂನ್ 6, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



- ರೇಣುಕಾಚಾರ್ಯ ಸಸ್ಪೆಂಡ್?
- ಜಯಲಕ್ಷ್ಮಿಗೆ ಅನಿಲ್ ಲಾಡ್ ಆರು ಲಕ್ಷ! ನೈಸ್ ಖೇಣಿ ಎಂಟು ಕೋಟಿ!

ಸೆಕ್ಸ್ ಸಿಡಿ ಅಡ್ವಾನಿ ಕೈಗೆ!



ಪರಪ್ಪನ ಅಗ್ರಹಾರದಲ್ಲಿ ಗ್ಯಾಂಗ್ ವಾರ್!

ಳ್ಳಾಲ: ಶೆಟ್ಟಿಯ ಫಿಟ್ಟಿಂಗ್! ಖಾದರ್‌ಗೆ ಉಕ್ಕಿನ ಕಡಲೆ

ವೆಂಪು ವಿ.ವಿ.: ಜಾತಿ ರಾಜಕಾರಣವೂ ಸದಾನಂದನ ಬಂಧನವೂ....

ಲಿಟರಿ ಪ್ರಭುತ್ವದಲ್ಲಿ ಜನರಿಗೆಲ್ಲಿ ನ್ಯಾಯ?



ಹೊಸ ವಸತಿ ನೀತಿಯಲ್ಲ, ನಿರ್ವಸತಿ ನೀತಿ!



ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳ ನಂತರ ಇದ್ದಕ್ಕಿದ್ದಂತೆ ಒಂದು ವಸತಿ ನೀತಿಯನ್ನು ಘೋಷಿಸಿದೆ. ಅದರಲ್ಲೂ ನಗರದ ಬಡವರಿಗೆಂದೇ ಈ ವಸತಿ ನೀತಿಯಂತೆ. ಆದರೆ ಅದನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ - ಅಂದರೆ ಆ ಘೋಷಣೆಯ ಮುಸುಕಿನಲ್ಲಿ ಹುದುಗಿರುವುದನ್ನು ಅಧ್ಯಯನ ಮಾಡಿದರೆ - ಇದು ಸಾರಾಂಶದಲ್ಲಿ ನಿರ್ವಸತಿ ನೀತಿಯೇ ವಿನಃ ವಸತಿ ನೀತಿಯಲ್ಲ ವೆಂಬುದು ಅರ್ಥವಾಗುತ್ತದೆ.

ಏಕೆಂದರೆ ಇದು ಮನೆಯಿಲ್ಲದವರಿಗೆ ಮನೆ ಕೊಡಿಸುವ ವಸತಿ ನೀತಿಯಲ್ಲ, ಬದಲಿಗೆ ಸಾಲಸೋಲ ಮಾಡಿ ಮನೆ ಕಟ್ಟಿಕೊಂಡವರನ್ನು ಸಹ ಹಕ್ಕುಪತ್ರ ಇಲ್ಲವೆಂದು ಸ್ಲಂಗಳಿಂದ ಎತ್ತಂಗಡಿ ಮಾಡಿಸುವ ನಿರ್ವಸತಿ.

ಸರ್ಕಾರದ ಅಂದಾಜಿನ ಪ್ರಕಾರವೇ 1980ರಲ್ಲಿ ದೇಶದಲ್ಲಿ ಕೇವಲ 20 ಲಕ್ಷ ಜನರು ಮಾತ್ರ ಸ್ಲಂಗಳಲ್ಲಿ ವಾಸಿಸುತ್ತಿದ್ದರು. ಈಗ, ಕಳೆದ ಎರಡು ದಶಕಗಳಲ್ಲಿ ಆ ಸಂಖ್ಯೆ 8 ಕೋಟಿ ಮುಟ್ಟಿದೆ. ದೇಶದಲ್ಲಿ ಬಹುಪಾಲು ವಸತಿ ಹೀನರು ಇವರೇ. ತಮ್ಮ ಹಳ್ಳಿಗಳಲ್ಲಿ ಕೃಷಿಯಿಂದ ಬದುಕು ಸಾಗಿಸಲು ಆಗದೇ ಆತ್ಮಹತ್ಯೆಯ ಉರುಳಿನಿಂದ ತಪ್ಪಿಸಿಕೊಂಡು ಜೀವನಾಧಾರಕ್ಕೆಂದು ನಗರಕ್ಕೆ ವಲಸೆ ಬಂದವರು ಈ ಜನ. ಇವರ ಸಂಖ್ಯೆ ಎರಡು ದಶಕಗಳಲ್ಲಿ 8 ಕೋಟಿಯಷ್ಟು ಜಾಸ್ತಿಯಾಗುತ್ತದೆ ಯೆಂಬುದು ಒಂದೆಡೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗುತ್ತಿರುವ ಕೃಷಿ ಬಿಕ್ಕಟ್ಟಿಗೂ, ಇನ್ನೊಂದೆಡೆ ನಗರದಲ್ಲೇ ಕೇಂದ್ರೀಕರಣಗೊಳ್ಳುತ್ತಿರುವ ಆರ್ಥಿಕತೆಗೂ ಸಂಕೇತವಾಗಿದೆ.

ಈಗ ಇಷ್ಟೊಂದು ಜನರಿಗೆ ಸರ್ಕಾರ ಹೇಗೆ ವಸತಿ ಒದಗಿಸುತ್ತದೆ? ಸರ್ಕಾರದ ಪ್ರಕಾರ 3.5 ಕೋಟಿ ಮನೆಗಳನ್ನು ನಿರ್ಮಿಸಬೇಕಾಗಿದೆ. ಅಂದರೆ ದಿವಸಕ್ಕೆ 35,000 ಮನೆಗಳು. ಅಷ್ಟೊಂದು ಜಾಗ ಎಲ್ಲಿಂದ ತರಬೇಕು? ಅದಕ್ಕಾಗಿ ಹಸಿರು ವಲಯದ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲಾಗುವುದಂತೆ! ಮತ್ತು ಈ ಬೃಹತ್ ಯೋಜನೆಯಲ್ಲಿ ಸರ್ಕಾರಿ ಮತ್ತು ಖಾಸಗಿಯವರು ಇಬ್ಬರೂ ಜೊತೆಗೂಡಿ ಮನೆಗಳನ್ನು ನಿರ್ಮಿಸುತ್ತಾರಂತೆ. ಮತ್ತು ಇಂತಹ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ದೆಹಲಿಯಲ್ಲಿ ಅನುಷ್ಠಾನಕ್ಕೆ ತರಲಾಗಿದೆಯಂತೆ.

ಈ ಯೋಜನೆ ಹೇಗಿರುತ್ತದೆ ಎಂದು ಅರ್ಥ ಮಾಡಿಕೊಳ್ಳಲು ದೆಹಲಿಯಲ್ಲಿ ಏನಾಯಿತೆಂದು ಅರ್ಥ ಮಾಡಿಕೊಂಡರೆ ಸಾಕು! ದೆಹಲಿಯ ಯಮುನಾ ನದಿ ತೀರದಲ್ಲಿ ಹಲವಾರು ದಶಕಗಳಿಂದ ವಾಸಿಸುತ್ತಿದ್ದ ಸ್ಲಂನಿವಾಸಿಗಳನ್ನು ಇದೇ ಯೋಜನೆಯ ಹೆಸರಲ್ಲಿ ಅಲ್ಲಿಂದ ಇದ್ದಕ್ಕಿದ್ದಂತೆ



ಎತ್ತಂಗಡಿ ಮಾಡಿ ದೆಹಲಿಯಿಂದ ಕನಿಷ್ಠ ಇಪ್ಪತ್ತು ಕಿಲೋ ಮೀಟರ್ ದೂರಕ್ಕೆ ಸಾಗಹಾಕಲಾಯಿತು. ಅಲ್ಲಿ ಅವರಿಗೆ ಶೆಡ್‌ಗಳಂತಹ ವಸತಿ ನಿರ್ಮಾಣ ಮಾಡಿಕೊಟ್ಟರೆ ಇಲ್ಲಿ ಯಮುನಾ ನದಿ ತೀರದಲ್ಲಿದ್ದ ಜಮೀನನ್ನು ದೊಡ್ಡ ದೊಡ್ಡ ಕಾರ್ಪೊರೇಟ್ ಬಿಲ್ಡರ್‌ಗಳಿಗೆ ಕೊಡಲಾಯಿತು.

ವಾಸ್ತವವಾಗಿ ಇಂದು ವಸತಿ ನಿರ್ಮಾಣದಲ್ಲೂ ದೊಡ್ಡ ಮಟ್ಟದಲ್ಲಿ ವಿದೇಶಿ ಬಂಡವಾಳ ಬರುತ್ತಿದೆ. ಅವರಿಗೆ ಕಟ್ಟಡ ಕಟ್ಟಲು ಜಾಗದ ಅಗತ್ಯವಿದೆ. ಈಗಾಗಲೇ ಶ್ರೀಮಂತರಿರುವ ಜಾಗವನ್ನು ಹೊರತುಪಡಿಸಿದರೆ, ಉಳಿಯುವುದು ಹಸಿರು ವಲಯವೆಂದು ಎತ್ತಿಡಲಾದ ಜಾಗ ಮತ್ತು ಸ್ಲಂಗಳಿರುವ ಜಾಗಗಳು ಮಾತ್ರ. ಇವೆರಡನ್ನು ಅವರಿಗೆ ಖಾಲಿ ಮಾಡಿಕೊಡಬೇಕೆಂದರೆ ಯಾವುದಾದರೂ ನೆಪ ಬೇಡವೇ? ಅದಕ್ಕೆ ಬಡವರ ವಸತಿಯ ಬಗ್ಗೆ ಈ ಮೊಸಳೆ ಕಣ್ಣೀರು.

ಅಂದರೆ ಶ್ರೀಮಂತರಿಗೆ ವಸತಿ ನೀಡುತ್ತಲೇ ಬಡವರನ್ನು ನಿರ್ವಸತಿ ಮಾಡುವ ನೀತಿಯಿದು! ತೋಳಕ್ಕೆ ಕುರಿಯ ಮೇಲೆ ಪ್ರೀತಿ ಬಂದದ್ದು ಇದಕ್ಕೆ!

ಚಾರ್ವಾಕ

ಶಿವಸುಂದರ್

ಶೇರುಚೀಟಿ ರೈತನಿಗೆ, ಜಮೀನು ಕಂಪನಿಗೆ!

ವಸಾಹತುಶಾಹಿಗಳು ಆಫ್ರಿಕಾವನ್ನು ಹೇಗೆ ಗೆದ್ದುಕೊಂಡರು ಎಂಬುದನ್ನು ವಿವರಿಸಲು ಈಗ ಅತಿ ಸಾಮಾನ್ಯವೇ ಆಗಿ ಬಿಟ್ಟಿರುವ ಒಂದು ರಾಜಕೀಯ ನಾಣ್ನುಡಿ ಹೇಳುತ್ತಾರೆ. ಆಫ್ರಿಕಾಗೆ ಬಿಳಿಯರು ಬಂದಾಗ ಬಿಳಿಯರ ಕೈಯಲ್ಲಿ ಬೈಬಲ್ ಮತ್ತು ಸ್ಥಳೀಯರ ಕೈಯಲ್ಲಿ ಜಮೀನು ಇತ್ತಂತೆ. ಆದರೆ ಕೆಲವು ದಶಕಗಳು ಕಳೆಯುವ ವೇಳೆಗೆ ಬಿಳಿಯರ ಕೈಯಲ್ಲಿ ಜಮೀನು ಮತ್ತು ಕರಿಯರ ಕೈಯಲ್ಲಿ ಬೈಬಲ್ಲು ಇತ್ತಂತೆ! ಅಂದರೆ ಸ್ಥಳೀಯರ ಒಡೆತನದಲ್ಲಿದ್ದ ಜಮೀನನ್ನು ಕಬಳಿಸಲು ಆಗ ವಸಾಹತುಶಾಹಿಗಳು ಹೇಗೆ ಧರ್ಮದ ಅಫೀಮನ್ನು ಬಳಸಿದರು ಎಂಬುದನ್ನು ಈ ನಾಣ್ನುಡಿ ವಿವರಿಸುತ್ತದೆ.

ಈಗ ಈ ದೇಶದ ಸ್ಥಳೀಯ ಮತ್ತು ವಿದೇಶಿ ಕಾರ್ಪೊರೇಟ್ ಬಂಡವಾಳಿಗರು ಭಾರತದ ರೈತರ ಬಳಿ ಇರುವ ಜಮೀನನ್ನು ಕಿತ್ತುಕೊಳ್ಳಲು ಇದೇ ಬಗೆಯ ಇಲ್ಲದ ತಂತ್ರಗಳನ್ನು ಹೂಡುತ್ತಿವೆ. ಮೊದಲು ಎಸ್.ಇ.ಜೆಡ್ ಮಾರ್ಗದಿಂದ ಬಲವಂತವಾಗಿ ಕೈಗಾರಿಕೆಯ ಹೆಸರಲ್ಲಿ ಲಕ್ಷಾಂತರ ಎಕರೆ ಜಮೀನನ್ನು ಕಬಳಿಸಲು ಪ್ರಯತ್ನಿಸಿದರು. ಆದರೆ ನಂದಿಗ್ರಾಮದಲ್ಲಾದ ಪ್ರತಿರೋಧ ಭಾರತೀಯ ಮತ್ತು ವಿದೇಶಿ ಧಣಿಗಳಲ್ಲಿ ನಡುಕ ಹುಟ್ಟಿಸಿದ ನಂತರ ಸರ್ಕಾರವೂ ಬೇರೇ ಬೇರೆ ಮಾರ್ಗಗಳನ್ನು ಹುಡುಕುತ್ತಿದೆ.

ವಾಸ್ತವವಾಗಿ ಎಸ್.ಇ.ಜೆಡ್‌ಗಳಿಗಿಂತಲೂ ಮುಖ್ಯವಾಗಿ ಎಸ್.ಎ.ಜೆಡ್ ಅಂದರೆ ಕಾರ್ಪೊರೇಟ್ ಕೃಷಿಗೆ ಲಕ್ಷಾಂತರ ಎಕರೆ ಕೃಷಿ ಜಮೀನು ಬೇಕಾಗುತ್ತದೆ. ಅದನ್ನು ಬಲವಂತದಿಂದ ಪಡೆಯಲು ಸಾಧ್ಯವಿಲ್ಲ, ಅದರ ಬದಲು ರೈತರೇ ಸ್ವ ಇಚ್ಛೆಯಿಂದ ತಮ್ಮ ಜಮೀನನ್ನು ಕೊಡುವಂತೆ ಮಾಡದೆ ಕಾರ್ಪೊರೇಟ್ ಕೃಷಿಗೆ ಆ ಪ್ರಮಾಣದ ಜಮೀನು ದೊರೆಯುವಂತಿಲ್ಲ, ಹಾಗೆ ಮಾಡ ಬೇಕೆಂದರೆ ರೈತರಿಗೇ ಕೆಲವು ಆಮಿಷಗಳನ್ನು ತೋರಿಸದೆ ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವ ಸರ್ಕಾರ ಮೊನ್ನೆ ಒಂದು ಹೊಸ ನೀತಿಯನ್ನು ಪ್ರಕಟಿಸಿದೆ.

ಅದರ ಪ್ರಕಾರ ಸಣ್ಣ ಮತ್ತು ಮಧ್ಯಮ ರೈತರು ಹೇಗಿದ್ದರೂ ಇನ್ನು ಮುಂದೆ ಲಾಭದಾಯಕ ಕೃಷಿ ಮಾಡಲು ಸಾಧ್ಯವಾಗುವುದಿಲ್ಲ, ಅದಕ್ಕೆ ಅವರೆಲ್ಲರೂ ತಮ್ಮ ಜಮೀನುಗಳನ್ನು ಕಾರ್ಪೊರೇಟ್ ಕೃಷಿ ಮಾಡಲು ಸಿದ್ಧವಿರುವ ಕಂಪನಿಗೆ ಅಡಮಾನ ಮಾಡಬೇಕು. ಅವರವರ ಜಮೀನಿನ ಪ್ರಮಾಣಕ್ಕೆ ಅನುಸಾರವಾಗಿ ಆ ಕಂಪನಿಯಲ್ಲಿ ಪಾಲು ಅಂದರೆ ಶೇರು ದೊರೆಯುತ್ತದೆ. ಮೂಲ ಕಂಪನಿಯದು ಕನಿಷ್ಠ ಶೇ.25ರ ಬಂಡವಾಳ ಇರುತ್ತದೆ.

ಹೀಗೆ ರೈತರು ಆ ಕಂಪನಿಯ ಶೇರುಧಾರರಾಗಿ ಅದರ ಅಭಿವೃದ್ಧಿಯಲ್ಲೇ ತಮ್ಮ ಅಭಿವೃದ್ಧಿಯನ್ನು ಕಂಡುಕೊಳ್ಳುವ ವಸಾಹತು ಕಾಲಕ್ಕಿಂತಲೂ ಕ್ರೂರವಾದ ಯೋಜನೆಯನ್ನು ನಮ್ಮ ಸರ್ಕಾರವೇ ಹೆಣೆದಿದೆ. ಆ ಕಾರ್ಪೊರೇಟ್ ಕಂಪನಿಯ ಶೇರನ್ನು ಇವರು ಬೇರೆ ಯಾರಿಗೂ ಮಾರುವಂತಿಲ್ಲ, ಅದಕ್ಕೆ ಹೆಚ್ಚೆಚ್ಚು ಶೇರುಗಳನ್ನು ಒಂದೇ ಕಂಪನಿ ಕೊಂಡು ಏಕಸ್ವಾಮ್ಯ ಬೆಳೆದು ಬಿಡಬಹುದೆಂಬ ಕಾರಣವನ್ನು ತೋರಿಸಲಾಗಿದ್ದರೂ ಅದರ ಹಿಂದೆ ಇರುವ ಹುನ್ನಾರ ರೈತರನ್ನು ಕಾರ್ಪೊರೇಟ್ ಕಂಪನಿಗೆ ನಿಷ್ಠರನ್ನಾಗಿ ಉಳಿಸಿಕೊಳ್ಳುವುದೇ ಹೊರತು ಬೇರೇನಲ್ಲ.

ಈ ಹಿಂದೆ ಬೈಬಲ್ ತೋರಿಸಿ ಪರಲೋಕದಲ್ಲಿ ಶಾಶ್ವತ ಸುಖವೆಂಬ ಭ್ರಾಂತಿ ತುಂಬಿ ಜಮೀನು ಕಿತ್ತುಕೊಂಡರು. ಈಗ ಈ ಲೋಕದಲ್ಲೇ ಶ್ರೀಮಂತರಾಗಬಹುದೆಂಬ ಭ್ರಾಂತಿ ತುಂಬಿ ಜಮೀನನ್ನು ಕಿತ್ತುಕೊಳ್ಳಲಾಗುತ್ತಿದೆ. ಶೇರುಚೀಟಿ ರೈತರಿಗೆ, ಜಮೀನು ಮತ್ತು ಸಮೃದ್ಧಿ ಕಾರ್ಪೊರೇಟ್ ಕಂಪನಿಗೆ!

ಅಂಬಾನಿ ಬಿಲ್ ಗೇಟ್ಸ್ ಹತ್ತಿರ, ಬೋರೇಗೌಡ ನರಕದ ಹತ್ತಿರ!




ನಮ್ಮ ಭಾರತದ ಅಂಬಾನಿಗಳ ಆಸ್ತಿಪಾಸ್ತಿಗಳು ಪ್ರಪಂಚದ ಅತಿ ದೊಡ್ಡ ಶ್ರೀಮಂತನಾದ ಬಿಲ್ ಗೇಟ್ಸ್‌ಗೆ ಸರಿ ಸಮನಾಗಿ ಬೆಳೆಯುತ್ತಿದೆಯಂತೆ. ಬಿಲ್ ಗೇಟ್ಸ್‌ನ ಆಸ್ತಿಪಾಸ್ತಿ ಕಳೆದ ವರ್ಷ 50 ಶತಕೋಟಿ ಡಾಲರ್ ಮುಟ್ಟಿದರೆ ಅಂಬಾನಿಗಳ ಆಸ್ತಿಪಾಸ್ತಿ 47 ಶತಕೋಟಿ ಡಾಲರ್ ಮುಟ್ಟಿತಂತೆ. ಅಂದರೆ ಇದೇ ವೇಗದಲ್ಲಿ ಅಂಬಾನಿ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಅಂಬಾನಿಯೇ ಪ್ರಪಂಚದ ಅತಿ ದೊಡ್ಡ ಶ್ರೀಮಂತನಾಗುವುದರಲ್ಲಿ ಸಂಶಯವಿಲ್ಲ.

ಭಾರತಕ್ಕೆ ಇದು ದೊಡ್ಡ ಹೆಮ್ಮೆ ತರುವ ವಿಷಯವೆಂದು ಪತ್ರಿಕೆಗಳು ಹಾಸುಗಟ್ಟಲೆ ಬರೆಯುತ್ತಿವೆ. ಅದಿರಲಿ, ಈ 47 ಶತಕೋಟಿ ಡಾಲರ್ ಎಂದರೆಷ್ಟು? ಅಂದರೆ 2,50,000 ಕೋಟಿ ರೂಪಾಯಿಗಳು! ಇನ್ನೊಂದು ರೀತಿಯಲ್ಲಿ ಹೇಳುವುದಾದರೆ

- ಈ ದೇಶದ ವಾರ್ಷಿಕ ಬಜೆಟ್ಟಿನ ಶೇ.20 ಭಾಗದಷ್ಟು!
- ಕರ್ನಾಟಕದ ಬಜೆಟಿನ ಐದು ಪಟ್ಟು!
- ಈ ದೇಶದ ಎಲ್ಲಾ ಬಡವರಿಗೂ ಎರಡು ಹೊತ್ತು ಊಟ ಮಾಡಲು ಸರ್ಕಾರ ವ್ಯಯಿಸುತ್ತಿರುವ 25,000 ಕೋಟಿಯ ಹತ್ತು ಪಟ್ಟು!
- ಈ ದೇಶದ ಎಲ್ಲಾ ಗ್ರಾಮೀಣ ಮಕ್ಕಳ ಬಿಸಿಯೂಟಕ್ಕೆಂದು ಸರ್ಕಾರ ನಿಗದಿ ಮಾಡಿರುವ 10,000 ಕೋಟಿಯ 25 ಪಟ್ಟು.
- ಕರ್ನಾಟಕ ಸರ್ಕಾರ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರನ್ನು ಬಚಾವು ಮಾಡಲು ಘೋಷಿಸಿರುವ 4000 ಕೋಟಿ ರೂಪಾಯಿಗಳ ಪ್ಯಾಕೇಜಿನ 60 ಪಟ್ಟು!!

ಇದನ್ನು ಹೀಗೂ ಹೇಳಬಹುದು. ಒಂದು ಕಡೆ ಸರ್ಕಾರದ ಬಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರನ್ನು ಸಂಪೂರ್ಣವಾಗಿ ಬಚಾವು ಮಾಡಲು ಇಲ್ಲದ ಹಣ, ಬಡವರ ಪಡಿತರ ಚೀಟಿಗೆ ಇಲ್ಲದ ಹಣ, ಬಿಸಿ ಊಟಕ್ಕೆ ಇಲ್ಲದ ಹಣ ಕೇವಲ ಒಂದು ಅಂಬಾನಿ ಕಂಪನಿಯ ಬಳಿ 20 ರಿಂದ 40 ಪಟ್ಟಷ್ಟು ಕಾಲು ಮುರಿದುಕೊಂಡು ಬಿದ್ದಿದೆ.

ನಮ್ಮ ಸಂವಿಧಾನದ ಆರ್ಟಿಕಲ್ 38 ಈ ದೇಶದ ಸಂಪತ್ತನ್ನು ಸಮಾನವಾಗಿ ಎಲ್ಲರೂ ಪಡೆಯುವಂತೆ ಪ್ರಭುತ್ವ



ನೀತಿಗಳನ್ನು ರೂಪಿಸಬೇಕೆಂದು ನಿರ್ದೇಶನ ನೀಡುತ್ತದೆ. ಆದರೆ 1980ರಲ್ಲಿ ಕೇವಲ ಕೆಲವು ಕೋಟಿ ರೂಪಾಯಿಯ ಒಡೆತನ ಹೊಂದಿದ್ದ ಅಂಬಾನಿಗಳು ಈಗ ಶತಕೋಟಿಗಳ ಒಡೆತನ ಹೊಂದಿದ್ದಾರೆ. ಅದೇ ಸಮಯದಲ್ಲಿ ಸರ್ಕಾರದ ಬೊಕ್ಕಸಕ್ಕೆ ತೂತುಬಿದ್ದು ದೇಶದ ಸಂಪತ್ತಿನಲ್ಲಿ ಬಡವರ ಪಾಲು ಕಡಿಮೆಯಾಗುತ್ತಾ ಹೋದದ್ದು ಕಾಕತಾಳೀಯವಲ್ಲ.

ಇವೆರಡರ ನಡುವೆ ಕಾರ್ಯಕಾರಣ ಸಂಬಂಧವಿದೆ. ಅದೇನೆಂದರೆ ಅಂಬಾನಿಗಳಂತವರು ದೇಶದ ಬೊಕ್ಕಸವನ್ನು ಸೂರೆ ಹೊಡೆದದ್ದರಿಂದಲೇ ಈ ದೇಶದ ಬಹುಪಾಲು ಜನತೆ ಭಿಕಾರಿಗಳಾಗಿದ್ದಾರೆ. ಹೀಗಾಗಿ ಅಂಬಾನಿ ಪ್ರಪಂಚದ ಶ್ರೀಮಂತನಾಗುವುದೆಂದರೆ ಈ ದೇಶದ ಪ್ರಜಾಸತ್ತೆಯ ವೈಫಲ್ಯಕ್ಕೆ, ಜನತೆಯ ಮೇಲೆ ಅಂಬಾನಿಗಳು ಸರ್ಕಾರದ ಬೆಂಬಲದಿಂದ ನಡೆಸುತ್ತಿರುವ ಲೂಟಿಗೆ ಸಂಕೇತ ಅಷ್ಟೆ.

No Comments

"ರೈತರ ಆತ್ಮಹತ್ಯೆ ಹೀಗೇ ಮುಂದುವರೆದರೆ ನಾನು ಅಧಿಕಾರ ತ್ಯಾಗ ಮಾಡುತ್ತೇನೆ."

- ಎಚ್. ಡಿ. ಕುಮಾರಸ್ವಾಮಿ

"ಆಸ್ತಿ ವಿವರ ಸಲ್ಲಿಸದ ಮಂತ್ರಿಗಳ ವಜಾಗೆ ನಾನು ಶಿಫಾರಸ್ಸು ಮಾಡಿದ್ದೇನೆ. ಆದರೆ ಅದನ್ನು ಮುಖ್ಯಮಂತ್ರಿ ತಿರಸ್ಕರಿಸಿದರೆ ಏನೂ ಮಾಡುವ ಅಧಿಕಾರ ನನಗಿಲ್ಲ."

ನ್ಯಾ. ಸಂತೋಷ್ ಹೆಗ್ಡೆ ಲೋಕಾಯುಕ್ತರು

"ಸೇನಾ ಸಮವಸ್ತ್ರ ನನ್ನ ಚರ್ಮವಿದ್ದ ಹಾಗೆ. ಅದನ್ನು ಹೇಗೆ ಕಳಚಲಿ?"

- ಮುಷರಫ್, ಪಾಕಿಸ್ತಾನ್ ಅಧ್ಯಕ್ಷ



"ರಾಜಾರವಿ ವರ್ಮ ಆಗಿನ ಕಾಲದ ಧಿರಿಸುಗಳಿಂದ ದೇವರ ಚಿತ್ರಗಳಿಗೆ ವಸ್ತ್ರಗಳನ್ನು ತೊಡಿಸಿದ ನಂತರವೇ ಇಂದು ಚಿತ್ರಕಲೆಯಲ್ಲಿ ನಾವು ಕಾಣುತ್ತಿರುವ ಅಶ್ಲೀಲತೆ ಇತ್ಯಾದಿಗಳ ಪರಿಕಲ್ಪನೆ ಶುರುವಾದದ್ದು."

- ಅಂಜಲಿ ಇಳಾ ಮೆನನ್

"ಸಂಪತ್ತನ್ನು ಸೃಷ್ಟಿಸುವ ಭಾರತೀಯ ಕೈಗಾರಿಕೆಗಳ ಯಶಸ್ಸು ಖುಷಿಪಡುವಂತಹದ್ದೇ. ಆದರೆ ಅದರ ಆಡಂಬರದ ಪ್ರದರ್ಶನ ಬಡವರಿಗೆ ಅವಮಾನ ಮಾಡಿದ ಹಾಗೆ."

- ಮನಮೋಹನ್ ಸಿಂಗ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಸೇತು ಸಮುದ್ರ ಯೋಜನೆಯಿಂದ ರಾಮ ಕಟ್ಟಿದ ಸೇತುವೆಗೆ ಧಕ್ಕೆಯಾಗುತ್ತದೆ."

- ಶಂಕರಾಚಾರ್ಯ

"ಪ್ರವೇಶ ಪ್ರಕ್ರಿಯೆ ಆರಂಭಿಸುವುದಾಗಿ ಸವಾಲು ಹಾಕಿರುವ ಇಂಗ್ಲೀಷ್ ಶಾಲೆಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು."

- ಬಸವರಾಜ್ ಹೊರಟ್ಟಿ

"ಪರಿಶಿಷ್ಟರಿಗೆ ನೀಡಿರುವ 730 ಕೋಟಿ ರೂ. ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರ ಚಿಂತಿಸುತ್ತಿದೆ."

- ಬಾಲಚಂದ್ರ ಜಾರಕಿಹೊಳಿ

"ಸಿದ್ದರಾಮಯ್ಯ ನಾಯಕತ್ವದಲ್ಲಿ ಯಾವ ಸಭೆಯೂ ನಡೆದಿಲ್ಲ, ನಾವು ಯಾರೂ ಕಾಂಗ್ರೆಸ್ ತೊರೆಯುವುದಿಲ್ಲ."

- ಎಚ್. ಸಿ. ಮಹದೇವಪ್ಪ

ವಾರದ ಅವಿವೇಕ

"ಬಂಜಗೆರೆ ಜಯಪ್ರಕಾಶರ ಕೃತಿ 900 ವರ್ಷಗಳ ವಚನ ಸಾಹಿತ್ಯದಲ್ಲಿ ಒಂದು ಕಳೆಯಿದ್ದಂತೆ. ಅದನ್ನು ಕಿತ್ತೆಸೆಯಲೇ ಬೇಕು"

- ಡಾ. ಎಚ್. ಚಂದ್ರಶೇಖರ್

ವಾರದ ವಿವೇಕ



"ಮನುಷ್ಯರನ್ನು ಕೊಲ್ಲಲು ಭಾರೀ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಸಂಗ್ರಹಿಸಿಡುವ ಬದಲು ನಾವು ಅಧಿಕ ಆಹಾರವನ್ನು ಉತ್ಪಾದಿಸುವತ್ತ ನಮ್ಮ ಗಮನವನ್ನು ಕೇಂದ್ರೀಕರಿಸೋಣ."

- ಇವೋ ಮೊರಲಿಸ್, ಬೊಲಿವಿಯಾದ ಅಧ್ಯಕ್ಷ

ವಾರದ ಅಸಂಬದ್ಧ

"ಪರಿಸರ ಉಳಿಸಲು ನಾವೂ ಶಾಖಾಹಾರಿಗಳಾಗಬೇಕು. ಕೋಮು ಸೌಹಾರ್ದ ವೇದಿಕೆಯವರು ಗೋ ಸಮ್ಮೇಳನವನ್ನು ವಿರೋಧಿಸುವ ಬದಲು ಇದರತ್ತ ಗಮನಹರಿಸಲಿ."

- ವಾಚಕರ ವಾಣಿಯಲ್ಲಿ ಒಂದು ಪತ್ರ

ಒಂದು ದ್ವಂದ್ವ



"ಇದು ನನ್ನ ಜೀವನ. ನನ್ನ ಆಸೆ, ಆಕಾಂಕ್ಷೆ, ಬೇಡಿಕೆಗಳನ್ನು ನನ್ನದೇ ಆದ ರೀತಿಯಲ್ಲಿ ಎದುರಿಸುತ್ತೇನೆಯೇ ಹೊರತು ಇದರ ಆಪಾದನೆಯನ್ನು ಯಾರ ಮೇಲೂ ಹೊರಿಸುವುದಿಲ್ಲ."

ಇಸ್ಮತ್ ಚುಗ್ತಾಯ್, ಪ್ರಖ್ಯಾತ ಉರ್ದು ಸಾಹಿತಿ

ಇದರರ್ಥವೇನು?

"ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ನನಗೆ ನೀಡಲಾಗಿರುವ 20 ತಿಂಗಳು ಸಾಲದು."

ಎಚ್. ಡಿ. ಕುಮಾರಸ್ವಾಮಿ

'ಜಗನ್ಮಾತೆ'ಯನ್ನು ಬೆತ್ತಲಾಗಿಸಿದವರಿಗೆ ಯಾವ ಶಿಕ್ಷೆ?



ಕಂಡಹಾಗೆ

ಭಾರತವೆಂಬ ಥೇಟರ್ ಆಫ್ ದಿ ಅಬ್ಸರ್ಡ್‌ನಲ್ಲಿ ಪ್ರತೀವಾರ ಯಾವುದಾದರೊಂದು ಅಸಂಬದ್ಧ, ಹಾಸ್ಯಾಸ್ಪದ ಘಟನೆಗಳು ನಡೆಯುತ್ತಲೇ ಇರುತ್ತವೆ. ಮೊನ್ನೆ ಇಂತಹ ಒಂದು ಘಟನೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಿತು. ಅವತ್ತು (ಕಳೆದ ಭಾನುವಾರ) ಸಾವಿರಾರು 'ಮಾತೆ'ಯರು ಮತ್ತು 'ಮಹನೀಯರು' ಅರಮನೆ ಮೈದಾನದಲ್ಲಿ ಸೇರಿ ಒಂದು ಗಂಟೆ ಕಾಲ ಏಕಕಾಲದಲ್ಲಿ ಸ್ತೋತ್ರ ಪಾರಾಯಣ ಮಾಡಿದರು.

ದೇಶದ ವಿವಿಧ ಭಾಗಗಳಿಂದ ಬಂದಿದ್ದ ಹಲವಾರು ಸ್ವಾಮಿಗಳ ಮತ್ತು ವೇದಾಂತ ಪಂಡಿತರ ಸಮ್ಮುಖದಲ್ಲಿ ಮಾತೆಯರು ಶಂಕರಾಚಾರ್ಯ ಬರೆದಿದ್ದ 'ಸೌಂದರ್ಯ ಲಹರಿ'ಯ ನೂರು ಶ್ಲೋಕಗಳನ್ನು ಸುಶ್ರಾವ್ಯವಾಗಿ ಪಠಿಸಿದರು.

ಇದಾದನಂತರ ಶೃಂಗೇರಿ ಶಾರದಾ ಪೀಠದ ಭಾರತೀತೀರ್ಥ ಸ್ವಾಮೀಜಿಗಳು "ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿಗೆ ವಿಶೇಷ ಸ್ಥಾನವಿದೆ; ಶಕ್ತಿ, ವಿದ್ಯೆ ಹಾಗೂ ಶಕ್ತಿ ಸ್ವರೂಪಿಣಿಯಾದ ವಿಶ್ವಮಾತೆಯನ್ನು ಭಜಿಸುವ ಈ ಶ್ಲೋಕಗಳಿಂದ ಮಾನವನ ಕಷ್ಟಗಳಿಗೆ ಪರಿಹಾರ ಲಭ್ಯವಾಗುತ್ತದೆ. ಮುಖ್ಯವಾಗಿ ತಾಯಿ ಎಂದರೆ ಏನು ಹಾಗೂ ಆಕೆಗೆ ಎಷ್ಟು ಗೌರವ ಕೊಡಬೇಕು ಎಂಬುದನ್ನು ಈ ಶ್ಲೋಕಗಳ ಮೂಲಕ ಶಂಕರರು ತೋರಿಸಿಕೊಟ್ಟಿದ್ದಾರೆ" ಎಂದು ಹೇಳಿದರು.



ಅವರೊಂದಿಗೆ ಉಪಸ್ಥಿತರಿದ್ದ ಪುರಿ, ಬದರಿ, ವಾರಣಾಸಿ ಮತ್ತು ಇತರೆ ದೂರದ ಊರುಗಳಿಂದ ಬಂದಿದ್ದ ಸ್ವಾಮೀಜಿಗಳು ಮತ್ತು ಸಂಸ್ಕೃತ ಪಂಡಿತರು "ಶಕ್ತಿರೂಪಿ ಣಿಯಾದ ಜಗನ್ಮಾತೆಯನ್ನು ಭಜಿಸುವ ಕಾರ್ಯ ನಿರಂತರವಾಗಿ ನಡೆಯಬೇಕು. ಆಗ ಮಕ್ಕಳಿಗೆ ಮತ್ತು ಯುವ ಜನತೆಗೆ ತಾಯಿಯ ಮೌಲ್ಯ ಅರ್ಥವಾಗುತ್ತದೆ" ಎಂದೆಲ್ಲ ಹಿತವಚನ ನುಡಿದರು.

ನೋ ಪ್ರಾಬ್ಲಮ್. ಇವತ್ತು ತಂದೆ-ತಾಯಿಯರನ್ನು ಅಸಡ್ಡೆಯಿಂದ ನೋಡುವ, ಅವರನ್ನು ವೃದ್ಧಾಶ್ರಮಗಳಿಗೆ ದೂಡುವ, ಅವರೆಂದರೆ ಒಂದು ಭಾರ ಎಂದು ಪರಿಗಣಿಸುವ ಮನೋಭಾವ ಹೆಚ್ಚಾಗುತ್ತಿರುವಾಗ, ಹೆತ್ತವರನ್ನು, ಅದರಲ್ಲೂ ತ್ಯಾಗದ ಸಂಕೇತವಾಗಿರುವ ತಾಯಿಯನ್ನು ಜನ ಚೆನ್ನಾಗಿ ನೋಡಿಕೊಳ್ಳುವಂತಾದರೆ ನಮ್ಮ ಸಮಾಜಕ್ಕೆ ಒಳ್ಳೆಯದೆ. ಮೊದಲೇ ಹೇಳಿದ ಹಾಗೆ, ಖಂಡಿತವಾಗಿಯೂ ನೋ ಪ್ರಾಬ್ಲಮ್.

ಆದರೆ ಪ್ರಾಬ್ಲಮ್ ಇರುವುದು ಎಲ್ಲಿ ಎಂದು ಹೇಳುವ ಮುನ್ನ ಒಂದು ಪುಟ್ಟ ಟಿಪ್ಪಣಿ. ಹಿಂದೂ ದೇವತೆಗಳನ್ನು ನಗ್ನರಾಗಿ ತೋರಿಸಿದ್ದಾರೆ, ಆ ಮೂಲಕ ಹಿಂದೂ 'ಧರ್ಮ'ದ ಅನುಯಾಯಿಗಳಿಗೆ ನೋವನ್ನುಂಟುಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಇತ್ತೀಚೆಗೆ ಖ್ಯಾತ ಕಲಾವಿದ ಎಂ.ಎಫ್. ಹುಸೇನ್‌ರವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮುಂಬೈನ ಪೊಲೀಸರು ಮುಂದಾಗಿದ್ದರು. ಹಾಗೆಯೇ ಇಂತಹದ್ದೇ ಆರೋಪ ಹೊರಿಸಿ ಬರೋಡಾದ ಕಲಾ ವಿದ್ಯಾರ್ಥಿ ಚಂದ್ರಮೋಹನ್‌ನನ್ನು ಬಂಧಿಸಲಾಗಿತ್ತು, ಅಲ್ಲವೇ?

ಈಗ ಶಂಕರಾಚಾರ್ಯರು ರಚಿಸಿರುವ, ಮೊನ್ನೆ ಸ್ವಾಮೀಜಿಗಳ ಮತ್ತು ಸಂಸ್ಕೃತ ಪಂಡಿತರ ಸಮ್ಮುಖದಲ್ಲಿ ಸಾವಿರಾರು ಮಾತೆಯರು ಭಕ್ತಿಪೂರ್ವಕವಾಗಿ ಪಠಿಸಿದ 'ಸೌಂದರ್ಯ ಲಹರಿ'ಯಲ್ಲಿ ತಾಯಿಯ ಸಂಕೇತವಾದ, ವಿಶ್ವಮಾತೆಯಾದ ದೇವತೆಯನ್ನು ಹೇಗೆ ಚಿತ್ರಿಸಲಾಗಿದೆ ಎಂಬುದಕ್ಕೆ ಬರೋಣ....

ಈ ಸೌಂದರ್ಯ ಲಹರಿಯನ್ನು ವಿದ್ವಾನ್ ಶ್ರೀನಿಧಿಶರ್ಮರವರು ಕನ್ನಡಕ್ಕೆ ಭಾವಾನುವಾದ ಮಾಡಿರುವ ಪ್ರತಿ ಮೊನ್ನೆ ನನ್ನ ಕೈ ಸೇರಿತು. (ಶ್ರೀ ವಿಷ್ಣು ಪ್ರಕಾಶನ, ಬಳೇಪೇಟೆ,ಬೆಂಗಳೂರು, 1991 ಮುದ್ರಣ).

ಶ್ರೀನಿಧಿಶರ್ಮರವರು ತಮ್ಮ 'ಮೊದಲ ಮಾತು'ವಿನಲ್ಲಿ ಶಂಕರಾಚಾರ್ಯ ವೈದಿಕ ಧರ್ಮವನ್ನು ಭದ್ರವಾಗಿಸಿದಾತ, ಹಿಂದೂ ಧರ್ಮವನ್ನು ವೇದಗಳ ಹಾದಿಯಲ್ಲಿ ಮುನ್ನೆಡೆಸಿದಾತ ಎಂದು ಹಾಡಿ ಹೊಗಳುತ್ತಾರೆ. ಅವರ ಮುನ್ನುಡಿಯ ಹಲವು ಮಾತುಗಳು ಹೀಗಿವೆ:

"ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಸಂಚರಿಸಿ, ವೇದಗಳಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ಖಂಡಿಸಿ, ಜನರನ್ನು ಸನ್ಮಾರ್ಗದಲ್ಲಿ ನಡೆಸಿದ ಅವರಿಗೆ ಭಾರತ ಭೂಮಿ ಎಷ್ಟೋ ಕೃತಜ್ಞವಾಗಿರಬೇಕು... ವೈದಿಕ ಧರ್ಮದ ಶ್ರೇಷ್ಠತೆಯನ್ನೂ, ಧರ್ಮಧ್ವಜವನ್ನೂ ಎತ್ತಿಹಿಡಿದರು..... ಸೌಂದರ್ಯ ಲಹರಿಯ ಶ್ಲೋಕಗಳ ಪಾರಾಯಣದಿಂದ ವಿದ್ಯೆ ಧನ ಮೊದಲಾದ ಸಂಪತ್ತು, ಮೋಕ್ಷಕ್ಕೆ ಸಾಧನವಾದ ಭಕ್ತಿಯೂ ದೊರೆಯುತ್ತದೆ...."

ಹೀಗೆ ಸಾಗುತ್ತದೆ ಶ್ರೀನಿಧಿ ಶರ್ಮರವರ ಉಘೇ, ಉಘೇ....

ಇಷ್ಟೆಲ್ಲ ಪೀಠಿಕೆ ಏಕೆ ಎಂಬುದಕ್ಕೆ ಬರುವ ಮುನ್ನ ಈ ಸೌಂದರ್ಯ ಲಹರಿ ರಚನೆಗೊಂಡ ಸಂದರ್ಭದ ಬಗ್ಗೆಯೂ ಹೇಳುವುದು ಅತ್ಯವಶ್ಯಕ. ಶ್ರೀನಿಧಿಶರ್ಮರವರೇ ತಮ್ಮ ಈ ಪುಸ್ತಕದಲ್ಲಿ ಹೇಳಿರುವಂತೆ ಶಂಕರಾಚಾರ್ಯನ ತಂದೆಗೆ ಒಮ್ಮೆ ದೇವೀ ಪೂಜೆಗೆ ಹೋಗಲಾಗುವುದಿಲ್ಲ, ಆಗ ಅವರು ದೇವಿಯ ಅಭಿಷೇಕಕ್ಕೆ ಬೇಕಿದ್ದ ಹಾಲನ್ನು ಶಂಕರನಿಗೆ ಕೊಟ್ಟು ಕಳುಹಿಸಿದರು. ಬಾಲಕ ಶಂಕರ ಹಾಲನ್ನು ದೇವಿಯ ವಿಗ್ರಹದ ಮುಂದೆ ಇಟ್ಟು ಕುಡಿಯುವಂತೆ ಪ್ರಾರ್ಥಿಸಿದ. ಬಹಳ ಹೊತ್ತಾದರೂ ದೇವಿ ಹಾಲು ಕುಡಿಯದಿದ್ದಾಗ ಶಂಕರ ಅಳಲಾರಂಭಿಸಿದ.

"ಆಗ ದಯಾಪೂರಿತಳಾದ ದೇವಿಯು ಪ್ರತ್ಯಕ್ಷಳಾಗಿ ಹಾಲನ್ನು ಸಂಪೂರ್ಣವಾಗಿ ಕುಡಿದಳು. ಪಾತ್ರೆಯಲ್ಲಿ ಏನೂ ಉಳಿಯಲಿಲ್ಲ, ಬಾಲಕನು ತನಗೇನೂ ಉಳಿದಿಲ್ಲವೆಂದು ಮತ್ತೆ ಅಳಲಾರಂಭಿಸಿದಾಗ ದೇವಿಯು ನಸುನಕ್ಕು ಮಗುವನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಸ್ತನ್ಯಪಾನ ಮಾಡಿಸಿದಳು. ಆಗ ಕೂಡಲೇ ಮಗು ಶಂಕರನಿಗೆ ಸಕಲ ವಿದ್ಯೆಯೂ ಕರಗತವಾಯಿತು. ಸೌಂದರ್ಯ ಲಹರಿ ಸ್ತೋತ್ರವು ಆತನ ಬಾಯಿಂದ ತಂತಾನೇ ಹೊರಹೊಮ್ಮಿತು." ಇದಿಷ್ಟು ಪುರಾಣ.

ಈಗ ಸ್ವಲ್ಪ ತಡವಾಗಿಯಾದರೂ ಮುಖ್ಯ ವಿಷಯಕ್ಕೆ ಬರುವ. ನೆನಪಿಡಿ, ಒಂದೆಡೆ ನಗ್ನ ಹಿಂದೂ



ದೇವತೆಗಳನ್ನು ಚಿತ್ರಿಸಿದ್ದಕ್ಕೆ ಅವಮಾನ, ಇನ್ನೊಂದೆಡೆ ತಾಯಿಗೆ ಗೌರವ ಕೊಡಲೆಂದೆ ಸೌಂದರ್ಯ ಲಹರಿಯ ಶ್ಲೋಕಗಳ ಪಠಣ. ಈಗ ಈ ಶ್ಲೋಕಗಳು ಏನನ್ನು ಹೇಳುತ್ತವೆ ಎಂದು (ಶ್ರೀನಿಧಿಶರ್ಮರವರೇ ಅನುವಾದಿಸಿರುವಂತೆ) ನೋಡುವ.

ಮಹತ್ರಿಪುರ ಸುಂದರಿಯ ವರ್ಣನೆಯಿಂದ ಪ್ರಾರಂಭವಾಗುವ 'ಸೌಂದರ್ಯ ಲಹರಿ' ಶಿವನಲ್ಲಿ ಆಕೆ ಹೇಗೆ ಮೋಹವನ್ನುಂಟುಮಾಡಿದಳು ಎಂದು ವಿವರಿಸಿ, ಏಳನೇ ಶ್ಲೋಕದಲ್ಲೇ "ಮರಿಯಾನೆಯ ಕುಂಭಸ್ಥಳದಂತಿರುವ ಆಕೆಯ ಸ್ತನಗಳು ಭಾರದಿಂದ ತುಸುಬಾಗಿದೆ" ಎಂದು ವರ್ಣಿಸುತ್ತದೆ.

ಬಾಲಕ ಶಂಕರ ತಾಯಿ ಜಗನ್ಮಾತೆಯ ಅಂಗಾಂಗಗಳನ್ನು ಹೀಗೆ ರಸವತ್ತಾಗಿ ವರ್ಣಿಸುತ್ತಾ ಸಾಗುತ್ತಾನೆ. ಹಲವಾರು ಸ್ಯಾಂಪಲ್‌ಗಳು ಇಲ್ಲಿವೆ:

* ಹೇ ಗಿರಿಜೇ! ನಿನ್ನ ಚೆಲುವನ್ನು ಬಣ್ಣಿಸಲು ಬ್ರಾಹ್ಮಣೇ ಮೊದಲಾದ ಕವೀಶ್ವರರಿಗೂ ಸಾಧ್ಯವಿಲ್ಲ, ಅಪ್ಸರೆಯರು ನಿನ್ನ ಸೌಂದರ್ಯವನ್ನು ನೋಡಿ ನಾಚಿಕೆ ಹೊಂದುತ್ತಾರೆ. ಅವರೂ ಸಹ ಶಿವನ ಸಂಗ ಸುಖವನ್ನು ಬಯಸುತ್ತಾರೆ. (ಶ್ಲೋ. 12).

* ಹೇ ಭಗವತಿ! ಮುಪ್ಪಿನ ವ್ಯಕ್ತಿಯೂ ಕುರೂಪಿಯೂ ಸಹ ನಿನ್ನ ಕೃಪಾಕಟಾಕ್ಷದಿಂದ ನವಯುವತಿಯರನ್ನು ಆಕರ್ಷಣೆ ಮಾಡುವ ಮನ್ಮಥಾಕಾರನಾಗಿ ಬಿಡುತ್ತಾರೆ (ಶ್ಲೋ. 13).

* ಹೇ ಭಗವತಿ! ನಿನ್ನ ಶರೀರ ಕಾಂತಿಯು ಬಾಲಸೂರ್ಯನ ಕಿರಣದಂತಿದೆ. ಈ ಕಾಂತಿಯಂತಹ ಅರಗಿನ ಸಮುದ್ರದಲ್ಲಿ ಮುಳುಗಿ ನಿನ್ನ ನಾಮ ಸ್ಮರಣೆಯನ್ನು ಮಾಡುವವರಿಗೆ ಅಪ್ಸರೆಯರೂ ಮರುಳಾದಾರು (ಶ್ಲೋ 18).

* ಹೇ ಪಾರ್ವತಿ! ಯಾವ ಸಾಧಕನು ತನಗೆ ವಶಳಾಗಬೇಕಾದ ಸ್ತ್ರೀಯ ಅವಯವಗಳನ್ನು ಧ್ಯಾನಿಸಿ, ನಿನ್ನ ಕಾಮ ಬೀಜಾಕ್ಷರವನ್ನು ಜಪಿಸಿದರೆ ಆಕೆಯು ಆತನಿಗೆ ತಕ್ಷಣ ವಶಳಾದಾಳು. ಆದರೆ ಇದು ತುಂಬಾ ಕ್ಷುಲ್ಲಕವಾದುದು. ಏಕೆಂದರೆ ಸೂರ್ಯ-ಚಂದ್ರರೇ ಸ್ತನಗಳಾಗಿ ಉಳ್ಳ ನಿನ್ನ ರೂಪವು ಮೂರು ಲೋಕವನ್ನು ಮೋಹಿಸುತ್ತದೆ." (ಶ್ಲೋ 19)

ಈ ಸಾಲುಗಳನ್ನು ಓದಿದಾಗ ಏನನ್ನಿಸುತ್ತದೆ? ಈ ಶ್ಲೋಕಗಳಿಗೂ, ವಿದ್ಯೆಗೂ ಯಾವ ಸಂಬಂಧ? ಬಾಲಕನೊಬ್ಬ ತಾಯಿಯನ್ನು ಬಣ್ಣಿಸುವ ರೀತಿಯೇ ಇದು? ಇದಿಷ್ಟು ಸಾಲದೆಂಬಂತೆ ಶ್ಲೋಕ 41 ರಿಂದ ಶ್ಲೋಕ 99 ರವರೆಗೆ ಆಕೆಯ ಕಿರೀಟದಿಂದ ಪ್ರಾರಂಭಿಸಿ ಅವಳ ಪಾದಗಳ ತನಕವಿರುವ ವರ್ಣನೆಯಂತೂ ವಿಕೃತಕಾಮದ ಉದಾಹರಣೆಗಳಂತಿವೆ. ಹಲವು ಸ್ಯಾಂಪಲ್‌ಗಳು:

* ಹೇ ಸುಂದರ ದಂತವುಳ್ಳ ಭಗವತಿ! ಸಹಜವಾಗಿಯೇ ಕೆಂಪಾಗಿರುವ ನಿನ್ನ ತುಟಿಯ ಸೊಬಗನ್ನು ಏನೆಂದು ಬಣ್ಣಿಸಲಿ? ಅದು ಹವಳದಂತಿದೆ ಎನ್ನುವುದಾದರೆ ಹವಳದ ಬಳ್ಳಿ ಹಣ್ಣು ಬಿಡುವುದಂತೆ. ಇದು ಸರಿಯಲ್ಲ. ತೊಂಡೆ ಹಣ್ಣಿನಂತಿದೆ ಎನ್ನುವುದಾದರೆ ಈ ತುಟಿಗಳು ಪ್ರತಿಫಲಿಸುತ್ತದೆ ಆದ್ದರಿಂದ ಇವೆರಡೂ ಸರಿಯಾದ ಹೋಲಿಕೆಗಳಲ್ಲ ಎಂದು ಮಾತ್ರ ಹೇಳಬಹುದು. ಶ್ರೀದೇವಿಯ ತುಟಿ ಅಸಮಾನ ಸುಂದರವಾಗಿದೆ. (ಶ್ಲೋ. 61).

* ಹೇ ಮಂಗಳಕರಳಾದ ಮಾತೆ! ಕೃಶವಾದ ನಿನ್ನ ನಡುವಿನಲ್ಲಿ ಯಮುನೆಯ ಸಣ್ಣ ತೆರೆಯ ಆಕಾರದಂತಿರುವ ಕಪ್ಪನೆಯ ರೋಮಾವಲಿಯು ಎರಡು ಸ್ತನಗಳ ಪರಸ್ಪರ ಉಜ್ಜುವಿಕೆಯಿಂದ ಉಂಟಾದ ನೀಲಾಕಾಶದಂತೆ ಗೋಚರಿಸಿ, ನಾಭಿಯೆಂಬ ಬಲವನ್ನು ಪ್ರವೇಶಿಸುವಂತಿದೆ (ಶ್ಲೋ. 76).

* ಹೇ ಪಾರ್ವತಿ! ಹಿಮವಂತನು ತನ್ನ ಗಿರಿಯ ಅಗಲವಾದ ಪ್ರದೇಶವನ್ನಾಯ್ದು ಶಿವನಿಗೆ ವಿವಾಹ ಸಮಯದಲ್ಲಿ ಬಳುವಳಿಯಾಗಿ ಕೊಟ್ಟನು. ಆದುದರಿಂದಲೇ ನಿನ್ನ ವಿಸ್ತಾರವಾದ ನಿತಂಬವು ಸಕಲ ಭೂಪ್ರದೇಶವನ್ನು ಮುಚ್ಚುತ್ತದೆ. (ಶ್ಲೋ 80).

ಸಮಂ ದೇವಿ ಸ್ಕಂದದ್ವಿಪವದನಪೀತಂ ಸ್ತನಯುಗಂ
ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಂ ।
ಯದಾಲೋಕ್ಯಾಶಂಕಾಕುಲಿತ ಹೃದಯೋ ಹಾಸಜನಕಃ
ಸ್ವಕುಂಭೌ ಹೇರಂಬಃ ಪರಿಮೃಶತಿ ಹಸ್ತೇನ ಝಡಿತಿ ॥೭೨॥

—ಹೇ ದೇವಿ! ಗಣಪತಿ, ಷಣ್ಮುಖರು ಸಮವಾಗಿ ಹಾಲು ಕುಡಿದ ನಿನ್ನ ಸ್ತನಗಳು ನನ್ನ ಮನಸ್ಸಿನ ತಾಪವನ್ನು ಬಗೆಹರಿಸಲಿ. ಈ ಸ್ತನಗಳನ್ನು ನೋಡಿದ ಗಜಮುಖನು ತನ್ನ ಕುಂಭಸ್ಥಳಗಳೇನಾದರೂ ಅಪಹೃತವಾಯಿತೇನೋ ಎಂದು ಭ್ರಮಿಸಿ, ತಡವಿಕೊಂಡು ತಂದೆತಾಯಿಗಳ ತಮಾಷೆಗೀಡಾದನು.

* ಹೇ ಗಿರಿಸುತೆ! ವೇದಗಳ ಅರ್ಥವನ್ನು ಬಲ್ಲವಳೆ, ನಿನ್ನ ಎರಡು ತೊಡೆಗಳೂ ಚಿನ್ನದ ಬಾಳೆಯ ಕಂಬಗಳಂತಿವೆ. ಮೊಣಕಾಲುಗಳು ಶಿವನಿಗೆ ನಮಸ್ಕರಿಸುತ್ತಾ ಒರಟಾಗಿವೆ. ಅದು ದಿಗ್ಗಜಗಳ ಕುಂಭಸ್ಥಳಗಳನ್ನು ಗೆದ್ದಿವೆ. (ಶ್ಲೋ 81).

* ಹೇ ಪಾರ್ವತಿ! ಮನ್ಮಥನು ಶಿವನನ್ನು ಗೆಲ್ಲಲು ತನ್ನ ಐದರಲ್ಲಿ ಎರಡು ಬಾಣಗಳನ್ನು ನಿನ್ನ ಜಂಘೆಯಲ್ಲಿ ಹೂಡಿದನು. ನಿಜವಾಗಿಯೂ ಅವು ಇಂದ್ರಾದಿ ದೇವತೆಗಳ ಕಿರೀಟವೆಂಬ ಸಾಣೆಯಿಂದ ಮೊನೆಯಾಗಿ, ಹತ್ತು ಬಾಣಗಳ ಅಲಗಾಗಿ ಕಾಣುತ್ತವೆ. (ಶ್ಲೋ. 82).

* ತ್ರಿಪುರಸುಂದರಿಯ ಕೇಶದಮುಂಗುರುಗಳು ಗುಂಗುರಾಗಿವೆ, ಮುಗುಳುನಗೆಯ ಸ್ವಭಾವದ ಸಹಜವಾಗಿಯೇ ಮನೋಹರವಾಗಿದೆ. ದೇಹವು ಬಾಗೆಹೂವಿನ ಹಾಗೆ ಮೃದುವಾಗಿದೆ. ಸ್ತನಗಳು ಅಸಿಕಲ್ಲಿನಂತೆ ಕಠಿಣವಾಗಿದೆ. ನಡುವು ಕೃಶವಾಗಿ, ವೃಕ್ಷ ಸ್ಥಳವು ವಿಶಾಲವಾಗಿದೆ (ಶ್ಲೋ 92).

ಇದನ್ನು ಓದಿದ ನಂತರ ಹಲವಾರು ಪ್ರಶ್ನೆಗಳು ಕಾಡಿದವು. ಮೊದಲನೆಯದಾಗಿ ಶ್ರೀನಿಧಿಶರ್ಮರವರು ಹೇಳಿರುವಂತೆ "ದೇವಿಯ ಸ್ತನ್ಯಪಾನ ಮಾಡಿದ ಕೂಡಲೇ ಮಗು ಶಂಕರನಿಗೆ ಸಕಲ ವಿದ್ಯೆಯೂ ಕರಗತವಾಯಿತು" ಎಂಬುದಕ್ಕೆ ಇದರಲ್ಲಿ ಯಾವ ಉದಾಹರಣೆಗಳೂ ಇಲ್ಲ. ಸ್ವತಃ ಶಂಕರಾಚಾರ್ಯನೇ ರಚಿಸಿರುವ ನೂರು ಶ್ಲೋಕಗಳಲ್ಲಿ ವಿದ್ಯೆಗೆ ಸಂಬಂಧಪಟ್ಟದ್ದು, ಐದಾರು ಶ್ಲೋಕಗಳು ಮಾತ್ರ.

ಎರಡನೆಯದಾಗಿ, ಇದನ್ನು ಪಠಿಸುವುದರ ಮೂಲಕ ಹೇಗೆ ತಾಯಿಯ ಬಗ್ಗೆ ಗೌರವ ಹೆಚ್ಚಾಗುತ್ತದೆ ಎಂಬ ಪ್ರಶ್ನೆ? ಈಗಾಗಲೇ ನೀಡಿರುವ ಉದಾಹರಣೆಗಳಲ್ಲದೆ, ಶ್ಲೋ 11 ರಲ್ಲೇ ದೇವಿಯ ಯೋನಿಯ ಬಗ್ಗೆ ಚಿಂತಿಸುವ, ಶ್ಲೋಕ 41 ರಿಂದ ಶ್ಲೋಕ 99 ರವರೆಗೆ ಆಕೆಯ ಅಂಗಾಂಗಗಳನ್ನು ರೋಚಕವಾಗಿ ವಿವರಿಸುವ ಶಂಕರಾಚಾರ್ಯನ ಈ ಕೃತಿ ಹೇಗೆ ಮಾನವನ ಕಷ್ಟಗಳಿಗೆ ಪರಿಹಾರವನ್ನು ನೀಡುತ್ತವೆ?

ಅಂದಹಾಗೆ, ಈ ಸೌಂದರ್ಯ ಲಹರಿಯನ್ನು ಪಠಿಸುವ ಮೂಲಕ ಮಕ್ಕಳಲ್ಲಿ, ಯುವಜನರಲ್ಲಿ ತಾಯಿಯರ ಬಗ್ಗೆ ಗೌರವ ಹೆಚ್ಚಾಗುತ್ತವೆ ಎನ್ನುವುದು ನಿಜವಾದರೆ ಇದನ್ನು ಆ ಮಕ್ಕಳು ಮತ್ತು ಯುವಜನರಿಂದ ಪಠಿಸಬೇಕಿತ್ತಲ್ಲವೇ? ಅದರ ಬದಲಾಗಿ ಈಗಾಗಲೇ ತ್ಯಾಗಮೂರ್ತಿಗಳಾಗಿರುವ ಮಾತೆಯರಿಂದ ಪಠಿಸುವುದು ಯಾವ ಪುರುಷಾರ್ಥಕ್ಕೆ?

ಒಂದು ವೇಳೆ, ಈ ಶ್ಲೋಕಗಳನ್ನು 'ಮಾತೆ'ಯರಾದ ತಾಯಂದಿರ ಬದಲಾಗಿ ಮಕ್ಕಳಿಂದ, ಯುವ ಜನರಿಂದ ಪಠಿಸಿದರೆ ಏನಾಗುತ್ತದೆ ಯೋಚಿಸಿ. ವಯಸ್ಸಿಗೆ ಸಹಜವಾದ ಕುತೂಹಲದಿಂದ ಅವರು ಇದರಲ್ಲಿನ ಕಾಮಭರಿತ ಶ್ಲೋಕಗಳನ್ನು ಪ್ರಶ್ನಿಸಲಾರಂಭಿಸಿದರೆ ಅಥವಾ ಸ್ಫೂರ್ತಿಗೊಂಡು ಯಾವುದೋ ಹಲ್ಕ ಕೆಲಸಕ್ಕೆ ಕೈಹಾಕಿದರೆ ಎಂತಹ ದುರಂತಗಳು ಸಂಭವಿಸಬಹುದು?

ಸಂಸ್ಕೃತ ಪಂಡಿತರಾಗಿರುವ ಶೃಂಗೇರಿಯ ಸ್ವಾಮಿಗಳಿಗೆ 'ಸೌಂದರ್ಯ ಲಹರಿ'ಯಲ್ಲಿನ ಶ್ಲೋಕಗಳ ನಿಜ ಅರ್ಥ ಗೊತ್ತಿಲ್ಲದಿರಲು ಸಾಧ್ಯವಿಲ್ಲ. ಆದರೂ ಮಹಿಳೆಯೋರ್ವಳ ಅದೂ-'ಜಗನ್ಮಾತೆ'ಯ- ಅಂಗಾಂಗಗಳನ್ನು ಹೀಗೆ ವಿಕೃತವಾಗಿ ಬಣ್ಣಿಸುವ ಈ ಶ್ಲೋಕಗಳನ್ನು ಸಹಸ್ರಾರು ಮಹಿಳೆಯರಿಂದ ಸಾರ್ವಜನಿಕವಾಗಿ ಯಾಕೆ ಪಠಿಸುತ್ತಾರೆ? ಅದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ?

(೯ನೇ ಪುಟಕ್ಕೆ)


ಶೆಟ್ಟಿಯ ಫಿಟ್ಟಿಂಗ್! ಖಾದರ್‌ಗೆ ಉಕ್ಕಿನ ಕಡಲೆ

ದಿನದಿಂದ ದಿನಕ್ಕೆ ಉಳ್ಳಾಲ ಉಪ ಚುನಾವಣಾ ಕಾವು ಏರುತ್ತಿದ್ದು, ರಾಜ್ಯ ರಾಜಕಾರಣವೇ ಉಳ್ಳಾಲದ ಕಡಲತಡಿಗೆ ಶಿಫ್ಟ್ ಆದಂತಹ ವಾತಾವರಣ ಮೂಡಿದೆ. ಮಂತ್ರಿ ಮಹೋದಯರ ದಂಡೇ ಉಳ್ಳಾಲದ ಕೇರಿಗಳಲ್ಲಿ ನಿತ್ಯ ಮೆರವಣಿಗೆ ನಡೆಸುತ್ತಾ ಸುದ್ದಿ ಮಾಡುತ್ತಿದ್ದಾರೆ. ಈ ಮಧ್ಯೆ ಮಂತ್ರಿ ನಾಗರಾಜ ಶೆಟ್ಟಿಯ ಫಿಟ್ಟಿಂಗ್‌ಗಳು ಖಾದರ್‌ಗೆ ಉಕ್ಕಿನ ಕಡಲೆಯಾಗಿ ಪರಿಣಮಿಸಿದೆ..

ಉಳ್ಳಾಲ ಉಪ ಚುನಾವಣೆ


ಉಳ್ಳಾಲದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿಯ ಗೆಲುವು ಈಗ ಜೆಡಿಎಸ್ ಕೈಯಲ್ಲಿದೆ ಎಂದರೆ ನಂಬುತ್ತೀರಾ? ಜೆಡಿಎಸ್‌ನ ಅಭ್ಯರ್ಥಿ ಅಬೂಬಕರ್ ನಾಟೇಕಲ್ ತಾನು ಗೆದ್ದೇ ಬಿಡ್ತೇನೆಂಬ ಹುಚ್ಚು ಆತ್ಮವಿಶ್ವಾಸದಿಂದ "ಇಲ್ಲಿ ಸ್ಪರ್ಧೆಯೇನಿದ್ದರೂ ನಮಗೆ ಮತ್ತು ಬಿಜೆಪಿಗೆ" ಎನ್ನುವುದು ಜೋಕ್ ಅನ್ನಿಸುತ್ತಿದ್ದರೂ, ನಾಟೇಕಲ್‌ನನ್ನು ಕಾಂಗ್ರೆಸ್ ತೀರಾ ಜೋಕ್ ಆಗಿ ತೆಗೆದುಕೊಳ್ಳುವ ಪರಿಸ್ಥಿತಿ ಸದ್ಯಕ್ಕಿಲ್ಲ. ಮುಖ್ಯಮಂತ್ರಿ ಕುಮಾರಸ್ವಾಮಿ ಮೂರು ದಿನ ಮೊಕ್ಕಾಂ ಹೂಡಿದ ನಂತರ ಪರಿಸ್ಥಿತಿ ಏನಾಗುತ್ತದೋ ಕಾದು ನೋಡಬೇಕಾಗಿದೆ. ತಂದೆ ಫರೀದರ ಉತ್ತರಾಧಿಕಾರಿಯಾಗಿ ಕ್ಷೇತ್ರವನ್ನು ಮುನ್ನಡೆಸಿದ ಯು.ಟಿ. ಖಾದರ್ ಕ್ಷೇತ್ರದಾದ್ಯಂತ ಚಿರಪರಿಚಿತ. ಪ್ರೊಲೀಸ್ ಹಾಗೆ ಪಾಲಿಟಿಕ್ಸ್‌ನಲ್ಲಿ ಒಂದಷ್ಟು ಹೆಸರು ಕೆಡಿಸಿಕೊಂಡದ್ದನ್ನು ಬಿಟ್ಟರೆ ಉಳ್ಳಾಲ ಕ್ಷೇತ್ರದಲ್ಲಿ ಸದ್ಯದ ಮಟ್ಟಿಗೆ ಬಿಜೆಪಿಗೆ ತಕ್ಕ ಪ್ರತಿಸ್ಪರ್ಧಿ ಖಾದರ್ ಬಿಟ್ಟರೆ ಇನ್ನೊಬ್ಬನಿಲ್ಲ. ಜತೆಗೆ ತೀರಿ ಹೋದ ಅಪ್ಪನ ಅನುಕಂಪದ ಅಲೆಯೂ ಬೆನ್ನಿಗಿದೆ.

ಜೆಡಿಎಸ್ ಇಲ್ಲಿ ಸ್ಪರ್ಧಿಸದೇ ಇದ್ದರೆ ಖಾದರ್‌ನ ಗೆಲುವು ನಿರಾಯಾಸವಾಗಿ ಆಗುತ್ತಿತ್ತು. ಮೊದಮೊದಲಿಗೆ ಜೆಡಿಎಸ್‌ಗೆ ಉಳ್ಳಾಲದಲ್ಲಿ ಕ್ಯಾಂಡಿಡೇಟ್ ಹಾಕುವ ಉಸಾಬರಿಯೇ ಇರಲಿಲ್ಲ, ಅದು ಇಲ್ಲಿ ಒಂದು ನೆಲೆ ಹೊಂದಿರುವ ಸಿಪಿಎಂಗೆ ಬೆಂಬಲಿಸುವ ಆಸೆ ಹೊಂದಿತ್ತು. ಆದರೆ ಸಿಪಿಎಂ ಜೆಡಿಎಸ್ ಜತೆ ಗುರುತಿಸಿಕೊಳ್ಳಲು ತಯಾರಿರಲಿಲ್ಲ. ಅದೇ ಹೊತ್ತಿಗೆ ಜೆಡಿಎಸ್‌ನೊಳಗೆ ಚರ್ಚೆಯಾಗಿ ಮುಸ್ಲಿಮರನ್ನು ಬಿಟ್ಟರೆ ಇಲ್ಲಿ ಬಹುಸಂಖ್ಯಾತ ಓಟ್ ಬ್ಯಾಂಕ್ ಆಗಿರುವ ಬಿಲ್ಲವರ ಪ್ರತಿನಿಧಿಯಾಗಿ ಗಂಗಾಧರ ಉಳ್ಳಾರನ್ನು ಕಣಕ್ಕಿಳಿಸಲು ಚರ್ಚೆಗಳು ಶುರುವಾದವು.


ಚಂದ್ರಶೇಖರ್

ಇದು ತಿಳಿಯುತ್ತಲೇ ಗಾಬರಿ ಬಿದ್ದದ್ದು ಮಾತ್ರ ಬಿಜೆಪಿಗರು. ಗಂಗಾಧರ ಉಳ್ಳಾಲ ಸ್ಪರ್ಧಿಸಿದರೆ ಬಿಲ್ಲವರ ಮತಗಳಿಗೆ ಕನ್ನ ಬಿದ್ದು ಬಿಜೆಪಿ 'ಬೀದಿ ಪಾಲಾಗುವುದು ಗ್ಯಾರಂಟಿ. ತಕ್ಷಣವೇ ಚುರುಕಾದ ಮಂತ್ರಿ ನಾಗರಾಜಶೆಟ್ಟಿ ಕಾರವಾರದಲ್ಲಿ ಗ್ರಾಮ ವಾಸ್ತವ್ಯ ಹೂಡಿದ ಮುಖ್ಯಮಂತ್ರಿ ಕುಮಾರಣ್ಣನನ್ನು ಕಾಣಲು ದೌಡಾಯಿಸಿತು. ಕುಮಾರಣ್ಣನ ಮುಂದೆ ತಲೆಬಾಗಿದ ಶೆಟ್ಟಿ ಕೊನೆಗೂ ಗಂಗಾಧರ ಉಳ್ಳಾಲ ಅಭ್ಯರ್ಥಿಯಾಗುವುದನ್ನು ತಪ್ಪಿಸಿ ಅಬೂಬಕ್ಕರ್ ನಾಟೇಕಲ್ ಎಂಬ ಹಣದ ಮರವನ್ನು ಜೆಡಿಎಸ್ ಕ್ಯಾಂಡಿಡೇಟ್ ಮಾಡಲು ಯಶಸ್ವಿಯಾಗಿದೆ.


ಅಬೂಬಕ್ಕರ್ ನಾಟೇಕಲ್ ನಾಮಪತ್ರ ಸಲ್ಲಿಸುತ್ತಲೇ ಬಿಜೆಪಿಯ ಅರ್ಧ ಕೆಲಸ ಸಮಾಪ್ತಿಯಾಗಿದೆ. ಕಳೆದ ಬಾರಿ ಕಾಂಗ್ರೆಸ್‌ನ ಗೆಲುವಿನ ಅಂತರ ಬರಿ 7 ಸಾವಿರ ಮತಗಳು. ಆಗ ಬಿಜೆಪಿಯ ಜಯರಾಂ ಶೆಟ್ಟಿ ಜೆಡಿಎಸ್‌ನಿಂದ ಸ್ಪರ್ಧಿಸಿ 8184 ಮತಗಳನ್ನು ಪಡೆದಿದ್ದರು. ಇದೀಗ ಆಗ ಮತ್ತೆ ಬಿಜೆಪಿಗೆ ಹೋಗಿದ್ದಾರೆ ಎನ್ನುವುದು ಕಾಂಗ್ರೆಸ್‌ಗೆ ನೆಗೆಟಿವ್. ಜತೆಗೆ ಕಣಚ್ಚೂರು, ಮೋನು, ಕೋಡಿಜಾಲ್ ಇಬ್ರಾಹಿಂ, ಸಿ.ಎಂ. ರಹೀಂನಂತಹ ಟಿಕೆಟ್ ಸಿಗದ ಸಿಡುಕರು ಸುಮ್ಮನೆ ಕೂರುವ ಜಾಯಮಾನದವರಲ್ಲ.



ಈ ಬಾರಿ ಖಾದರ್ ಗೆದ್ದದ್ದೇ ಆದರೆ ಮುಂದೆ 20 ವರ್ಷಕ್ಕೆ ಆತನನ್ನು ಅಲುಗಾಡಿಸುವುದಂತೂ ಸಾಧ್ಯವಿಲ್ಲ ಎಂದು ತಿಳಿದ ಸ್ವಜಾತಿ ಪ್ರತಿಸ್ಪರ್ಧಿಗಳೆಲ್ಲಾ ನಾಟೇಕಲ್‌ನ ಬೆನ್ನಿಗಿದ್ದು ಪಿತೂರಿ ನಡೆಸುತ್ತಿರುವ ವರ್ತಮಾನಗಳಿವೆ. ಖಾದರ್‌ನ ವಿರುದ್ಧ ಅಪಪ್ರಚಾರಕ್ಕೆ ಇಳಿದ ಬಿಜೆಪಿಗರಿಗೆ ಈಗ ದೊಡ್ಡ ಅಸ್ತ್ರವಾಗಿರೋದು ಫರೀದ್ ಶಾಸಕತ್ವದ ಕಾಲದಲ್ಲಿ ನಡೆದ ಉಳ್ಳಾಲದ 390 ಆಶ್ರಯ ಮನೆಗಳ ಅವ್ಯವಹಾರ. ತಲಾ 25 ಸಾವಿರ ವೆಚ್ಚದಲ್ಲಿ ಕಟ್ಟಲ್ಪಟ್ಟ ಈ ಹಂದಿಗೂಡಿನಂತಹ ಕಳಪೆ ಗುಣಮಟ್ಟದ ಮನೆಗಳ ನಿರ್ಮಾಣದಲ್ಲಿ 3 ಕೋಟಿಗೂ ಮಿಕ್ಕಿ ಅವ್ಯವಹಾರವಾಗಿದ್ದು ಇದರ ಗುತ್ತಿಗೆದಾರ ಫರೀದರ ಹಿಂಬಾಲಕನೇ ಆಗಿರುವ ಮಂಗಳೂರು ಕನ್‌ಸ್ಟ್ರಕ್ಷನ್‌ನ ಹಮೀದ್. ಇವತ್ತಿಗೂ ವಾಸ್ತವ್ಯಕ್ಕೆ ನಾಲಾಯಕ್ ಆದ ಈ ಮನೆಗಳು ಶಿಥಿಲಾವಸ್ಥೆಯಲ್ಲಿ ಅವ್ಯವಹಾರಕ್ಕೆ ನಿದರ್ಶನವಾಗಿ ಅಲ್ಲಿವೆ. ಬಿಜೆಪಿ ಇದನ್ನು ತಮ್ಮ ಚುನಾವಣಾ ಪ್ರಚಾರದಲ್ಲಿ ಹೈಲೈಟ್ ಮಾಡುತ್ತಿದೆ.

ಹಾಗಂತ ಬಿಜೆಪಿ ಕ್ಯಾಂಡಿಡೇಟ್ ಚಂದ್ರಶೇಖರ್ ಉಚ್ಚಿಲನೇನೂ ಸಾಚಾ ವ್ಯಕ್ತಿಯಲ್ಲ, ಈತ ಈ ಹಿಂದೆ ಸೋಮೇಶ್ವರ ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷನಾಗಿದ್ದಾಗ ಒಂದು ಕೋಟಿ ಅವ್ಯವಹಾರದ ಆರೋಪ ಹೊತ್ತಿದ್ದ, ಈ ಬಗ್ಗೆ ಇಲಾಖಾ ತನಿಖೆ ಕೂಡಾ ಆಗಿತ್ತು. ಭಜರಂಗಿಗಳ ಲೀಡರ್ ಆಗಿಯೇ ದನ ಸಾಗಾಟದ ವಾಹನಗಳನ್ನು ಹಿಡಿಯುವುದು, ಸಾಬಿಗಳನ್ನ ಬಡಿಯುವುದು ಮಾಡಿಯೇ ಮೇಲಕ್ಕೆ ಬಂದವ. ಕ್ರಿಮಿನಲ್ ಹಿನ್ನೆಲೆಯ ಚಂದ್ರಶೇಖರ್ ಉಚ್ಚಿಲನ ಮೇಲೆ ಮಾರಣಾಂತಿಕ ಹಲ್ಲೆ ನಡೆದ ಮೇಲೆಯೇ ಆತನ ಇಮೇಜ್ ಹೆಚ್ಚಿ ಬಿಜೆಪಿಯ ಅಭ್ಯರ್ಥಿಯಾಗುವಲ್ಲಿ ಯಶಸ್ವಿಯಾಯಿತು.


ಅಂತಹುದರಲ್ಲಿ ಅಬೂಬಕ್ಕರ್ ನಾಟೇಕಲ್ ವ್ಯಕ್ತಿಗತವಾಗಿ ಕೊಂಚ ಪರವಾಗಿಲ್ಲ, ಬೇಸಿಗೆ ಜತೆಗೆ ನೀರಿನ ಬರಕ್ಕೆ ಈಡಾಗುವ ಮಂಜನಾಡಿ-ನಾಟೇಕಲ್ ಪ್ರದೇಶದ ಮೂರ್‍ನಾಲ್ಕು ಗ್ರಾಮಗಳಿಗೆ ತನ್ನ ಸ್ವಂತ ಖರ್ಚಿನಲ್ಲಿ ನೀರು ಸರಬರಾಜು ಮಾಡಿ, ಸ್ಥಳೀಯ ಬಡ ಮಕ್ಕಳಿಗೆ ಉಚಿತ ಬಟ್ಟೆ ಬರೆ, ಪುಸ್ತಕಗಳನ್ನು ಹಂಚುವುದು, ಮಂಜನಾಡಿ ಗ್ರಾಮದಲ್ಲಿ 50 ಬಡ ನಿರ್ಗತಿಕರಿಗೆ ಮನೆ ಕಟ್ಟಿಕೊಟ್ಟು ಯಾವುದೇ ಫಲಾಪೇಕ್ಷೆಯಿಲ್ಲದೆ ಜನಾನುರಾಗಿಯಾಗಿದ್ದಾರೆ. ಅಬೂಬಕ್ಕರ್ ನಾಟೇಕಲ್ ಅನ್ನು ಆತನ ಊರಲ್ಲಿ ಯಾರೂ ದೂರಿದವರಿಲ್ಲ ಮತ್ತು ಮಂಜನಾಡಿ ಗ್ರಾಮದಲ್ಲಿರುವ ಬಹುತೇಕ ಮನೆಗಳು ಪರ್ತಿಪ್ಪಾಡಿ ಕುಟುಂಬ ಇವರಿಗೆ ನೆಂಟಸ್ತಿಕೆಯಿದೆ. ಅದೆಲ್ಲಾ ಓಟ್‌ಬ್ಯಾಂಕ್ ಆಗಿ ಮಾರ್ಪಟ್ಟದ್ದೇ ಆದರೆ ಬಿಜೆಪಿಗೆ ಲಾಭ. ಆದ್ದರಿಂದಲೇ ಬಿಜೆಪಿಗರು ಚಂದ್ರಶೇಖರ್ ಉಚ್ಚಿಲಗಿಂತ ನಾಟೇಕಲ್‌ನ ಪರ ಮತ ಯಾಚಿಸುವುದರಲ್ಲಿ ಹೆಚ್ಚು ಉತ್ಸುಕರಾಗಿದ್ದಾರೆ.


ಖಾದರ್

ಮುಳುವಾಗಲಿರುವ ಅತಿ ವಿಶ್ವಾಸ

ಜಾತಿ ಲೆಕ್ಕಾಚಾರ ಪ್ರಕಾರ ನೋಡಿದರೆ ಉಳ್ಳಾಲದಲ್ಲಿ ಮುಸ್ಲಿಮರು 60,200, ಕ್ರಿಶ್ಚಿಯನ್ನರು 16,419, ದಲಿತರು 7,571, ಗಟ್ಟಿ 2,019 ಒಟ್ಟು 86,209. ಬಂಟ್ಸ್, ಬಿಲ್ಲವರು, ಮೊಗವೀರ, ಬ್ರಾಹ್ಮಣರು ಸೇರಿ ಹಿಂದೂಗಳು 70, 367. ಹಿಂದೂಗಳ ಎಲ್ಲಾ ಮತ ಬಿಜೆಪಿಗೇ ಬಿದ್ದರೂ ಕಾಂಗ್ರೆಸ್ ಗೆಲುವು ಕಷ್ಟದಾಯಕವಲ್ಲವೆನ್ನುವುದು ಸರಳ ಲೆಕ್ಕಾಚಾರ. ಆದರೆ

ಉಳ್ಳಾಲ: ಯಾರಿಗಿಲ್ಲಿ ಉಳಿಗಾಲ?



ಸೀಟನ್ನು ಕಸಿದುಕೊಳ್ಳಲು ಕಾತರಿಸಿರುವ ಬಿಜೆಪಿ ಮತ್ತು ಚಾಮುಂಡೇಶ್ವರಿಯಲ್ಲಿನ ಸೋಲಿಗೆ ಪ್ರತೀಕಾರದ ಪಣತೊಟ್ಟ ಜೆಡಿಎಸ್ ಈ ಎರಡು ಪಕ್ಷಗಳ ನಡುವೆ ಈ ಬಾರಿ ಕಾಂಗ್ರೆಸ್‌ಗೆ ಉಳ್ಳಾಲದಲ್ಲಿ ಉಳಿಗಾಲ ವಿದೆಯೇ? ಎನ್ನುವ ಪ್ರಶ್ನೆಯೀಗ ಉದ್ಭವಿಸಿದೆ. ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ ಕ್ಷೇತ್ರ ಪುನರ್ ವಿಂಗಡನೆಯ ಪ್ರಕ್ರಿಯೆಯಲ್ಲಿ ಸಿಲುಕಿ ಉಳ್ಳಾಲ ಕ್ಷೇತ್ರವೇ ಮಾಯವಾಗಿ ಮಂಗಳೂರು 2 ಆಗುವುದರಿಂದ ಉಳ್ಳಾಲಕ್ಕಿದು ಕೊನೆಯ ಚುನಾವಣೆ.

ಮೈಮೇಲೆ ನಿಗಾ ಇಲ್ಲದಷ್ಟು ಅನಾರೋಗ್ಯ ಪೀಡಿತರಾಗಿದ್ದ ಯು.ಟಿ. ಫರೀದರಿಗೆ ಕಳೆದ ಬಾರಿ ಮತ್ತೆ ಟಿಕೆಟ್ ಕೊಟ್ಟು ಕಣಕ್ಕಿಳಿಸಿದ್ದು, ಈ ಒಂದು ಉಪಚುನಾವಣೆಗೆ ರಾಜ್ಯವನ್ನು ದೂಡಿದ್ದು ಕಾಂಗ್ರೆಸ್‌ನ ಬೇಜವಾಬ್ದಾರಿತನ. ಇದೀಗ ಇಲ್ಲಿ ಯಾರು ಗೆದ್ದು ಬಂದರೂ ಈತ ತಾತ್ಕಾಲಿಕ ಶಾಸಕ. ಹಾಗಿದ್ದೂ ಭಾವಿ ರಾಜ್ಯ ರಾಜಕೀಯ ದೃಷ್ಟಿಯಲ್ಲಿ ಆದರಲ್ಲೂ ಕರಾವಳಿಯಲ್ಲಿ ಬಿಜೆಪಿಯ ಸಾರ್ವಭೌಮತೆಯ ಮುಂದುವರಿಕೆಗೆ, ಮುಳುಗುವವನಿಗೆ ಹುಲ್ಲುಕಡ್ಡಿಯ ಆಸರೆಯಂತಿದ್ದ ಕಾಂಗ್ರೆಸ್‌ನ ದುಃಸ್ಥಿತಿಗೆ ಉಳ್ಳಾಲ ಉಪಚುನಾವಣೆ ಮಹತ್ವದ ಪೂರ್ವ ತಯಾರಿಯಂತಿದೆ.

ದಿನದಿಂದ ದಿನಕ್ಕೆ ಚುನಾವಣಾ ಕಾವು ಏರುತ್ತಿದ್ದು, ರಾಜ್ಯ ರಾಜಕಾರಣವೇ ಉಳ್ಳಾಲದ ಕಡಲತಡಿಗೆ ಶಿಫ್ಟ್ ಆದಂತಹ ವಾತಾವರಣ ಮೂಡಿದೆ. ಮಂತ್ರಿ ಮಹೋದಯರ ದಂಡೇ ಉಳ್ಳಾಲದ ಕೇರಿಗಳಲ್ಲಿ ನಿತ್ಯ ಮೆರವಣಿಗೆ ನಡೆಸುತ್ತಾ ಸುದ್ದಿ ಮಾಡುತ್ತಿದ್ದಾರೆ. ವಿಪರೀತ ಧಗೆಯಿಂದ ಮುಂಗಾರು ಮಳೆಗೆ ಕಾತರಿಸುವ ಉಳ್ಳಾಲದ ಜನತೆ ಮಾತ್ರ ಇಳೆ ತಂಪಾದರೆ ಸಾಕು ಎಂದು ಗುಸುಗುತ್ತಾರೆಯೇ ವಿನಹ ಈ ಉಪ ಚುನಾವಣೆಯ ಬಗ್ಗೆ ಅಂತಹ ಉತ್ಸಾಹವನ್ನು ತೋರುತ್ತಿಲ್ಲ.

ಉಳ್ಳಾಲದಲ್ಲಿ ಚುನಾವಣೆ ಪರಂಪರೆ

12 ಗ್ರಾಮ ಪಂಚಾಯತ್, ಒಂದು ನಗರ ಸಭೆ, ಒಂಬತ್ತು ಮಸಪಾ ವಾರ್ಡ್‌ಗಳನ್ನೊಳಗೊಂಡ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1,61,070 ಜನ ಮತದಾರರಿದ್ದಾರೆ. ಈ ಪೈಕಿ 79703 ಪುರುಷರು, 81367 ಮಹಿಳೆಯರು. ಒಟ್ಟು ಮತಗಟ್ಟೆಗಳ ಸಂಖ್ಯೆ 140.

ಒಂದು ಕಾಲದಲ್ಲಿ ಮಿನಿ ದುಬೈ ಎನಿಸಿಕೊಂಡಿದ್ದ ಉಳ್ಳಾಲದಲ್ಲಿ ಮುಸ್ಲಿಮರೇ ಬಹುಸಂಖ್ಯಾತರು. ಉಳ್ಳಾಲ ವಿಧಾನಸಭಾ ಕ್ಷೇತ್ರವಾಗಿ ಅಸ್ತಿತ್ವಕ್ಕೆ ಬಂದದ್ದೇ ಕಾಂಗ್ರೆಸ್‌ನಿಂದ ಮುಸ್ಲಿಮರಿಗೆ ಕ್ಷೇತ್ರ ಮೀಸಲುನೀಡುವ ನಿರ್ಧಾರದಿಂದ. ಡಾ. ನಿಜಲಿಂಗಪ್ಪ ರಾಜ್ಯ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಜಿಲ್ಲಾಧ್ಯಕ್ಷ ಕೆ.ಕೆ. ಶೆಟ್ಟಿಯವರ ಪ್ರಯತ್ನದಲ್ಲಿ 1962ರಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬಂತು. ಕನ್ನಡ ಏಕೀಕರಣ ಹೋರಾಟಗಳಲ್ಲಿ ನಿಜಲಿಂಗಪ್ಪನವರಿಗೆ ಆಪ್ತರಾದ ಬಿ.ಎಂ. ಇದಿನಬ್ಬ ಪ್ರಥಮ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿ ಕಣಕ್ಕಿಳಿದಿದ್ದರು. ಮುಸ್ಲಿಮರ ಸಂಖ್ಯಾಬಾಹುಳ್ಯವಿರುವ ಉಳ್ಳಾಲ ಒಂದು ಕಾಲದಲ್ಲಿ ಕಮ್ಯೂನಿಸ್ಟರ ಭದ್ರಕೋಟೆಯೂ ಹೌದು. ಇದಕ್ಕೆ ಕಾರಣ ಇಲ್ಲಿನ ದುಡಿಯುವ ವರ್ಗ, ಹಂಚಿನ ಕಾರ್ಖಾನೆ, ಬೋಟ್ ಫ್ಯಾಕ್ಟರಿ, ಐಸ್‌ಪ್ಲಾಂಟ್‌ಗಳಲ್ಲಿ ಕಾರ್ಮಿಕರಾಗಿರುವವರೇ ಉಳ್ಳಾಲದ ಬಹುಸಂಖ್ಯಾತ ನಿವಾಸಿಗಳು.

60ರ ದಶಕದಲ್ಲಿ 12 ಹಂಚಿನ ಫ್ಯಾಕ್ಟರಿಗಳಿದ್ದ ಉಳ್ಳಾಲದಲ್ಲಿ ಕಾರ್ಮಿಕ ಸಂಘಟನೆ ಸಿಐಟಿಯು ಸದಸ್ಯತ್ವವೇ 16000ದಷ್ಟಿತ್ತು. ಆದ್ದರಿಂದ ಚೊಚ್ಚಲ ಚುನಾವಣೆಯಲ್ಲಿ ಉಳ್ಳಾಲದಲ್ಲಿ ಕಮ್ಯೂನಿಸ್ಟರ ಪ್ರಾಬಲ್ಯದ ನಡುವೆ ಕಾಂಗ್ರೆಸ್‌ಗೆ ಮತಯಾಚಿಸುವುದೇ ಒಂದು ಸಾಹಸವಾಗಿತ್ತು. ಈ ಒಂದು ಕಾಲಘಟ್ಟದಲ್ಲಿ ಸಿಪಿಐಎಂ ಪಕ್ಷದಿಂದ ಸ್ಪರ್ಧಿಸಿದ್ದ ಕೃಷ್ಣಶೆಟ್ಟಿ, 803 ಮತಗಳ ಅಂತರದಿಂದ ಕಾಂಗ್ರೆಸ್‌ನ ಇದಿನಬ್ಬರಿಗೆ ಸೋಲುಣಿಸಿದರು. 1967ರಲ್ಲಿ ಮತ್ತೆ ಇದಿನಬ್ಬ ಕಾಂಗ್ರೆಸ್‌ನಿಂದ ಕಣಕ್ಕಿಳಿದರು. 8000 ಮತಗಳ ಅಂತರದಿಂದ ಕಮ್ಯೂನಿಸ್ಟ ಕ್ಯಾಂಡಿಡೇಟ್ ಕೃಷ್ಣ ಶೆಟ್ಟಿಯನ್ನು ಸೋಲಿಸಿ ಚೊಚ್ಚಲ ಮುಸ್ಲಿಂ ಶಾಸಕನಾಗಿ ವಿಧಾನಸಭೆ ಪ್ರವೇಶಿಸಿದರು.

1947ರಿಂದ 1972ರ ತನಕದ ಅವಧಿಯಲ್ಲಿ ಕಾಂಗ್ರೆಸ್ ರಾಜಕಾರಣದಲ್ಲಿ ಸಂಭವಿಸಿದ ರಾಜಕೀಯ ಧ್ರುವೀಕರಣ ಹೊಸ ಶಕೆಗೆ ನಾಂದಿ ಹಾಡಿತು. 1968ರಲ್ಲಿ ನಿಜಲಿಂಗಪ್ಪ ಮುಖ್ಯಮಂತ್ರಿ ಪದವಿ ಕಳಚಿ ಮುಂದಿನ ನಾಲ್ಕು ವರ್ಷಗಳ ಕಾಲ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾದರು. 1969ರಲ್ಲಿ ಸಂಸ್ಥಾ ಕಾಂಗ್ರೆಸ್ ಎರಡು ಹೋಳಾಗಿ ಇಂದಿರಾ ಕಾಂಗ್ರೆಸ್ ಅಲೆ ದೇಶವ್ಯಾಪಿ ಆವರಿಸಿತು. 1972ರ ಚುನಾವಣೆ ಹೊತ್ತಿಗೆ ರಾಜಕಾರಣವೆನ್ನುವುದು ಶುದ್ಧ ವ್ಯಾಪಾರವೇ ಆಗಿಬಿಟ್ಟಿತು.

ಕಾಂಗ್ರೆಸ್‌ನಿಂದ ಬಂಡೆ ನಿಂತರೂ ಗೆಲ್ಲುವಂತಹ ಸನ್ನಿವೇಶವಿರುವಾಗ ಉಳ್ಳಾಲದಿಂದ ಮಹಮ್ಮದ್ ಕಮಲ್, ಯು.ಟಿ. ಫರೀದ್ ಮತ್ತು ಅಬೂಬಕ್ಕರ್ ಎಂಬುವರು ಅರ್ಜಿ ಹಾಕಿದ್ದರು. ಯು.ಟಿ. ಫರೀದ್ ತನ್ನ ಮಾವ ಕಡಬಕಾರ್ ಹಾಜಿಯವರ ಪ್ರಭಾವದಿಂದ ಸೀಟು ಗಿಟ್ಟಿಸಿಕೊಂಡರು. 1978ರಲ್ಲಿ ಯು.ಟಿ.ಫರೀಧದರಿಗೆ ಸೀಟು ಸಿಕ್ಕಿ 18,000 ಮತಗಳ ಅಂತರದಿಂದ ಗೆದ್ದರು. ಈ ನಡುವೆ ದೇವರಾಜ ಅರಸು ರಾಜಕೀಯ ಜಮಾನ ಪತನಗೊಂಡು 3 ವರ್ಷದ ಗುಂಡೂರಾಯರ ಗೂಂಡಾ ರಾಜ್ಯಕ್ಕೆ ರಾಜ್ಯ ಈಡಾಯಿತು.

1983ರ ಚುನಾವಣೆಯಲ್ಲಿ ಕೇಂದ್ರ ಹಣಕಾಸು ಮಂತ್ರಿಯಾಗಿ ಪ್ರಭಾವಕ್ಕೆ ಬಂದ ಜನಾರ್ದನ ಪೂಜಾರಿ ತನ್ನ ನಿಷ್ಠಾವಂತ ಶಿಷ್ಯ ಕೆ.ಎಂ. ಮಸೂದ್‌ಗೆ ಉಳ್ಳಾಲದಲ್ಲಿ ಟಿಕೆಟ್ ಕೊಟ್ಟಿದ್ದರು. ಆದರೆ ಮಸೂದ್ ಮೇಲೆ ಮುಸ್ಲಿಂರಿಗೆ ಅವ್ಯಕ್ತ ಆಕ್ರೋಶವೊಂದು ಹೆಡೆ ಎತ್ತಿ ಮುಸ್ಲಿಂ ಲೀಗ್ 10,000 ಮತಗಳನ್ನು ಬಾಚಿದ್ದರಿಂದ ಕಮ್ಯುನಿಸ್ಟ ಅಭ್ಯರ್ಥಿ ಪಿ. ರಾಮಚಂದ್ರರಾವ್ ಪಾಲಿಗೆ ವಿಜಯಲಕ್ಷ್ಮಿ ಒಲಿಯಿತು. ಮುಂದೆ ಎರಡೇ ವರ್ಷದಲ್ಲಿ ಸರ್ಕಾರ ಮಗುಚಿ 1985 ರಲ್ಲಿ ಚುನಾವಣೆ ಘೋಷಣೆಯಾಯಿತು. ಅದು ರಾಜೀವ್ ಗಾಂಧಿ ಕಾಲ.

ಗೆಲ್ಲುವ ಕುದುರೆಯಾಗಿದ್ದ ಕಾಂಗ್ರೆಸ್‌ನಿಂದ ಮೊಹಿದ್ದೀನ್, ಬಿ. ಇಬ್ರಾಹಿಂ, ಎಂ.ಬಿ. ಅಬ್ದುಲ್ ರಹಿಮಾನ್, ಯು.ಟಿ. ಫರೀದ್, ಕೆ.ಎಂ. ಮಸೂದ್‌ನಂತವರು ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಸಿಓಡಿ ರಿಪೋರ್ಟ್ ಮತ್ತು ಸಾಹಿತಿಗಳಿಗೆ ಟಿಕೆಟ್ ಮೀಸಲಾತಿ ಆಧಾರದಲ್ಲಿ ಆಕಾಂಕ್ಷಿಗಳ ಪಟ್ಟಿಯಲ್ಲಿ ಇಲ್ಲದಿದ್ದರೂ ಇದಿನಬ್ಬರನ್ನೇ ಕಾಂಗ್ರೆಸ್‌ನಿಂದ ಕಣಕ್ಕಿಳಿಸಲಾಯಿತು. 9500 ಮತಗಳ ಅಂತರದಿಂದ ಸಿಪಿಎಂನ ಪಿ. ರಾಮಚಂದ್ರರಾವ್ ಅಂದು ಇದಿನಬ್ಬರನ್ನೂ ಸೋಲಿಸಿದ್ದರು.

1989ರಲ್ಲಿ ಬಿ.ಎಂ. ಇದಿನಬ್ಬರೇ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದು ಅಷ್ಟೊತ್ತಿಗೆ ಬಿಜೆಪಿ ಉಳ್ಳಾಲದಲ್ಲಿ ಬೇರು ಬಿಟ್ಟಾಗಿತ್ತು. ಬಿಜೆಪಿಯ ಜಯರಾಂ ಶೆಟ್ಟಿ ವಿರುದ್ಧ ಜಯ ಸಾಧಿಸಿ ಮೂರನೇ ಬಾರಿ ಇದಿನಬ್ಬರು ಶಾಸಕರಾದರು. 1994ರಲ್ಲಿ ಪೂಜಾರಿ ಕೃಪೆಯಿಂದ ಗಂಟುಮುಖದ,

ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಜಯರಾಂ ಶೆಟ್ಟಿ, ಒಂದಷ್ಟು ಬಿಜೆಪಿಗೆ ಡ್ಯಾಮೇಜ್ ಮಾಡಿದ್ದರು. ಈ ಬಾರಿ ನಾಟೇಕಲ್ ಸೆಳೆಯುವ ಪ್ರತಿಯೊಂದು ಮತ ಕೂಡಾ ಕಾಂಗ್ರೆಸ್ ನದ್ದಾಗಿದ್ದು ಅಪಾಯ ಹೆಚ್ಚು. ಕಾಂಗ್ರೆಸ್‌ಗೆ ಮನಪಾದ 9 ವಾರ್ಡ್‌ಗಳಲ್ಲಿನ 75 ಸಾವಿರ ಮತಗಳು ಹೆಚ್ಚು ಅಮೂಲ್ಯ. ಕಾಂಗ್ರೆಸ್‌ನ ಕಾರ್ಪೊರೇಟರ್‌ಗಳು ಈ ವಾರ್ಡ್‌ಗಳಲ್ಲಿ ತಮ್ಮ ಹೆಸರು ಕೆಡಿಸಿಕೊಂಡಿರೋದು ಕಾಂಗ್ರೆಸ್‌ಗೆ ಬೀಳುವ ಮತಗಳ ಮೇಲೆ ಪರಿಣಾಮ ಬೀರಲಿದೆ. ಕಳೆದ ಸಲವೂ ಕಾಂಗ್ರೆಸ್‌ಗೆ ಹಿನ್ನೆಡೆಯಾದದ್ದು ಈ ಮನಪಾದ ಮತಗಟ್ಟೆಗಳಲ್ಲಿಯೇ ಎನ್ನುವ ಸತ್ಯವನ್ನು ಕಾಂಗ್ರೆಸ್ ಅರಿತುಕೊಳ್ಳಬೇಕಿದೆ.

ಅತೀ ಆತ್ಮವಿಶ್ವಾಸದಿಂದ ಬೀಗುವ ಕಾಂಗ್ರೆಸ್ ಮಾಡಿರುವ ಇನ್ನೊಂದು ಅಚಾತುರ್ಯವೆಂದರೆ ಕಮ್ಯೂನಿಸ್ಟರ ಜತೆ ಹೊಂದಾಣಿಕೆಗೆ ಹಿಂದೇಟು ಹಾಕಿದ್ದು. ಜೆಡಿಎಸ್ ಜತೆ ಕೈಜೋಡಿಸಲು ತಯಾರಿಲ್ಲದ ಕಮ್ಯೂನಿಸ್ಟರನ್ನು ಜತೆಗಿರಿಸಿಕೊಂಡಿದ್ದರೆ ಕಾಂಗ್ರೆಸ್‌ಗೆ ನಿಜಕ್ಕೂ ನೈತಿಕ ಬಲ ಮೂಡುತ್ತಿತ್ತು. ಉಳ್ಳಾಲದಲ್ಲಿ ರಾಜಕೀಯ ಪರಂಪರೆಯನ್ನು ನೋಡಿದರೆ ಇದು ಮನದಟ್ಟಾಗುತ್ತದೆ. ಕಮ್ಯೂನಿಸ್ಟರ ಸಾಂಪ್ರದಾಯಿಕ ಮತಗಳೂ ಲಾಭವಾಗುತ್ತಿತ್ತು. ಅದು ಬಿಟ್ಟು ಕಮ್ಯೂನಿಸ್ಟರಿಗೆ ಉಳ್ಳಾಲದಲ್ಲಿ ಅಸ್ತಿತ್ವವೇ ಇಲ್ಲವೆನ್ನುವ ಅಹಂಕಾರದ ಹೇಳಿಕೆ ಕೊಟ್ಟಿರುವುದು ಕಾಂಗ್ರೆಸ್‌ನ ಮೂರ್ಖತನಕ್ಕೆ ಸಾಕ್ಷಿಯಾಗಿದೆ.

ಚುನಾವಣಾ ಪ್ರಚಾರ ಕಾರ್ಯದಲ್ಲೂ ಕಾಂಗ್ರೆಸ್ ತೀರಾ ನಿಧಾನ ಗತಿಯಲ್ಲಿದ್ದು, ಬಿಜೆಪಿ ಪ್ರತಿ ಮನೆ ಮನೆಗೂ ನಿಗಾ ಇಟ್ಟು ಮತಯಾಚನೆಯಲ್ಲಿ ತೊಡಗಿದೆ. ರಾಜ್ಯಾಧ್ಯಕ್ಷ ಸದಾನಂದಗೌಡರೇ ಚುನಾವಣಾ ಕಚೇರಿಯಲ್ಲಿ ಕುಳಿತಲ್ಲಿ ಕುಳಿತುಕೊಳ್ಳದೇ ಆಫೀಸ್ ಬಾಯ್ ತರಹ ಓಡಾಡುತ್ತಿದ್ದು ಸದ್ದಿಲ್ಲದೆ ಪ್ರಚಾರ ಕಾರ್ಯವನ್ನು ಮಾಡು ತ್ತಿದ್ದಾರೆ.

ಇತ್ತ ಕಾಂಗ್ರೆಸ್ ಆಡಂಬರವೇ ಜಾಸ್ತಿಯಾದಂತಿದೆ. ಮಂಗಳೂರು ನಗರದಲ್ಲೊಂದು ಚುನಾವಣಾ ಕಚೇರಿ ಸೇರಿದಂತೆ ಅಲ್ಲಲ್ಲಿ ಶೃಂಗಾರ ಶೋಭಿತ ಚುನಾವಣಾ ಕಚೇರಿಗಳನ್ನು ತೆರೆದು, ಪೂಜಾರಿಯ ಮಲ್ಲಿಗೆ ಹೂವಿನ ವಿತರಣೆ, ಸಿದ್ದರಾಮಯ್ಯನವರ ಒಡ್ಡೋಲಗ, ಜನ ಮರಳೋ ಜಾತ್ರೆ ಮರಳೋ ಎಂಬಂತಿದೆ. ಕಾಂಗ್ರೆಸ್ ಅನ್ನು ಮಣ್ಣು ಮುಕ್ಕಿಸಲು ಬಿಜೆಪಿ-ಜೆಡಿಎಸ್ ಜಂಟಿ ಕಾರ್ಯಾಚರಣೆಯಲ್ಲಿ ನಿರತವಾಗಿದ್ದು, ಕಾಂಗ್ರೆಸ್‌ಗೆ ಗೆಲುವು ಸುಲಭದ ತುತ್ತಲ್ಲ. ಚಾಮುಂಡೇಶ್ವರಿಯಲ್ಲಿ ಸಂಭವಿಸಿದಂತೆ ಇಲ್ಲೂ ಕತ್ತುಕತ್ತಿನ ಹೋರಾಟದಲ್ಲಿ ಗೆಲವು ತೆಳು ಅಂತರದಲ್ಲಿ ನಿರ್ಣಯವಾಗಲಿದೆ.


-ಪ್ರಕಾಶ್ ಪಿಂಟೋ

ಉಳ್ಳಾಲಕ್ಕೆ ಸಂಬಂಧವೇ ಪಡದ ಮಸೂದ್‌ಗೆ ಪುನಃ ಟಿಕೆಟ್ ಕೊಟ್ಟಿದ್ದು, ಸ್ವಜಾತಿ ಬಾಂಧವರೇ ಕೈಕೊಟ್ಟಿದ್ದರಿಂದ ಮಸೂದ್ ಸೋತು ಪ್ರಥಮ ಬಾರಿ ಉಳ್ಳಾಲದಿಂದ ಬಿಜೆಪಿ ಖಾತೆ ತೆರೆಯಿತು. 1999ರಲ್ಲಿ ಇದಿನಬ್ಬರಿಗೆ ಅವಕಾಶವಿದ್ದಾಗಲೂ ಸ್ಪರ್ಧಿಸಲು ನಿರಾಕರಿಸಿದ್ದರಿಂದ ಹೊಸಬರಿಗೆ ಅವಕಾಶ ಒದಗಿಬಂತು.

ಟಿಕೆಟ್‌ಗಾಗಿ ನಡೆದ ಭಾರೀ ಪೈಪೋಟಿಯಲ್ಲಿ ಆಸ್ಕರ್ ಕೃಪೆಯಿಂದ ಹಿರಿತಲೆ ಫರೀದಜ್ಜನಿಗೆ ಮತ್ತೆ ಅವಕಾಶ ಅರಿಸಿ ಬಂತು. ಬಿಜೆಪಿಯ ಜಯರಾಂಶೆಟ್ಟಿಯನ್ನು 15000 ಮತಗಳ ಅಂತರದಿಂದ ಸೋಲಿಸಿದ ಫರೀದ್ ಶಾಸಕರಾದರು. ಗುಡ್ ಪಾರ್ ನಥಿಂಗ್ ಅನ್ನುವಂತೆ 5 ವರ್ಷಗಳನ್ನು ಶಾಸಕರಾಗಿ ಪೂರೈಸಿದ ಫರೀದರು ದೈಹಿಕವಾಗಿ ರಾಜಕೀಯದಿಂದ ರಿಟೈರ್ಡ್ ಆಗಿದ್ದರು. 2004ರ ಚುನಾವಣೆ ಹೊತ್ತಿಗೆ ಉಳ್ಳಾಲದಿಂದ ಕಾಂಗ್ರೆಸ್ ಟಿಕೆಟ್‌ಗೆ ಕಣಚ್ಚೂರು ಮೋನು, ಕೋಡಿಚಾಲ್ ಇಬ್ರಾಹಿಂ, ಬದ್ರುದ್ದೀನ್ ಎಂದೆಲ್ಲಾ ಆಕಾಂಕ್ಷಿಗಳ ದಂಡೇ ಪೈಪೋಟಿಗೆ ಬಿದ್ದು, ಕಾಂಗ್ರೆಸ್ ಹೈಕಮಾಂಡ್‌ಗೆ ಇದೊಂದು ಬಿಡಿಸಲಾಸದ ಒಗಟಾಯಿತು. ಹೊಸಬರಿಗೆ ಕೊಟ್ಟು ಭಿನ್ನಮತಕ್ಕೆ ದಾರಿ ಮಾಡಿಕೊಡಲುಬಯಸದ ಹೈಕಮಾಂಡ್ ಕೊನೆಗೆ ಸಿಟ್ಟಿಂಗ್ ಎಂಎಲ್‌ಎ ಫರೀದಜ್ಜನಿಗೆ ಸೀಟು ಕೊಟ್ಟು ಕೈತೊಳೆದುಕೊಂಡಿತು. ದೇಹ ಸಹಕರಿಸುತ್ತಿಲ್ಲವಾದರೂ ಅಧಿಕಾರದ ಮಹತ್ವಾಕಾಂಕ್ಷಿಯಾಗಿದ್ದ ಫರೀದ್ ಬೇಡ ಅನ್ನಲಿಲ್ಲ. ಭಜರಂಗಿ ಪುಂಡ, ಬಿಜೆಪಿ ಕ್ಯಾಂಡಿಡೇಟ್ ಚಂದ್ರಶೇಖರ್ ಉಚ್ಚಿಲಕ್ಕಿಂತ ಬೆಟರ್ ಎನ್ನುವ ಕಾರಣಕ್ಕೆ ಮತ್ತೆ ಗೆದ್ದು ಬಂದರು. ಆದರೆ ಗೆಲುವಿನ ಅಂತರ ಮಾತ್ರ 15000ರಿಂದ 7000ಕ್ಕೆ ಇಳಿಯಿತು. ಈ ಮೂಲಕ ಮಂಗಳೂರು ಲೋಕಸಭಾ ವ್ಯಾಪ್ತಿಯಲ್ಲಿ ಏಕೈಕ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಾಗಿ ಫರೀದಜ್ಜನ ಮೂಲಕ ಕಾಂಗ್ರೆಸ್‌ನ ಮಾನ ಉಳಿಯಿತು. ಈ ತನಕ ಉಳ್ಳಾಲದಲ್ಲಿ 10ಸಲ ಅಸೆಂಬ್ಲಿ ಚುನಾವಣೆ ನಡೆದಿದೆ. 7 ಬಾರಿ ಕಾಂಗ್ರೆಸ್ 2 ಬಾರಿ ಕಮ್ಯೂನಿಸ್ಟ್ ಒಂದು ಬಾರಿ ಬಿಜೆಪಿ ಗೆದ್ದಿದೆ. ಉಳ್ಳಾಲದ ಪಾಲಿಗಿದು ಕೊನೆಯ ಅಸೆಂಬ್ಲಿ ಚುನಾವಣೆ ಈ ಬಾರಿ ದಿನಾಗುತ್ತದೋ ಕಾದು ನೋಡಬೇಕಾಗಿದೆ. ■

ಮುಸ್ಲಿಮರನ್ನು ಮುಗಿಸಲು ಕೋ-ಜಾ ಸಂಚು!

ಅಧಿಕಾರ ಹಿಡಿಯುವುದಕ್ಕೆ ರಾಜಕೀಯ ಪಕ್ಷಗಳು ಎಂಥ ನೀಚತನಕ್ಕೂ ಇಳಿಯುತ್ತವೆ, ಎಷ್ಟೊಂದು ನಂಬಿದವರಿಗೂ ದ್ರೋಹ ಬಗೆಯುತ್ತವೆ ಎಂಬುದಕ್ಕೆ ಉಳ್ಳಾಲ ಉಪಚುನಾವಣೆಯಲ್ಲಿ ಕೋಮುವಾದಿ ಬಿಜೆಪಿ ಮತ್ತು ಜಾತ್ಯತೀತ (!) ಜನತಾ ದಳಗಳು ಮಾಡಿಕೊಂಡಿರುವ ಅನೈತಿಕ ಮೈತ್ರಿ ಒಂದು ನಿದರ್ಶನ. ಇವರಿಬ್ಬರು ಮಾಡಿಕೊಂಡಿರುವ ಈ ಮೈತ್ರಿ ವಾಸ್ತವದಲ್ಲಿ ಮುಸ್ಲಿಮರನ್ನು ಮುಗಿಸುವುದಕ್ಕೆ ಎಂಬುದೀಗ ಗುಟ್ಟಾಗಿ ಉಳಿದಿಲ್ಲ.


ನಾಗರಾಜ ಶೆಟ್ಟಿ

ಕೇವಲ ಅರ್ಧ ಅಧಿಕಾರದಲ್ಲಿರುವ ಚೆಡ್ಡಿ ಬಿಜೆಪಿಯ ದೌರ್ಜನ್ಯವನ್ನು ತಾಳಲಾರದೇ ರಾಜ್ಯದ ಮುಸ್ಲಿಮರು, ಕ್ರಿಶ್ಚಿಯನ್ನರು ಈಗಾಗಲೇ ತತ್ತರಿಸಿ ಹೋಗಿದ್ದಾರೆ. ಇನ್ನು ಜೆಡಿ(ಎಸ್) ಏನಾದರೂ ಚೆಡ್ಡಿ ಯಡ್ಡಿಗೆ ಮುಖ್ಯಮಂತ್ರಿ ಗಾದಿ ಬಿಟ್ಟುಕೊಟ್ಟರೆ ಮುಂದಾಗಬಹುದಾದ ಅನಾಹುತಗಳನ್ನು ನೆನೆದೇ ಈ ಅಲ್ಪಸಂಖ್ಯಾತ ಸಮುದಾಯ ಆತಂಕಗೊಂಡಿದೆ. ಇದನ್ನು ಚೆನ್ನಾಗಿ ಅರಿತಿರುವ ಕುಮಾರಸ್ವಾಮಿ ತನ್ನ ಸಚಿವ ಸಂಪುಟದ ಕಾರ್ಮಿಕ ಸಚಿವ ಇಕ್ಬಾಲ್ ಅನ್ಸಾರಿಯಿಂದ "ಮುಂದಿನ 20 ತಿಂಗಳೂ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ" ಎಂದು ಹೇಳಿಸಿಬಿಟ್ಟಿದ್ದಾರೆ.


ಈ ಮೂಲಕ ಬಿಜೆಪಿಗೆ ಅಧಿಕಾರ ಹಸ್ತಾಂತರ ಕುರಿತಂತೆ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಸಮುದಾಯಗಳಲ್ಲಿರುವ ಆತಂಕವನ್ನು ದೂರ ಮಾಡಿದ ನಾಟಕವಾಡಿ ಅಧಿಕಾರವನ್ನು ಹಸ್ತಾಂತರಿಸುವುದಿಲ್ಲ ಎಂದು ಅನ್ಸಾರಿ ಹೇಳಿರುವುದರ ಹಿಂದಿನ ಲೆಕ್ಕಾಚಾರ ಅಲ್ಪಸಂಖ್ಯಾತರಲ್ಲಿ ಜೆಡಿಎಸ್ ಪಕ್ಷದ ಬಗ್ಗೆ ಭರವಸೆ ಮೂಡಿಸುವುದು, ತಮ್ಮ ಪಕ್ಷ ಇನ್ನು ಜಾತ್ಯತೀತವಾಗಿದ್ದು ಮುಸ್ಲಿಮರ ಪರವಾಗಿದೆ ಎಂಬ ಕಲ್ಪನೆಯನ್ನು ಸೃಷ್ಟಿಸಿರುವುದು ಮತ್ತು ಆ ಮೂಲಕ ಅಲ್ಪಸಂಖ್ಯಾತರನ್ನು ದಾರಿ ತಪ್ಪಿಸುವುದು.

ಇದೆಲ್ಲ ಎಂತಹ ನಾಟಕ ಎಂಬುದಕ್ಕೆ ಚೆಡ್ಡಿ ಯಡ್ಡಿಯ ಪ್ರತಿಕ್ರಿಯೆಯೂ ಸಾಕ್ಷಿಯಾಗಿದೆ.

ಅನ್ಸಾರಿ ಮಾತುಗಳಿಗೆ ಅವರು ತುಂಬ ಚಾಣಾಕ್ಷತನದಿಂದ ಪ್ರತಿಕ್ರಿಯಿಸಿ, "ನನ್ನ ಹಣೆಯಲ್ಲಿ ಬರೆದಿದ್ರೆ ಸಿಎಮ್ ಆಗ್ತೀನಿ" ಎಂದು ಹೇಳಿರುವುದೂ ನಿರೀಕ್ಷಿಸಿದಂತೇ ಇದೆ. ಹೀಗೆ, "ನೀನು ಸತ್ತಂಗೆ ಮಾಡು, ನಾನು ಅತ್ತಂಗೆ ಮಾಡ್ತಿನಿ" ಎನ್ನುವಂತಹ ಒಡಂಬಡಿಕೆ ಇವರಿಬ್ಬರದು.

ಒಟ್ಟಿನಲ್ಲಿ, ಇಬ್ಬರೂ ಸೇರಿ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಸಮುದಾಯಗಳಿಗೆ ದ್ರೋಹ ಬಗೆಯುತ್ತಿರುವುದಂತೂ ನಿಜ. ಇದನ್ನೆಲ್ಲಾ ಅರ್ಥಮಾಡಿಕೊಂಡು ಕಾಂಗ್ರೆಸ್ ತನ್ನ ಓಟ್‌ಬ್ಯಾಂಕ್‌ನ್ನು ಉಳಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಬೇಕು; ಬಿಜೆಪಿ-ಜೆಡಿ(ಎಸ್) ಅನೈತಿಕ ಕೋ-ಜಾ ಮೈತ್ರಿಯ ಹಿಂದಿನ ದುರುದ್ದೇಶಗಳನ್ನು ಅಲ್ಪಸಂಖ್ಯಾತ ಸಮುದಾಯಗಳಿಗೆ ಮನವರಿಕೆ ಮಾಡಿಕೊಡಬೇಕು.

ಜೈಲಿಗೆ ಹೋದವರನ್ನು ನಾಗರಾಜಶೆಟ್ಟಿ ಭೇಟಿ ಮಾಡಿ ಅಭಿನಂದಿಸಿದಾಗಲೂ ಇವರಿಗೆ ಅಲ್ಪಸಂಖ್ಯಾತರ ಹಿತಾಸಕ್ತಿ ಮುಖ್ಯವೆನಿಸಲಿಲ್ಲ.


ಯಶಪಾಲ್ ಸುವರ್ಣ

ಈಗ, ಬಿಜೆಪಿಗೆ ನೆರವಾಗಲು ಅಲ್ಪಸಂಖ್ಯಾತರಲ್ಲೇ ಬಿರುಕು ಮೂಡಿಸಲು ನೋಡುತ್ತಿದ್ದಾರೆ. ಅವರಲ್ಲಿ ಹುಸಿ ಭರವಸೆಗಳನ್ನು ಬಿತ್ತುವ ಮೂಲಕ ಚೆಡ್ಡಿಗಳೇ ಉಳ್ಳಾಲವನ್ನು ಆಳುವಂತೆ ನೋಡಿಕೊಳ್ಳಲು ಹೊರಟಿದ್ದಾರೆ.

ಈ ಕುತಂತ್ರಕ್ಕೆ ಅಲ್ಪಸಂಖ್ಯಾತರು ಬಲಿ ಬೀಳಬಾರದು. ಅವರು ಅಪಾರ ಜಾಗರೂಕತೆಯಿಂದ ತಮ್ಮ ಮತಗಳನ್ನು ಚಲಾಯಿಸಬೇಕಿದೆ. ಏಕೆಂದರೆ ಎಲ್ಲರಿಗೂ ಗೊತ್ತಿರುವಂತೆ ಉಳ್ಳಾಲದಲ್ಲಿ ನಿರ್ಧಾರಕವಾಗಿರುವುದು ಪ್ರಜ್ಞಾವಂತ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಮತದಾರರು. ಸುಮಾರು 60,000ದಷ್ಟು ಮತಗಳನ್ನು ಹೊಂದಿರುವ ಮುಸ್ಲಿಮ್ ಸಮುದಾಯ ಹಾಗೂ 16,500ರಷ್ಟು ಮತಗಳನ್ನು ಹೊಂದಿರುವ ಕ್ರಿಶ್ಚಿಯನ್ ಸಮುದಾಯ ಬಿಜೆಪಿ-ಜೆಡಿ(ಎಸ್)ನ ಅನೈತಿಕ ಮೈತ್ರಿಯ ಹಿಂದಿನ ಅಲ್ಪಸಂಖ್ಯಾತ





ಆದಿ ಉಡುಪಿಯಲ್ಲಿ ನಡೆದ ಹಾಜಬ್ಬ, ಹಸನಬ್ಬರ ಬೆತ್ತಲೆ ಪ್ರಕರಣ ಮತ್ತು ಅದರ ವಿರುದ್ಧ ನಡೆದ ಪ್ರತಿಭಟನೆ

ಆ ಎರಡೂ ಸಮುದಾಯಗಳ ಮತಗಳನ್ನು ಸೆಳೆಯುವ ತಂತ್ರ ನಡೆಸಿದ್ದಾರೆ. ಇಕ್ಬಾಲ್ ಅನ್ಸಾರಿ ಬಾಯಿಯಿಂದಲೇ ಈ ಮಾತುಗಳನ್ನು ಹೇಳಿಸಲೂ ಒಂದು ಕಾರಣವಿದೆ. ಆತ ಒಬ್ಬ ಮುಸ್ಲಿಮ್ ಆಗಿರುವುದರಿಂದ ಆತನ ಮಾತನ್ನು ಮುಸ್ಲಿಮ್ ಸಮುದಾಯವು ನಂಬುತ್ತದೆ ಎಂಬುದು ಕುಮಾರಸ್ವಾಮಿಯ ಲೆಕ್ಕಾಚಾರ.

ಹೇಳಿಕೇಳಿ, ಉಳ್ಳಾಲದಲ್ಲಿ ಜೆಡಿಎಸ್ ತನ್ನ ಅಭ್ಯರ್ಥಿಯನ್ನು-ಅದರಲ್ಲೂ ಮುಸ್ಲಿಮ್ ಕ್ಯಾಂಡಿಡೇಟನ್ನು-ಹಾಕಿರುವುದೇ ಕಾಂಗ್ರೆಸ್ ಮತಗಳನ್ನು ವಿಭಜಿಸಿ ಬಿಜೆಪಿಗೆ ಗೆಲುವು ಸಿಗಲಿ ಎಂಬ ದುರುದ್ದೇಶದಿಂದ. ಆ ಕುತಂತ್ರದ ಒಂದು ಅಂಗವೇ ಅನ್ಸಾರಿ ಆಡಿರುವ ಮಾತುಗಳು. ಯಾವುದೇ ಕಾರಣಕ್ಕೂ ಬಿಜೆಪಿಗೆ

ಈಗಾಗಲೇ ಈ ಕೋ-ಜಾ ಸರ್ಕಾರದಡಿ ಅಲ್ಪಸಂಖ್ಯಾತರಿಗೆ ಅಪಾರ ನೋವು ಮತ್ತು ನಷ್ಟಗಳು ಉಂಟಾಗಿದೆ. ಆದಿ ಉಡುಪಿಯಲ್ಲಿ ಹಸನಬ್ಬ ಮತ್ತು ಹಾಜಬ್ಬರನ್ನು ಬೆತ್ತಲೆಗೊಳಿಸಿದ ಪ್ರಕರಣದ ಪ್ರಮುಖ ಆರೋಪಿ ಯಶಪಾಲ್ ಸುವರ್ಣನನ್ನು ಉಡುಪಿ ಅಭಿವೃದ್ಧಿ ಮಂಡಳಿಗೆ ನೇಮಿಸಿದಾಗ ದೇವೇಗೌಡನಾಗಲಿ, ಕುಮಾರಸ್ವಾಮಿಯಾಗಲಿ, ಅನ್ಸಾರಿಯಾಗಲಿ ತುಟಿಪಿಟಿಕ್ ಎನ್ನಲಿಲ್ಲ. ಹಾಗೆಯೇ ಮಂಗಳೂರಿನಲ್ಲಿ ಗಲಭೆಗಳು ನಡೆದು ಮುಸ್ಲಿಮರ ಮನೆಗಳ ಮೇಲೆ ಪೊಲೀಸರೇ ದಾಳಿ ನಡೆಸಿದಾಗಲೂ ಜೆಡಿಎಸ್‌ನವರಿಗೆ ಚೆಡ್ಡಿಗಳ ಸಂಗ ಮಾನಭಂಗ ಅನ್ನಿಸಲಿಲ್ಲ. ಆ ದಾಳಿಯಲ್ಲಿ ಸೆರೆಬಿದ್ದು

ವಿರೋಧಿ ಅಜೆಂಡಾವನ್ನು ಅರ್ಥಮಾಡಿಕೊಂಡು ಅವುಗಳಿಂದ ದೂರ ಉಳಿದು, ಕಾಂಗ್ರೆಸ್‌ನೊಂದಿಗೆ ಕೈ ಜೋಡಿಸಿದರೆ ಯಾರು ಏನು ಕಿತ್ತುಕೊಂಡರೂ ಕಾಂಗ್ರೆಸ್‌ನ ಗೆಲುವನ್ನು ತಡೆಯಲಾಗುವುದಿಲ್ಲ.

ಈ ಸಮುದಾಯಗಳ ಜನ ಹೀಗೆ ಮಾಡಬೇಕಿರುವುದು ಬೇರೆ ಯಾರ ಉದ್ಧಾರಕ್ಕಲ್ಲದಿದ್ದರೂ ಕೋಮುವಾದಿಗಳ ದಾಳಿಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಾದರೂ ಅಗತ್ಯವಿದೆ. ಅಂತಹ ಒಂದು ಪ್ರಜ್ಞಾವಂತಿಕೆಯನ್ನು ಉಳ್ಳಾಲದ ಮತದಾರರು ಪ್ರದರ್ಶಿಸಬೇಕಿದೆ.

ರಾಜಕೀಯ ಬಿಡಿಚಿತ್ರ

'ಯಾರ್ 2 ನೇ ಹೆಂಡ್ತಿ ಯಾರ್ 3 ನೇ ಗಂಡ ಓಗಮ್ಮ ಅತ್ಲಾಗೆ'

ಮೊನ್ನೆ ಅಂಬರೀಷ್ ಮಂಡ್ಯದಲ್ಲಿದ್ದರು. ದಿವಂಗತ ಎಸ್.ಡಿ. ಜಯರಾಂ ನೆನಪಿನ ಒಂದು ಸಭೆಯಲ್ಲಿ ಪಾಲ್ಗೊಳ್ಳಲು ಬಂದು ಐಬಿಯಲ್ಲಿ ಇಳಿದುಕೊಂಡು ಹರಟೆ ಕೊಚ್ಚುತ್ತಿದ್ದ ಅಂಬಿ ಎದುರಿಗೆ ದಿಢೀರನೆ ಹೆಂಗಸೊಬ್ಬಳು ಬಂದು ನಿಂತು ತನ್ನ ಪ್ರವರ ಆರಂಭಿಸಿದ್ದಾಳೆ.

"ಅಣ್ಣೋ, ನನ್ ಗಂಡ ಕೆಯೆಸ್ಸಾರ್ಟಿಸಿಲವನೆ. ಎರಡ್ನೆ ಎಂದ್ರು ಮಾತ್ ಕಟ್‌ಗಂಡು ನನ್ನೆ ಕ್ವಾಟ್ರುಸ್ ಮನಿಯಿಂದ ಆಚೆಗ್ ಅಕ್ ಬುಟವ್ನೆ ಕಣಣ್ಣ. ನೀನೊಸಿ ಏನಾದ್ರು ಮಾಡಣ್ಣ" ಎಂದಿದ್ದಾಳೆ. ಈ ಅಂಬರೀಷ್‌ಗೆ ಮೊದಲೇ ಸಹನೆ ಕಡಿಮೆ, ಅರೆಬರೆಯಾಗಿ ಆಕೆಯ ದೂರು ಕೇಳಿಸಿಕೊಂಡು ಏನೂ ಅರ್ಥವಾಗದೆ "ನೀನ್ ಎರಡ್ನೆ ಎಂದ್ರಾ?" ಅಂದಿದ್ದಾರೆ. ಆಕೆ ಇಲ್ಲಾ ಎಂದೇಟಿಗೆ "ಓ ಅವನು ಮೂರ್ನೆ ಗಂಡಾನಾ. ಅದ್ಕೆ ನಾನೇನ್ ಮಾಡ್ಲಿ" ಎಂದು ಸಣ್ಣಗೆ ರೇಗಲು ಶುರು ಮಾಡಿದ್ದಾರೆ.

ಗಾಬರಿಯಾದ ಹೆಂಗಸು ಏನೋ ಹೇಳಲು ಹೋಗಿ, ಸುತ್ತ ನಿಂತಿದ್ದ ಜನ ಇನ್ನೇನೊ ಮಾತು ಸೇರಿಸಿ ಕೊನೆಗೆ ಎಲ್ಲಾ ಇನ್ನಷ್ಟು ಗೋಜಲಾಗಿದೆ. ತಲೆಬಿಸಿಯಾದ ಅಂಬಿ ಎದ್ದು ನಿಂತವರೆ "ಏಯ್ ಗಂಡ ಕೆಎಸ್‌ಆರ್‌ಟಿಸಿಲವನೆ ಅಂತಿಯಲ್ಲಾ, ನಾನಾ ಟ್ರಾನ್ಸ್‌ಪೋರ್ಟ್ ಮಿನಿಷ್ಟ್ರು? ಅವನವ್ನಲ್ಲ ಚೆಲುವ, ಕಾಸು ಒದೀತಾ ಕುಂತವ್ನೆ, ಓಗಿ ಅವನ್ನ ಹಿಡ್ಕ" ಎಂದವರೆ ಆಯಮ್ಮನ ಅಟ್ಟಿಸಿಕೊಂಡು ಓಡಿದರಂತೆ. ಕಂಗಾಲಾದ ಆ ಮಹಿಳೆ ಓಡುತ್ತಲೇ "ಅಣ್ಣೋವ್, ನಾನ್ 2 ನೇ ಎಂದ್ರು..... ನೀನು..." ಅಂತ ಇನ್ನೇನೊ ಹೇಳುತ್ತಾ ಗಲ್ಲಿ ಬಿದ್ದು ತಪ್ಪಿಸಿಕೊಂಡಳಂತೆ.

ಎಮ್ಮೆಲ್ಲೆ ಮಗನ ಬರ್ತಡೆ-ಬಾಡೂಟಕ್ಕೆ ನೂಕುನುಗ್ಗಲು



ರಾಜ್ಯದ ರೈತರು ಇತರೆಲ್ಲರಿಗೂ ಅನ್ನ ನೀಡಿದರೂ ತಾವು ಮಾತ್ರ ಹಸಿವಿನಿಂದ ಸಾಯುತ್ತಿದ್ದಾರೆ. ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೇ ಬೆಳೆಗಳಿಗೆ ಸಿಂಪಡಿಸಲು ತಂದ ಕ್ರಿಮಿ-ಕೀಟನಾಶಕಗಳನ್ನೆ ಕುಡಿದು ಸಾಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಅಂತಹ ರೈತರಿಂದಲೇ ಆಯ್ಕೆಯಾಗಿ ಬಂದ ಜನಪ್ರತಿನಿಧಿ ತನ್ನ ಮಗನ ಬರ್ತಡೇಯನ್ನು ಅದ್ದೂರಿಯಾಗಿ ಆಚರಿಸಿ, ದುಂದು ವೆಚ್ಚ ಮಾಡಿ ಮೆರೆಯುತ್ತಾರೆಂದರೆ ಏನೆನ್ನಬೇಕು? ಅದೇನೇ ಅನ್ನುವುದಿದ್ದರೂ ಅದನ್ನು ಶ್ರೀರಂಗಪಟ್ಟಣದ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರಿಗೆ ಅನ್ನಿ. ಯಾಕೆಂದರೆ ಮೊನ್ನೆ ಬುಧವಾರ ಅವರ ಮಗ ರಮೇಶ್‌ಬಾಬು ಬಂಡಿಸಿದ್ದೇಗೌಡನ 40 ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿ, ಲಕ್ಷಾಂತರ ರೂಪಾಯಿಗಳನ್ನು ನೀರಿನಂತೆ ಹರಿಸಿದ್ದಾರೆ.

ಅವರು ಹೇಗೆ ಆರಿಸಿ ಶಾಸಕಿಯಾಗಿ ಬಟ್ಟರೋ ಅವರಿಗೇ ಗೊತ್ತಿಲ್ಲ. ಆಪ್ಪಿತಪ್ಪಿ ಬಂದ ಈ ಎಮ್ಮೆಲ್ಲೆಗಿರಿ ಮುಂದಿನ ಚುನಾವಣೆಯ ನಂತರವೂ ಕೂಡ ಮುಂದುವರೆಯುತ್ತದೆ ಎಂಬ ವಿಶ್ವಾಸ ಕ್ಷೇತ್ರದ ಜನರಿಗೂ ಇಲ್ಲ, ಜೆಡಿಎಸ್ ಪಕ್ಷಕ್ಕೂ ಇಲ್ಲ, ಎಲ್ಲಕ್ಕಿಂತ ಮಿಗಿಲಾಗಿ ಅವರಿಗೂ ಇಲ್ಲ. ಹಾಗಾಗಿ ಅವರು ತಮ್ಮ ಮಗ ರಮೇಶ್‌ಬಾಬುವನ್ನು ಈಗಿನಿಂದಲೇ ಪ್ರಚಾರಕ್ಕೆ ತಂದು ಕ್ಷೇತ್ರದ ಮುಂದಿನ ಎಮ್ಮೆಲ್ಲೆ ಎಂಬಂತೆ ಬಿಂಬಿಸತೊಡಗಿದ್ದಾರೆ. ಅದರ ಭಾಗವಾಗಿಯೇ ನಡೆದಿದ್ದು ಈ ಬರ್ತಡೇ, ಬಾಡೂಟ, ಪಾನಗೋಷ್ಠಿ etc.... etc...

ಮೊನ್ನೆ ಬುಧವಾರ ಶ್ರೀರಂಗಪಟ್ಟಣ ತಾಲ್ಲೂಕಿನ ಮಂಡ್ಯ ಕೊಪ್ಪಲು ಬಳಿಯ ಕಾವೇರಿ ಬೋರೇದೇವರ ದೇವಸ್ಥಾನದ ಬಳಿ ರಮೇಶ್‌ಬಾಬುನ ಬರ್ತಡೇಯನ್ನು ಭಾರಿ ಅದ್ದೂರಿಯಾಗಿ ಏರ್ಪಡಿಸಲು ದೊಡ್ಡ ಪೆಂಡಾಲನ್ನೇ ಹಾಕಲಾಗಿತ್ತು. ಎಷ್ಟು ವ್ಯವಸ್ಥಿತ ಒಳ-ಹೊರ ಪ್ರಚಾರ ನಡೆಸಿದ್ದರೆಂದರೆ ಇಡೀ ರಾಜ್ಯದ ವಿವಿಧ ಕಡೆಗಳಿಂದ ಸುಮಾರು 10 ಸಾವಿರಕ್ಕೂ ಹೆಚ್ಚು ಜೆಡಿಎಸ್ ಕಾರ್ಯಕರ್ತರು ಜಮಾಯಿಸಿದ್ದರು!

ಹುಟ್ಟುಹಬ್ಬದ ಪಾರ್ಟಿಗಾಗಿಯೇ ವಿಶೇಷವಾಗಿ ಬಾಡೂಟ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಅರ್ಧ ಟನ್ ಕುರಿ ಮಾಂಸ, 250 ಕೆ.ಜಿ. ಕೋಳಿ ಮಾಂಸ, 30 ಕ್ವಿಂಟಾಲ್ ಅಕ್ಕಿ, ಲೋಡುಗಟ್ಟಲೇ ಮಿನರಲ್ ವಾಟರ್-ಹೀಗೆ ಭಾರಿ ಬಾಡೂಟ ಭೋಜನಕ್ಕಾಗಿ ವ್ಯವಸ್ಥೆ ಮಾಡಲಾಗಿತ್ತು.

ಇನ್ನೊಂದೆಡೆ ಪಾನಗೋಷ್ಠಿ! ಯಾರಿಗೆ ಯಾವ ಬ್ರಾಂಡ್ ಬೇಕೋ ಅವೆಲ್ಲ ಅಲ್ಲಿ ಲಭ್ಯ. ಬಂದ ಕಾರ್ಯಕರ್ತರೆಲ್ಲ ಗುಂಡಾಗಿ ಕುಡಿದು-ತಿಂದು ಆರ್ಕೆಸ್ಟ್ರಾ ಕೇಳುತ್ತಾ ನೆಲ ಬಿಟ್ಟು ಏಳಲಾರದ ಪರಿಸ್ಥಿತಿ ತಲುಪಿದ್ದರು. ಪ್ರಾಯಶಃ ಅವರು ಎದ್ದಿದ್ದು ಮರುದಿನ ಬೆಳಗ್ಗೆಯೇ! ಈ ಪಾನಗೋಷ್ಠಿಗಾಗಿಯೂ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಲಾಗಿದೆ.

ಇನ್ನು ಬರ್ತ್‌ಡೇಗೆ ಮತ್ತಷ್ಟು ರಂಗು ತರಲು, ಅಥವಾ ರಮೇಶ್‌ಬಾಬುವಿಗೆ ಇನ್ನೊಂದಿಷ್ಟು ವರ್ಚಸ್ಸು ಕೊಡಲು ಬಣ್ಣ ಬಣ್ಣದ ಪಟಾಕಿಗಳನ್ನು ಸಿಡಿಸಲಾಯಿತು. ಗಂಟೆಗಟ್ಟಲೇ ಸಿಡಿದು, ಇಡೀ ಜನಸ್ತೋಮ ನಿಬ್ಬೆರಗಾಗುವಂತೆ ಮಾಡಿದ ಈ ಪಟಾಕಿಗಳು ಸುಟ್ಟಿದ್ದು ಅದೆಷ್ಟು ಲಕ್ಷಗಳನ್ನೋ ಶಾಸಕಿ ವಿಜಯಲಕ್ಷ್ಮಿಯೇ ಹೇಳಬೇಕು.

ಕಾವಲು ಕಾಯ್ದ ಪೊಲೀಸರು!

ಸಾರ್ವಜನಿಕರ ರಕ್ಷಣೆಗಾಗಿ, ಸೇವೆಗಾಗಿ ಇರಬೇಕಿದ್ದ ಪೊಲೀಸರು ಸಮವಸ್ತ್ರ ಧರಿಸಿ ಈ ಬಿಗ್ ಬರ್ತ್‌ಡೇಯಲ್ಲಿ ಕಾವಲು ಕಾಯ್ದರು. ಬರ್ತ್‌ಡೇಗಾಗಿ ತಂದಿದ್ದ ನೀರಿನ ಕ್ಯಾನುಗಳನ್ನು, ಪಾತ್ರೆ-ಪಡುಗುಗಳನ್ನು, ಸರಕು ಸರಂಜಾಮುಗಳನ್ನು ಪೊಲೀಸರು ಹಗಲು-ರಾತ್ರಿ ನಿದ್ದೆಗೆಟ್ಟು ಕಾಯುತ್ತಿದ್ದರು. ನೋಡಿದವರಿಗೆ ಇವರೇನು ಪೊಲೀಸರೇ ಅಥವಾ ವಿಜಯಲಕ್ಷ್ಮಿಯ ಮನೆಯಲ್ಲಿ ಸಂಬಳಕ್ಕಿರುವ ಕೆಲಸಗಾರರೇ ಎಂಬ ಅನುಮಾನ ಬಂದಿದ್ದಂತೂ ನಿಜ. ಈ ಕಾಯುವ ಕೆಲಸದ ಮೇಲ್ವಿಚಾರಣೆ ಹೊತ್ತು ಯಶಸ್ವಿಯಾಗಿ ನಡೆಸಿಕೊಟ್ಟ ಕೀರ್ತಿ ಸ್ಥಳೀಯ ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್‌ಗಳಿಗೆ ಸಲ್ಲಬೇಕು!

ಇನ್ನು ನಾಚಿಕೆಗೇಡಿನ ವಿಚಾರ ಎಂದರೆ, ತಾಲ್ಲೂಕಿನ ಹೆಚ್ಚುಕಡಿಮೆ ಎಲ್ಲ ಸರ್ಕಾರಿ ಅಧಿಕಾರಿಗಳು ಈ ಬರ್ತ್‌ಡೇ ಹಿಂದಿನ ವಿಜಯಲಕ್ಷ್ಮಿಯ ತಂತ್ರ ಗೊತ್ತಿದ್ದೂ ಗೊತ್ತಿದ್ದೂ ಭಾಗವಹಿಸಿದ್ದರು. ತಾಲ್ಲೂಕಿನ BED, ತಾಲ್ಲೂಕು ಪಂಚಾಯ್ತಿ EO, ಕಾವೇರಿ ನೀರಾವರಿ ನಿಗಮದ AEE, ಅಷ್ಟೇ ಅಲ್ಲ ಪಶುಪಾಲನೆ ಕಂದಾಯ ಕೃಷಿ-ಹೀಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ಸಾಲುಗಟ್ಟಿ ನಿಂತಿದ್ದರು!

ಬಾಡೂಟಕ್ಕೆ ನೂಕುನುಗ್ಗಲು

ಒಳಗೆ ಬಾಡು ಬೇಯುತ್ತಿದ್ದರೆ ಹೊರಗೆ ನೆರೆದಿದ್ದ 10 ಸಾವಿರಕ್ಕೂ ಹೆಚ್ಚಿನ ಜನರಿಗೆ ತಡೆಯಾಗಲಿಲ್ಲ. ಎಲ್ಲರೂ ಒಂದೇ ಬಾರಿ ಊಟಕ್ಕೆ ಕುಳಿತುಕೊಳ್ಳಲು ಪೈಪೋಟಿ ನಡೆಸಿ ದೊಡ್ಡ ಗದ್ದಲವನ್ನೇ ಎಬ್ಬಿಸಿಬಿಟ್ಟರು. ಮಕ್ಕಳು-ಮರಿ, ಹೆಂಗಸರು, ಮುದುಕರೆನ್ನದೇ ನೂಕಾಟ, ತಳ್ಳಾಟ ನಡೆದು ಅದೆಷ್ಟು ಜನ ಬಿದ್ದು-ಎದ್ದು ಪರದಾಡಿದರೋ.

ಒಟ್ಟಿನಲ್ಲಿ ರಮೇಶ್‌ಬಾಬು ತನ್ನ ಜನ್ಮದಲ್ಲಿ ಒಂದು ಬಾರಿಯಾದರೂ ಎಮ್ಮೆಲ್ಲೆ ಆಗುತ್ತಾನೋ ಇಲ್ಲವೋ ಗೊತ್ತಿಲ್ಲ. ಎಮ್ಮೆಲ್ಲೆಯಾಗಿ ಪ್ರಚಾರ ಪಡೆದುಕೊಳ್ಳದಿದ್ದರೂ, ಬಾಡೂಟ, ಹೆಂಡದೂಟ ಮಾಡಿಸಿ ತನ್ನ ತೆವಲು ತೀರಿಸಿಕೊಂಡ.

ಒಂದೆಡೆ ಕಾವೇರಿ ಚಳವಳಿ ನಡೀತಾ ಇದೆ. ಇನ್ನೊಂದು ಕಡೆ ರೈತರು ಸಮಸ್ಯೆಗಳ ಸುಳಿಗೆ ಸಿಲುಕಿ ತತ್ತರಿಸಿ ಹೋಗಿದ್ದಾರೆ. ಇಂತಹ ಹೊತ್ತಿನಲ್ಲಿ ವಿಜಯಲಕ್ಷ್ಮಿ ಈ ಬರ್ತ್‌ಡೇಗೆ ಇಷ್ಟೊಂದು ಹಣ ದುಂದುವೆಚ್ಚ ಮಾಡುವ ಬದಲು ಅದನ್ನು ರೈತರ ಅಭಿವೃದ್ಧಿಗಾಗಿ ವ್ಯಯಿಸಿದ್ದರೆ ಒಂದಿಷ್ಟು ರೈತ ಕುಟುಂಬಗಳಾದರೂ ಬದುಕುತ್ತಿದ್ದವು. ಆ ಕಾರಣಕ್ಕೇನೇ ಮುಂದಿನ ಸಲ ಮತ್ತೆ ಎಮ್ಮೆಲ್ಲೆಯಾಗಿ ಆಯ್ಕೆ ಆದ್ರೂ ಆಗಬಹುದಿತ್ತು. ಆದ್ರೆ ಈಗ ಜನರಿಗೆ ಹೊಟ್ಟೆಗೆ ಹಿಟ್ಟಿಲ್ಲದಿದ್ದಾಗ ಅನವಶ್ಯಕವಾಗಿ ಅಪಾರ ಹಣ ಮಗನ ಬರ್ತ್‌ಡೇಗೆ ಖರ್ಚು ಮಾಡಿರುವುದರಿಂದ ಕ್ಷೇತ್ರದ ಜನ ಮುಂದಿನ ಬಾರಿ ಅವಳನ್ನೂ ಆಯ್ಕೆ ಮಾಡೋಲ್ಲ, ಅವಳ ಮಗ ರಮೇಶ್‌ಬಾಬುವನ್ನೂ ಆಯ್ಕೆ ಮಾಡೋಲ್ಲ.

ಹೇಗಿದೆ ತಿರುಗುಬಾಣ.... ■



(3ನೇ ಪುಟದಿಂದ)

‘ಜಗನ್ಮಾತೆ’ಯನ್ನು ಬೆತ್ತಲಾಗಿಸಿದವರಿಗೆ ಯಾವ ಶಿಕ್ಷೆ?

ಸ್ವಾಮಿಗಳ ಮಾತು ಬದಿಗಿರಲಿ, ಸ್ವತಃ ಮಹಿಳೆಯರಾಗಿದ್ದು ಮತ್ತೊರ್ವ ಮಹಿಳೆಯ-ಆಕೆ ಕಾಲ್ಪನಿಕವಾಗಿದ್ದರೂ-ಅಂಗಾಂಗಗಳನ್ನು ವಿವರಿಸುವ ಈ ಶ್ಲೋಕಗಳನ್ನು ಅವರೆಲ್ಲ ಅದು ಹೇಗೆ ಯಾವ ಮುಜುಗರವೂ ಇಲ್ಲದೆ ಭಕ್ತಿ ಮತ್ತು ಸಂಭ್ರಮದಿಂದ ಪಠಿಸುತ್ತಾರೆ? ಅವರಿಗೆ ಇವುಗಳ ಅರ್ಥ ಗೊತ್ತಿದೆಯೇ?

ಇನ್ನು ಈ ಸೌಂದರ್ಯ ಲಹರಿಯನ್ನು ಶಂಕರಾಚಾರ್ಯ ರಚಿಸಿದ್ದೇಕೆ? ಶ್ರೀನಿಧಿಶರ್ಮರವರು ಹೇಳಿರುವಂತೆ “ಆಚಾರ್ಯರ ಕಾಲದಲ್ಲಿ ದಕ್ಷಿಣ ಭಾರತದ ಅನೇಕ ಪೂಜಾಸ್ಥಾನಗಳಲ್ಲಿ ಸದಾಚಾರ ಹಾಗೂ ವಾಮಾಚಾರ ಪೂಜೆ ಪ್ರಚಾರದಲ್ಲಿತ್ತು. ದೇವೀ ಪೂಜೆಯಂತೂ ವಾಮಾಚಾರದ ಒಂದು ಅಂಗವೇ ಆಗಿತ್ತು. ಆದ್ದರಿಂದ ಮಂತ್ರಶಾಸತ್ರ ಹಾಗೂ ಯಂತ್ರ ಶಾಸ್ತ್ರಗಳಿಗೆ ಸೂಕ್ತ ಮಾರ್ಗದರ್ಶಕವಾದ ಒಂದು ಉದ್ಗ್ರಂಥದ ಅಗತ್ಯವಿತ್ತು. ಈ ಕೊರತೆಯನ್ನು ಆಚಾರ್ಯ ಶಂಕರರ ಸ್ತೋತ್ರಗ್ರಂಥವಾದ 100 ಶ್ಲೋಕಗಳ ಸೌಂದರ್ಯ ಲಹರಿ ತುಂಬಿ ಕೊಟ್ಟಿದೆ.”


ಆದರೆ ವಾಮಾಚಾರ ಮತ್ತು ಸದಾಚಾರಗಳ ವಿರುದ್ಧ ಶಂಕರಾಚಾರ್ಯ ರಚಿಸಿರುವ ಈ ಕೃತಿಯಲ್ಲೂ ‘ಮಾತೆ’ಯ ಬಗ್ಗೆ ಕಾಮ ಮತ್ತು ವ್ಯಾಮೋಹವೇ ಎದ್ದು ಕಾಣಿಸುತ್ತದೆ ಯಾಕೆ? ಮೊದಲೇ ಹೇಳಿದಂತೆ ಇದರಲ್ಲಿನ ನೂರು ಶ್ಲೋಕಗಳಲ್ಲಿ ಸರಾಸರಿ 60 ಶ್ಲೋಕಗಳು ಮಾತೆಯ ಅವಯವ ವರ್ಣನೆಗಳೇ ಆಗಿವೆ. ಅವೆಲ್ಲವೂ ಕಾಮಕೇಂದ್ರಿತ ದೇವೋಪಾಸನೆಗಳೇ. ಅಂದರೆ ವಾಮಾಚಾರಕ್ಕೂ ಇದಕ್ಕೂ ಅಷ್ಟೇನೂ ವ್ಯತ್ಯಾಸ ಇಲ್ಲ ಎಂದಾಯಿತಲ್ಲವೇ?

ಶಂಕರಾಚಾರ್ಯ ದೇವತೆಯನ್ನು ಡಿಟೈಲಾಗಿ ವಿವರಿಸಿರುವ ಬಗೆಯನ್ನು ಓದಿದ್ದೀರಿ. ಈಗ ಎಂ.ಎಫ್. ಹುಸೇನ್ ಮತ್ತು ಬರೋಡಾದ ಕಲಾವಿದ್ಯಾರ್ಥಿ ಚಂದ್ರಮೋಹನ್ ರಚಿಸಿದ್ದ ಕೃತಿಗಳಲ್ಲಿ ಏನಿತ್ತು ಎಂದು ನೋಡುವ. ಇವತ್ತು ಸಂಘಪರಿವಾರದ ಪುಂಡರಿಂದ ಜೀವ ಬೆದರಿಕೆ ಎದುರಿಸುತ್ತಾ ಹೆದರಿ ಪರದೇಶಗಳಲ್ಲಿ ಬದುಕುತ್ತಿರುವ ಹುಸೇನರು ರಚಿಸಿದ್ದ ಕಲಾಕೃತಿಯಲ್ಲಿ ನಗ್ನ ಸೀತೆಯು ನಗ್ನ ಹನುಮಂತನ ಬಾಲದ ಮೇಲೆ ಕೂತಿರುವುದಾಗಿ ತೋರಿಸಲಾಗಿತ್ತು. ಚಂದ್ರಮೋಹನ್‌ರವರ ಮೂರು ಕಲಾಕೃತಿಗಳ ವಿವರಗಳು ಹೀಗಿವೆ; ಒಂದು, ಹೆರಿಗೆ ಸ್ಥಿತಿಯಲ್ಲಿರುವ ದುರ್ಗೆಯೊಳಗಿಂದ ರಾಕ್ಷಸರು ಜನಿಸುತ್ತಿರುವುದು; ಎರಡು ಕಮೋಡ್ ಮೇಲೆ ಶಿಲುಬೆಯೊಂದು ತೂಗಾಡುತ್ತಿರುವುದು; ಮೂರು, ಲಿಂಗದ ಸುತ್ತ ಖಜುರಾಹೋ ದೇವಸ್ಥಾನದ ಗೋಡೆಗಳ ಮೇಲೆ ಕೆತ್ತಲ್ಪಟ್ಟಿರುವ ವಿಗ್ರಹಗಳು ತೇಲಾಡುತ್ತಿರುವುದು.

ನಗ್ನತೆಗೂ, ಅಶ್ಲೀತೆಗೂ ಅಪಾರ ವ್ಯತ್ಯಾಸವಿದೆ ಎಂಬುದು ಎಲ್ಲರಿಗೂ ಗೊತ್ತು. ಆದರೂ ಶಂಕರಾಚಾರ್ಯನ ವಿವರಣೆ ಮತ್ತು ಹುಸೇನ್ ಚಂದ್ರಮೋಹನರ ಕಲಾಕೃತಿಗಳನ್ನು ಹೋಲಿಸಿ. ಯಾವುದು ನಿಜವಾಗಲೂ ಅಸಭ್ಯವಾಗಿದೆ ಎಂಬುದನ್ನು ಯೋಚಿಸಿ. ಖಂಡಿತವಾಗಿಯೂ ಮಾತೆಯನ್ನು ಕಾಮುಕ ದೃಷ್ಟಿಯಿಂದ ನೋಡಿರುವ ಶಂಕರಾಚಾರ್ಯನ ಸೌಂದರ್ಯ ಲಹರಿಯಲ್ಲವೇ? ಹಾಗಾದರೆ ಇದನ್ನು ಪಠಿಸಿದ, ಪಠಿಸುವಂತೆ ಪ್ರೋತ್ಸಾಹಿಸಿದ ಜನರಿಗೆ ಏನು ಮಾಡಬೇಕು? ‘ಜಗನ್ಮಾತೆ’ಯನ್ನು ಹೀಗೆ ಸಾರ್ವಜನಿಕವಾಗಿ ‘ಬೆತ್ತಲಾಗಿಸಿ’ ಮಹಿಳಾ ಸಮುದಾಯಕ್ಕೆ ಅವಮಾನ ಮಾಡಿದವರಿಗೆ ಯಾವ ಶಿಕ್ಷೆಯೂ ಇಲ್ಲವೇ?

ಕಲೆಯ ಹೆಸರಲ್ಲಿ ಏನನ್ನು ಬೇಕಾದರೂ ಮಾಡಬಹುದಾ ಎಂದು ಪ್ರಶ್ನಿಸುವವರಿಗೆ ಇಲ್ಲೊಂದು ಮರುಪ್ರಶ್ನೆ: ಧರ್ಮದ ಹೆಸರಿನಲ್ಲಿ ಇಂತಹ ವೇದ, ಉಪನಿಷತ್, ಶಾಸ್ತ್ರ ಶ್ಲೋಕಗಳನ್ನು ಪ್ರಚಾರಪಡಿಸುವುದು ಸರಿಯೇ? ಇದೆಂತಹ ಧರ್ಮ?

-ಗೌರಿ ಲಂಕೇಶ್




ಪೇಜಾವರ ಸ್ವಾಮಿಯ ವಿರುದ್ಧ ತಿರುಗಿಬಿದ್ದು ಕಂಪ್ಲೇಂಟ್ ಕೊಟ್ಟ ವೆಂಕಟೇಶ್ ಮತ್ತು ಅವರ ಅಕ್ಕ ರುಕ್ಮಿಣಿಯವರ ವಿರುದ್ಧವೇ ಕ್ರಮ ಕೈಗೊಳ್ಳುವಂತೆ ಯಡ್ಡಿ ಕಿರುಚಾಡಿದ್ದು, ಯಡ್ಡಿಯ ಆದೇಶ ಪಾಲಿಸಿ ವೆಂಕಟೇಶ್ ಮತ್ತು ರುಕ್ಮಿಣಿಯವರನ್ನು ಎಸಿಪಿ ಟಿ. ಗಂಗಾಧರ್ ನಾಯಕ್ ರಾತ್ರೋರಾತ್ರಿ ಬಂಧಿಸಿ ಚಿತ್ರ ಹಿಂಸೆ ನೀಡಿದ್ದು, ವೆಂಕಟೇಶ್ ಈ ವಿಚಾರವಾಗಿ ರಾಜ್ಯಪಾಲರನ್ನು ಭೇಟಿಮಾಡಲು ಹೋದಾಗ ರಾಜಭವನದ ಎದುರೇ ಪೇಜಾವರನ ಗೂಂಡಾ ಪಡೆ ಅವರ ಮೇಲೇ ರಾಕ್ಷಸರಂತೆ ಎರಗಿದ್ದು, ಪೇಜಾವರನ ಗೂಂಡಾಗಿರಿ, ಯಡ್ಡಿಯ ಕುಮ್ಮಕ್ಕು, ಪೊಲೀಸರ ಬಾಲಂಗೋಚಿತನವನ್ನು ಇಡೀ ರಾಜ್ಯಾದ್ಯಂತ ಜನರು ಪ್ರತಿಭಟಿಸಿದ್ದು ಈಗ ಇತಿಹಾಸ.

ಪೇಜಾವರ ವಿರುದ್ಧ ಸಿಬಿಐ ತನಿಖೆ?!

ಈಗ ಈ ಪ್ರಕರಣಕ್ಕೆ ಮತ್ತೊಂದು ತಿರುವೆಂಬಂತೆ ಪೇಜಾವರ ಸ್ವಾಮಿ, ಉಪ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಎಸಿಪಿ ಟಿ. ಗಂಗಾಧರ್ ನಾಯಕ್ - ಈ ಮೂವರು ಸೇರಿ ತಮ್ಮ ವಿರುದ್ಧ ಕ್ರಿಮಿನಲ್ ಸಂಚು ನಡೆಸಿದ್ದಾರೆಂದೂ, ಅದಕ್ಕೇ ತಮ್ಮ ಬಳಿ ಬಲವಾದ ಸಾಕ್ಷ್ಯಾಧಾರಗಳಿವೆ ಎಂದೂ, ಈ ಮೂವರ ವಿರುದ್ಧ ಸಿಬಿಐ ತನಿಖೆ ನಡೆಸಬೇಕೆಂದೂ ಕೋರಿ ಪ್ರಕರಣದ ಬಲಿಪಶುಗಳಾದ ವೆಂಕಟೇಶ್ ಮತ್ತು ರುಕ್ಮಿಣಿಯವರು ಹೈಕೋರ್ಟ್‌ನಲ್ಲಿ ಅರ್ಜಿಹಾಕುವುದಕ್ಕೆ ಹೊರಟಿದ್ದಾರೆ.

ಪೇಜಾವರ ವಿರುದ್ಧ ಅವರು ಕಂಪ್ಲೇಂಟ್ ಕೊಟ್ಟ ತಕ್ಷಣ ಹಿಂದೂ ಮುಂದೂ ನೋಡದೇ, ಯಾರು ಸರಿ ಯಾರು ತಪ್ಪು ಎಂದು ಯೋಚಿಸದೇ ಕಂಪ್ಲೇಂಟ್ ಕೊಟ್ಟ ವೆಂಕಟೇಶ್ ವಿರುದ್ಧವೇ ಕ್ರಮ ಜರುಗಿಸಬೇಕೆಂದು ಯಡ್ಡಿ ತೀರ್ಪು ನೀಡಿದ್ದ. ಆ ಮೂಲಕ, ಪೇಜಾವರನನ್ನೂ, ಸಂಘಪರಿವಾರದ ಚೆಡ್ಡಿಗಳನ್ನೂ ಸಂತೃಪ್ತಿಡಿಸಿ ತಾನೆಷ್ಟು ದೊಡ್ಡ ಚೆಡ್ಡಿ ಹಾಕಿಕೊಂಡಿದ್ದೇನೆಂದು ತೋರಿಕೊಂಡಿದ್ದ. ತಾನೊಬ್ಬ ರಾಜಕಾರಣಿ ಎಂಬುದನ್ನು ಮರೆತು ತಾನೇ ಪೊಲೀಸು, ತಾನೇ ನ್ಯಾಯಾಲಯ, ತಾನೇ ಎಲ್ಲವೂ ಅಂದುಕೊಂಡು ವೆಂಕಟೇಶ್ ವಿರುದ್ಧ ಕ್ರಮ ಜರುಗಿಸಲು ಆದೇಶ ಮಾಡಿದ್ದ ಈ ಅಡ್ನಾಡಿ. ಯಡ್ಡಿಯ ಈ ಮಾತುಗಳು ಎಲ್ಲ ಪತ್ರಿಕೆಗಳ ಮುಖ ಪುಟಗಳಲ್ಲಿಯೇ ಪ್ರಕಟವಾಗಿದ್ದವು. ಆದರೆ ವೆಂಕಟೇಶ ಈಗ ಸಿಬಿಐ ತನಿಖೆಗೆ ಕೋರಿ ಹಾಕುತ್ತಿರುವ ಅರ್ಜಿಯಲ್ಲಿ ಇದನ್ನೂ ಒಂದು ಸಾಕ್ಷ್ಯವಾಗಿ ಬಳಸುತ್ತಿದ್ದಾರೆ.

ಯಡ್ಡಿಯ ಆದೇಶ ಕಿವಿಗೆ ಬೀಳುತ್ತಿದ್ದಂತೆಯೇ ಸೇವಕನಂತೆ ಕಾರ್ಯ ಮಗ್ನನಾದ ಎಸಿಪಿ ಗಂಗಾಧರ್ ಟಿ ನಾಯಕ್ ರಾತ್ರೋರಾತ್ರಿ ವೆಂಕಟೇಶ್ ಮತ್ತು ಅವರ ಅಕ್ಕ ರುಕ್ಮಿಣಿಯ ಮೇಲೆ ಮುಗಿಬಿದ್ದು, ಅವರನ್ನು ಬಂಧಿಸಿ ಎಳೆದೊಯ್ದು ಚಿತ್ರಹಿಂಸೆ ನೀಡಿದ. ಈ ಅವಿವೇಕಿ ಕೋರ್ಟಿನ ಎದುರು



ಪೇಜಾವರ ಎಲ್ಲಿದ್ದಾನೆಂದು ನನಗೆ ಗೊತ್ತಿಲ್ಲ ಎಂಬ ಹಾಸ್ಯಾಸ್ಪದ ಹೇಳಿಕೆ ನೀಡಿದ್ದಾನೆ. ಪೇಜಾವರನೇನೂ ಅಂಡರ್‌ಗ್ರೌಂಡ್ ಆಗಿರಲಿಲ್ಲ. ಆತ ಎಲ್ಲಿರುತ್ತಾನೆಂದು ಎಲ್ಲರಿಗೂ ಗೊತ್ತಿದೆ. ಆದರೆ ಪಾಪ ಎಸಿಪಿಗೆ ಗೊತ್ತಿರಲಿಲ್ಲವಂತೆ! ಅದೂ ಅಲ್ಲದೇ ಪೇಜಾವರನಿಗೆ ಪೊಲೀಸ್ ರಕ್ಷಣೆ ಕೊಡಲಾಗಿದೆ. ತಾವು ರಕ್ಷಣೆ ಕೊಡುತ್ತಿರುವ ವ್ಯಕ್ತಿಗಳು ಎಲ್ಲಿದ್ದಾರೆಂದು ಗೊತ್ತಿಲ್ಲದ ಸ್ಥಿತಿಯಲ್ಲಿ ಪೊಲೀಸ್ ಇಲಾಖೆ ಮತ್ತು ಎಸಿಪಿ ಇದ್ದಾರೆಂದರೆ ಇವರಿಗೆ ಏನೆನ್ನಬೇಕು? ವೆಂಕಟೇಶ್ ಹಾಕುತ್ತಿರುವ ಅರ್ಜಿಯಲ್ಲಿ ಈ ವಿಚಾರವನ್ನೂ ಪ್ರಸ್ತಾಪಿಸಲಿದ್ದಾರೆ.

ಕಳೆದ ಬಾರಿ ಕೇವಲ ಪೇಜಾವರನ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದಕ್ಕಾಗಿ ಯಡ್ಡಿ, ಚೆಡ್ಡಿ ಎಲ್ಲರಿಗೂ ಇಡಬಾರದ ಜಾಗದಲ್ಲಿ ಖಾರದ ಪುಡಿ ಇಟ್ಟಂತಾಗಿತ್ತು, ಅದಕ್ಕಾಗಿಯೇ ದೊಡ್ಡ ಯುದ್ಧವನ್ನೇ ಸಾರಿ ಪ್ರಜಾತಂತ್ರದ ಮೇಲೇ ಹಲ್ಲೇ ಮಾಡಿದ್ದರು. ಈಗ ವೆಂಕಟೇಶ್‌ರವರು ಪೇಜಾವರ, ಯಡ್ಡಿ ಮತ್ತು ಎಸಿಪಿ ಗಂಗಾಧರ್ ಟಿ ನಾಯಕ್ - ಈ ಮೂವರ ವಿರುದ್ಧವೂ ಸಿಬಿಐ ತನಿಖೆ ಕೋರಿ ಹೈಕೋರ್ಟ್‌ಗೆ ಹೋಗುತ್ತಿದ್ದಾರೆ. ಈ ಬಾರಿ ಚೆಡ್ಡಿ-ಯಡ್ಡಿ ಪಡೆ ಅದ್ಯಾವ ಅನಾಹುತ ಮಾಡುತ್ತೋ?

ಗೋವಾ ಕನ್ನಡಿಗರು ಬೀದಿಗೆ ಬಿದ್ದಾಗ ಗೌಡರೆಲ್ಲಿದ್ದರೂ

ಥೂತ್ತೇರಿ

ಯಾಹೂ

ತಾನು ಈ ದೇಶದ ಮಾಜಿ ಪ್ರಧಾನಿ ಎಂಬುದು ದೇವೇಗೌಡರಿಗೆ ಅರಿವಾದ ಕೂಡಲೇ ಗೋವಾ ಬೀಚಿನಲ್ಲಿ ನಡೆಯುತ್ತಿರುವ ಅಸೆಂಬ್ಲಿ ಚುನಾವಣೆ ಜ್ಞಾಪಕಕ್ಕೆ ಬಂದಿತಂತಲ್ಲಾ, ಬೀಚಿನ ಬಳಿಯ ಚುನಾವಣೆ ಎಂದರೆ ಅಲ್ಲಿ ಯಾವ ರಾಜಕಾರಣದ ಸಿದ್ಧಾಂತಗಳೂ ನಡೆಯುವುದಿಲ್ಲ ಎಂದು ಅನ್ನಿಸಿದ ಕೂಡಲೇ ಚಾಮುಂಡೇಶ್ವರಿ ಚುನಾವಣೆ ಸಮಯದ ಸಾಮಗ್ರಿಗಳನ್ನು ಸೂಟ್‌ಕೇಸ್‌ಗಳಿಗೆ ತುಂಬಿ ಕಳುಹಿಸಿ ಹಿಂದಿನಿಂದ ತಾವೂ ಹೊರಟರಂತಲ್ಲಾ. ಆದರೆ ಗೋವಾ ಪೊಲೀಸರಿಗೆ ಗೌಡರು ಹಿಂದೊಮ್ಮೆ ನಡೆಸಿದ ಉಪ ಚುನಾವಣೆಯ ಮಾಹಿತಿ ಲಭ್ಯವಾಗಿದ್ದ ಕಾರಣ ಮಾಲು ಸಮೇತ ಜೆಡಿಎಸ್ ಕಂಟ್ರಾಕ್ಟುದಾರರನ್ನು ಹಿಡಿದುಕೊಂಡು ಹೋದರಂತಲ್ಲಾ. ಆಗ ಜೆಡಿಎಸ್ ಜನ ಪರಿಪರಿಯಾಗಿ ಬೇಡಿಕೊಂಡು "ನಮಗೇನೂ ಗೊತ್ತಿಲ್ಲ ಸಾರ್. ಮಾಜಿ ಪ್ರಧಾನಿಗಳು ಸೂಟ್‌ಕೇಸ್ ಕಳಿಸಿದರು. ಅದರಲ್ಲೇನಿದೆ ಅಂತಲೂ ಗೊತ್ತಿರಲಿಲ್ಲ, ಅದರಲ್ಲೇನಾದರೂ ಇದ್ದರೆ ನಿಮಗರ್ಧ ನಮಗರ್ಧ" ಎಂದರಂತಲ್ಲಾ, ಆಗ ಗೋವಾ ಪೊಲೀಸರು ಅಂಡಿನ ಮೇಲೆ ಒದ್ದು "ಮಾಜಿ ಪ್ರಧಾನಿಗಳ ಹೆಸರೇಳುತ್ತೀರಾ?" ಎಂದು ರೇಗಿ ಅರೆಸ್ಟು ಮಾಡಿಯೇ ಬಿಟ್ಟರಂತಲ್ಲಾ, ಥೂತ್ತೇರಿ!

*****

ಹಾಸನ, ರಾಮನಗರದ ಜೊತೆಗೆ ಗೋವಾ ಸಾಮ್ರಾಜ್ಯವನ್ನು ಗೆಲ್ಲಬೇಕೆಂದು ಮದ್ದು ಗುಂಡಿನ ಸಮೇತ ಗೋವಾ ಕಡೆಗೆ ಹೊರಟಿದ್ದ ಗೌಡರಿಗೆ, ತಮ್ಮ ಸೈನ್ಯ ಸಾಮಗ್ರಿ ಸಮೇತ ಅರೆಸ್ಟಾಗಿರುವುದು ಗೊತ್ತಾದ ಕೂಡಲೇ "ಮಿಸ್ಟರ್ ಪೀಟರ್, ಮಿಸ್ಟರ್ ಪೀಟರ್, ಓಪನ್ ಯುವರ್ ಐಸ್" ಎಂದು ಅಬ್ಬರಿಸಿದರಂತಲ್ಲಾ, ಆಗ ಪಕ್ಕದಲ್ಲೇ ಇದ್ದ ದತ್ತ "ಸಾರ್, ಇಲ್ಲಿ ಪೀಟರ್ ಬಂದಿಲ್ಲಾ, ಬೇರೆ ಯಾರೋ ಇದಾನೆ. ಬಹುಶಃ ಅವನಿಗೆ ಈ ಪೀಟರ್ ಫೋನ್ ಮಾಡಿ ಹೇಳಿರಬೇಕು" ಎನ್ನಲಾಗಿ, ಗೌಡರಿಗೆ ಮೈಸೂರಲ್ಲಿ ಮಾಡಿದ್ದು ನೆನಪಿಗೆ ಬಂದು ಸೀದ ಹೋಗಿ ಗಾಂಧಿ ಪ್ರತಿಮೆಯ ಬಳಿ ಕುಳಿತು ಬೆವರತೊಡಗಿದರಂತಲ್ಲಾ, ಆಗ ಹಲವು ಗೋವಾ ಕನ್ನಡಿಗರು ಬಂದು ಗೌಡರನ್ನು ಕೊಂಡಾಡುತ್ತಿರುವಾಗ, ಉಳಿದವರು "ಗೋವಾ ಸರಕಾರ ಕನ್ನಡಿಗರ ಜೋಪಡಿಗಳನ್ನು ನೆಲಸಮ ಮಾಡಿ ಬೀದಿಗೆ ದೂಡಿದಾಗ ಈ ಗೌಡರು ಎಲ್ಲಿದ್ದರು?" ಎಂದು ಪ್ರಶ್ನಿಸಿದರಂತಲ್ಲಾ. ಆಗ ದತ್ತ "ಗೌಡರಾಗ ಮಾಜಿ ಪ್ರಧಾನಿಗಳಾಗಿದ್ದರು, ಹಾಗಾಗಿ ಬರಲಿಲ್ಲ" ಎಂದರಂತಲ್ಲಾ, ಅದಕ್ಕೆ ಗೋವಾ ಕನ್ನಡಿಗರು "ಈಗ?" ಎನ್ನಲಾಗಿ, "ಈಗವರು ಜೆಡಿಎಸ್ ಅಧ್ಯಕ್ಷರು. ಓಟು ಕೇಳಲು ಸೂಟ್‌ಕೇಸ್ ಸಮೇತ ಬಂದಿದ್ದರು. ಆದರೆ ಗೋವಾ ಪೊಲೀಸರು ಸೂಟ್‌ಕೇಸ್ ಕಿತ್ತುಕೊಂಡು ಹೋದರು" ಎಂದ ದತ್ತ ಅಳತೊಡಗಿದನಂತಲ್ಲಾ, ಆಗ ಗೋವಾ ಕನ್ನಡಿಗರು "ಈಗ ತಂದ ದುಡ್ಡನ್ನು ಆಗಲಾದರೂ ತಂದು ಕೊಟ್ಟಿದ್ದರೆ, ಜೋಪಡಿ ಹಾಕಿಕೊಳ್ಳುತ್ತಿದ್ದೆವು. ಗೌಡರು ಗಾಂಧಿ ಪ್ರತಿಮೆ ಬಳಿ ಕೂರುವುದಕ್ಕಿಂತ ನಮ್ಮ ಮನೆಗೇ ಬರಬಹುದಿತ್ತು" ಎಂದರಂತಲ್ಲಾ, ಥೂತ್ತೇರಿ!!



*****

ಸಿಲ್ಕ್‌ಸ್ಮಿತಾಳಂತೆ ಕಾಣುವ ಜಯಲಕ್ಷ್ಮಿ ಎಂಬ ನರ್ಸ್ ರೇಣುಚಾಕಾರ್ಯನೆಂಬ ಸ್ತ್ರೀದ್ವೇಷಿಗೆ ಭೂತ ಬಿಡಿಸುತ್ತಿರುವ ಪ್ರಸಂಗ ಕೆಲವು ಪತ್ರಿಕೆಗಳಿಗೆ ಮುಖಪುಟದ ಸುದ್ದಿಯಾದರೆ, ಕೆಲವು ಜನಿವಾರದ ಪತ್ರಿಕೆಗಳಿಗೆ ಕಡೆಪುಟದ ಟಿಪ್ಪಣಿಯಾಗಿದೆಯಂತಲ್ಲಾ, ಈ ಮಧ್ಯೆ ಈ ಪ್ರಕರಣ ಕುರಿತು ಕೆಲ ಮಹಿಳಾ ನಾಯಕಿಯರು ಪ್ರತಿಕ್ರಿಯೆ ಶಾನೆ ಸ್ವಾರಸ್ಯವಾಗಿದೆಯಂತಲ್ಲಾ,

ಬಾಯಿ ಬಡಿದುಕೊಳ್ಳುವುದರಲ್ಲಿ ಲಲಿತಾನಾಯಕ್ ಸ್ಥಾನವನ್ನು ತುಂಬಿರುವ ಸ್ವರ್ಣ ಪ್ರಭಾಕರ್ ಪ್ರಕಾರ "ಕಾಂಗ್ರೆಗಳು ರೇಣುಕಾಚಾರ್ಯ ಮತ್ತು ಜಯಲಕ್ಷ್ಮಿಯನ್ನು ಹಿಡಿದು ಹಗ್ಗದಲ್ಲಿ ಬಿಗಿದು ಚುಂಬನದ ಪೋಟೋ ತೆಗೆದಿದ್ದಾರೆ." ಇಂತಹ ಸಮಸ್ಯೆಯೊಳಗೆ ಸದ್ದಿಲ್ಲದೆ ಸಂಚರಿಸುತ್ತಿರುವ ಶೋಭಾ ಕರಂದ್ಲಾಜೆ ಪ್ರಕಾರ "ಅದು ಅವರ ವೈಯಕ್ತಿಕ ವಿಷಯ. ಅದರಲ್ಲಿ ಯಾರೂ ಮೂಗು ತೂರಿಸಬಾರದು."

ಇನ್ನು ವಯೋವೃದ್ಧ ವಿಧವೆ ಅಕಸ್ಮಾತ್ ಕುಂಕುಮ ಹಚ್ಚಿಕೊಂಡಂತೆ ಕಾಣುವ ರಾಮಚಂದ್ರೇಗೌಡನ ಪ್ರಕಾರ "ನಮ್ಮ ಪಾರ್ಟಿಯ ಅನರ್ಘ್ಯರತ್ನವಾದ ರೇಣುಕಾಚಾರ್ಯ ಊಟ ಮಾಡಿ ನಿದ್ರೆಗೆ ಹೋಗುವ ಮುನ್ನ ಲೈಂಗಿಕ ತೃಷೆಗಾಗಿ ಆ ಕಡೆ ಕೈಹಾಕಿ ಹೆಂಡತಿಯಾಗಿರದೆ ಜಯಲಕ್ಷ್ಮಿಯಾಗಿದ್ದಳು. ಸಹಜವಾಗಿ ಏನೋ ನಡೆಯಬಾರದ್ದು ನಡೆದುಹೋಯ್ತು, ಇದು ತೀರ ಮಾನವ ಸಹಜ ಪ್ರವೃತ್ತಿಯಾದ್ದರಿಂದ ಯಾರೂ ಕೂಡ ತುಟಿಬಿಚ್ಚಿ ಮಾತನಾಡಬಾರದು" ಎಂದರಂತಲ್ಲಾ, ಥೂತ್ತೇರಿ!!

*****

ಬಸವಣ್ಣನ ಜಾತಿಮೂಲದ ಬೇರನ್ನು ಸೋಸಿ, ತೊಳೆದು ಪ್ರಖರವಾಗಿ ಪ್ರದರ್ಶಿಸ ಹೊರಟಿರುವ ಬಂಜಗೆರೆ ಜಯಪ್ರಕಾಶ್‌ರ ಶೋಧನೆಯಿಂದ ಶಾನೆ ತಲೆಕೆಡಿಸಿಕೊಂಡು ವಿಪರೀತ ಸಂಶೋಧನೆಗೆ ತುತ್ತಾಗಿರುವ ಚಿ.ಮು. ಎಂಬ ಮಹಾ ಸಂಶೋಧಕ, ಆದದ್ದಾಗಲಿ ಎಂದು ಬಸವಣ್ಣನ ತಾಯಿಯ ಕಡೆಯವರನ್ನು ಹಿಡಿದು ತಂದು ಕೂರಿಸಿದರಂತಲ್ಲಾ, ಚಿ.ಮು. ಸಂಶೋಧನಾ ಸಾಹಸ ನೋಡಿದ ಕೆಲವರಾಗಲೇ "ನಾವು ಮಾಗಡಿ ಕೆಂಪೇಗೌಡನ ವಂಶಸ್ಥರು. ಹೇಗೆಂದರೆ ನಮ್ಮ ಅಜ್ಜಿಯ ಅಜ್ಜಿಯ ಅಜ್ಜಿಯನ್ನು ಕೆಂಪೇಗೌಡ ಮಡಗಿಕೊಂಡಿದ್ದ ಅದಕ್ಕೆ" ಎಂದು ವ್ಯಾಖ್ಯಾನಿಸುತ್ತಿರುವಾಗಲೇ, ಒಂದಿಬ್ಬರು ಸಾಬರು "ನಮ್ದು ಅಷ್ಟೇ ಶಾರ್, ನಮ್ದು ಅಜ್ಜಿದು ಅಜ್ಜಿದು ಅಜ್ಜಿಗೆ ಟಿಪ್ಪುಸುಲ್ತಾನ್ ಮಡಕ್ಕೊಂಡಿದ್ನಂತೆ. ಬೇಕಿದ್ರೆ ಹೋಗಿ ಆ ಚಿದಾನಂದುಂದು ಮೂರ್ತಿಗೆ ಕೇಳಿ" ಎಂದರಂತಲ್ಲಾ, ಥೂತ್ತೇರಿ!!

*****

ಈ ನಡುವೆ ಪ್ರಮೀಳಾ ನೇಸರ್ಗಿ ಎಂಬ ಬಾಯಿಬಡಕಿ. "ಅನುದೇವಾ ಹೊರಗಣವನು ಕೃತಿಯನ್ನು ಕೂಡಲೇ ಮುಟ್ಟುಗೋಲಾಕಿಕೊಂಡು, ಬಸವಣ್ಣನಿಗೆ ಅಂಟಿದ ಕೆಳಜಾತಿ ಕಳಂಕವನ್ನು ಕೂಡಲೇ ತೊಡೆದುಹಾಕಿ" ಎಂಬರ್ಥ ಬರುವಂತೆ ಕೂಗತೊಡಗಿದ್ದಾಳಂತಲ್ಲಾ, ಈಕೆಯ ಧ್ವನಿ ಕೇಳಿದ ಕೆಲ ಓಬೀರಾಯನ ಕಾಲದ ಜನ "ಆಕೆ ಇನ್ನೂ ಇದ್ದಾಳೆಯೇ? ಇಂದಿರಾಗಾಂಧಿಯನ್ನು ಬಾಯಿಗೆ ಬಂದಂತೆ ಬೈದುಕೊಂಡು ತಿರುಗುತ್ತಿದ್ದ ಆಕೆ ಇಂದಿರಾಗಾಂಧಿ ನಂತರ ಇಲ್ಲವಾದಳೆಂದು ಭಾವಿಸಿದ್ದೆವು. ಓಹ್ ದೇವರೇ ಕರ್ನಾಟಕದ ಗತಿಯೇನು?" ಎಂದರಂತಲ್ಲಾ, ಥೂ ಥೂ ಥೂತ್ತೇರಿ!!!

-ಯಾಹೂ

ದೀಪು ಖಲಾಸ್, ಕೊರಂಗು ಕೈ ಲ್ಯಾಪ್ಸ್!

ರಿವೇಂಜ್ ಕಿಲ್ಲಿಂಗ್ಸ್ 31


ರಾ. ಸೋಮನಾಥ್


ಅದು 2006ರ ಅಕ್ಟೋಬರ್ 16ನೇ ತಾರೀಖು!


ಅವತ್ತು ಬನಾಯ್ಸ್ ರಾಜೇಂದ್ರನ ಕೊಲೆಯತ್ನದ ಕೇಸು ಮತ್ತು ಮಂಜ್ಯ ಕೃಷ್ಣನ ಕೊಲೆ ಕೇಸು ಎರಡರದೂ ವಿಚಾರಣೆ ಬೆಂಗಳೂರಿನ ಎಂಟನೇ ಫಾಸ್ಟ್ ಟ್ರ್ಯಾಕ್ ಕೋರ್ಟ್‌ನಲ್ಲಿತ್ತು. ಅದಕ್ಕೆಂದು ಕೊರಂಗುವನ್ನು ಚಿತ್ರದುರ್ಗ ಜೈಲಿನಿಂದ ಡಿ.ಎ.ಆರ್. ವ್ಯಾನ್ ಒಂದರಲ್ಲಿ ಕರೆತರಲಾಗಿತ್ತು. ಒಬ್ಬ ಕೊರಂಗು ಮಾತ್ರವಲ್ಲ, ಜೊತೆಗೆ ಬೈಚಕುಪ್ಪೆಯ ಜಾನಿ, ಕೋತಿರಾಮ, ಕತ್ತಿಗುಪ್ಪೆಯ ಲಿಂಗ, ಕಾಟುರವಿ, ಕೊರಂಗು ಬಲಗೈ ಬಂಟ ದೀಪು, ಶಿವಣ್ಣಗೌಡ, ರಾಮ, ಕುರುಡ ಸೀನ- ಹೀಗೆ ಒಟ್ಟೂ ಒಂಭತ್ತು ಮಂದಿಯನ್ನು ಹೊತ್ತ ವ್ಯಾನು ಅಪರಾಹ್ನದ ಹೊತ್ತಿಗೆಲ್ಲ ಬೆಂಗಳೂರನ್ನು ತಲುಪಿ, ಕೋರ್ಟ್ ಮುಗಿಸಿದ್ದೇ ವಾಪಸ್ಸು ಸಂಜೆ ಆರೂವರೆಯ ಹೊತ್ತಿಗೆಲ್ಲ ತುಮಕೂರನ್ನು ದಾಟಿದೆ.

ಭದ್ರಕೋಟೆಯಂಥ ವ್ಯಾನು, ಜೊತೆಗೆ ಎಂಟು ಮಂದಿ ಸಹಚರರು, ಅವರ ಬೆಂಗಾವಲಿಗೆಂದು ಒಟ್ಟೂ ಎಂಟು ಮಂದಿ ಶಸ್ತ್ರಧಾರಿ ಪೊಲೀಸರು, ಆ ಪೈಕಿ ಇಬ್ಬರ ಕೈಲಿ ಕಾರ್ಬೈನ್ ಮಿಷಿನ್‌ಗನ್‌ಗಳು, ಇನ್ನಿಬ್ಬರ ಬಳಿ 303 ರೈಫಲ್‌ಗಳು, ಸಾಲದ್ದಕ್ಕೆ ಎಸ್ಸೈ ಮತ್ತು ಎಎಸ್ಸೈಗಳಿಬ್ಬರ ಸೊಂಟದಲ್ಲೂ ನೇತಾಡುತ್ತಿದ್ದ ಎರಡು ನೈನ್ ಎಂ.ಎಂ. ಪಿಸ್ತಲ್‌ಗಳು. ಇಂಥಾ ಶಸ್ತ್ರಧಾರಿ ಸರ್ಪಗಾವಲಿನಲ್ಲಿ ತನ್ನನ್ನು ಕೋರ್ಟಿಗೆ ಕರೆತಂದಿರುವಾಗ ಯಾವ ದುಷ್ಮನ್ ತಾನೇ ತನ್ನ ಮೇಲೆ ಕೈ ಮಾಡಬಲ್ಲ? ಹಾಗೊಮ್ಮೆ ಅಟೆಂಪ್ಟ್ ಮಾಡುವುದೇ ಆದರೆ ಬೆಂಗಳೂರಿನ ಕೋರ್ಟ್ ಆವರಣದಲ್ಲಿ ತಾನೆ? ಅಲ್ಲಿ ಕೊಂಚ ಹುಷಾರಾಗಿದ್ದು ಬಿಟ್ಟರೆ ಇನ್ನು ತನ್ನನ್ನು ಮುಟ್ಟುವವರ್ಯಾರು?

ಹಾಗೆಂದೇ ಲೆಕ್ಕ ಹಾಕಿದ್ದ ಕೊರಂಗು ತಾನಿದ್ದ ವ್ಯಾನು ತುಮಕೂರು ದಾಟುತ್ತಿದ್ದಂತೆ ನಿರಾಳವಾಗಿಬಿಟ್ಟಿದ್ದ. ಆದರೆ ಕಂಟಕ ಎಂಬುದು ಆತನ ಬೆನ್ನು ಹತ್ತಿದ್ದೇ ತುಮಕೂರಿನಿಂದ, ಕೊರಂಗುಗಾಗಲಿ ಆತನ ಜೊತೆಗಿದ್ದ ಕೋತಿರಾಮ, ಜಾನಿ, ಲಿಂಗ, ಕಾಟರ್‌ರವಿಯಂಥ ನಿಸ್ಸೀಮರಿಗಾಗಲಿ ಗೊತ್ತೇ ಆಗದ ಒಂದು ಸಂಗತಿಯೆಂದರೆ, ತುಮಕೂರಿನ ಬೈಪಾಸ್‌ನಲ್ಲಿ ಇವರ ವ್ಯಾನಿಗಾಗಿ ಹೊಂಚು ಹಾಕಿ ಕೂತಿದ್ದ ಹಂತಕರ ತಂಡವೊಂದು ಒಂದು ಟಾಟಾ ಸುಮೋ ಮತ್ತು ಒಂದು ಮಾರುತಿ ವ್ಯಾನಿನಲ್ಲಿ ಇವರನ್ನು ಹಿಂಬಾಲಿಸಿಕೊಂಡೇ ಬಂದಿದೆ!



ಶಿವಮೊಗ್ಗ ನಾಗ


ಹೆಬ್ಬೆಟ್ ಮಂಜ


ಪಾಯ್ಸನ್ ರಾಮು

ಅದು ಸಂಜೆ ಏಳೂವರೆಯ ಹೊತ್ತು. ಸಿರಾ ದಾಟಿ ಹಿರಿಯೂರು ಮುಟ್ಟುವುದಕ್ಕೂ ಮುನ್ನ ಸಿಗುವುದೇ ಜವಗೊಂಡನಹಳ್ಳಿ. ಅಲ್ಲಿನ ಜೈಭಾರತ್ ಡಾಬಾ ಕೊರಂಗುನ ಫೇವರೆಟ್ ಡಾಬಾಗಳಲ್ಲೊಂದು. ಇನ್ನರ್ಧ ಗಂಟೆಯೊಳಗೆ ಚಿತ್ರದುರ್ಗದ ಜೈಲು ಸೇರಬೇಕು. ಅದಕ್ಕೂ ಮುನ್ನ ಜವಗೊಂಡನಹಳ್ಳಿಯ ಡಾಬಾದಲ್ಲೇ ಊಟ ಮಾಡಿದರಾಯಿತು ಎಂದೇ ಕೊರಂಗು ಲೆಕ್ಕ ಹಾಕಿ ವ್ಯಾನಿನ ಡ್ರೈವರ್ ಶಿವಾಜಿಗೆ ಹೇಳಿದ್ದಾನೆ. ವ್ಯಾನು ಡಾಬಾ ಎದುರಿಗೆ ರಸ್ತೆಯಲ್ಲಿ ನಿಂತಿದ್ದರಿಂದ ಹಿಂಬಾಲಿಸಿ ಬಂದ ಹಂತಕರ ಪಡೆಗೆ ಗುರುತಿಸುವುದು ಕಷ್ಟವಿರಲಿಲ್ಲ. ಸಾಮಾನ್ಯವಾಗಿ ಜೈಭಾರತ್ ಡಾಬಾದಲ್ಲಿ ಗಿರಾಕಿಗಳು ಕಿಕ್ಕಿರಿಯುವುದೇ ಎಂಟುಗಂಟೆಯ ನಂತರ. ಏಳೂಕಾಲರ ಹೊತ್ತಿಗೆ ಇಡೀ ಡಾಬಾ ಖಾಲಿ ಹೊಡೆಯುತ್ತಿತ್ತು, ವ್ಯಾನಿನಿಂದ ಇಳಿದವರು ಇದ್ದಬ್ಬರಂತೆ ಅಲ್ಲಲ್ಲಿ ಹಂಚಿ ಹೋಗಿ ಬೇರೆಬೇರೆ ಟೇಬಲ್ಲುಗಳಲ್ಲಿ ಕೂತಿದ್ದಾರೆ. ಕೊರಂಗು ಒಂದು ಮೊಟ್ಟೆಬುರ್ಜಿ, ಎರಡು ರೊಟ್ಟಿ ಮತ್ತು ಒಂದು ದಾಲ್ ತಿಂದವನು ಊಟ ಸಾಕೆಂದು ಹೊರಬಂದು ಕುರ್ಚಿಯೊಂದರಲ್ಲಿ ಕೂತು ಸಿಗರೇಟು ಸೇದತೊಡಗಿದ್ದಾನೆ.

ಇಷ್ಟೆಲ್ಲ ಆಗುವ ಹೊತ್ತಿಗೆ ಸಮಯ ಏಳೂಮುಕ್ಕಾಲು. ಹಿಂಬಾಲಿಸಿ ಬಂದಿದ್ದ ಹಂತಕರು ಗಾಡಿಗಳನ್ನು ನೇರವಾಗಿ ಡಾಬಾ ಎದುರಿಗೇ ಬಂದು ನಿಲ್ಲಿಸದೇ ಅನತಿ ದೂರಕ್ಕೆ ಹೋಗಿ ಪಕ್ಕದ ಸರ್ವೀಸ್ ರೋಡಿನಲ್ಲಿ ಪಾರ್ಕ್ ಮಾಡಿದ್ದಾರೆ. ಡಾಬಾ ಸುತ್ತ ಇದ್ದ ಕಬ್ಬಿನ ಗದ್ದೆಗಳ ಮಧ್ಯೆ ಎಲ್ಲರೂ ಕೈಯಲ್ಲಿ ಮಚ್ಚು-ಲಾಂಗ್‌ಗಳನ್ನು ಹಿಡಿದು ಡಾಬಾ ಹೊಕ್ಕಿದ್ದಾರೆ. ಆ ಪೈಕಿ ಒಬ್ಬ ಕತ್ತಲಲ್ಲಿ ಪಕ್ಕದ ಪಂಕ್ಚರ್ ಅಂಗಡಿ ಮೂಲಕ ಹಾದು ಡಾಬಾಕ್ಕೆ ಹೊಂದಿಕೊಂಡಿದ್ದ ಚಿಲ್ಲರೆ ಅಂಗಡಿ ಬಳಿ ನಿಂತು ಬಿಸಲೇರಿ ಖರೀದಿಸುವವನಂತೆ ನಟಿಸಿ ಪೊಲೀಸರು ಪೊಜಿಷನ್ನು, ಊಟ ಮಾಡುತ್ತಿದ್ದವರ


ಕೈ ಲ್ಯಾಪ್ಸ್ ಮಾಡಿಕೊಂಡ ಕೊರಂಗು

ಸ್ಥಿತಿಗತಿ ಇತ್ಯಾದಿಗಳನ್ನೆಲ್ಲ ಸ್ಟಡಿ ಮಾಡಿದ್ದಾನೆ. ತಮ್ಮ ಬಳಿಯಿದ್ದ ಗನ್ನುಗಳನ್ನೆಲ್ಲ ನೆಲಕ್ಕೆ ಒರಗಿಸಿಟ್ಟು ಊಟ ಹೊಡೆಯುತ್ತಿದ್ದ ಪೊಲೀಸರನ್ನು ಗಮನಿಸಿದ್ದಾನೆ. ಅಲ್ಲಿಂದಲೇ ಹೊಂಚಿ ಕೂತಿದ್ದವರಿಗೆ ಸನ್ನೆ ಮಾಡಿ ಹೇಳಿದ್ದಾನೆ. ಸದ್ದೇ ಆಗದಂತೆ ಕತ್ತಲಲ್ಲಿ ಡಾಬಾದ ಮೇನ್ ಎಂಟ್ರಿ ಪ್ರವೇಶಿಸಿದ ಎಂಟು ಮಂದಿಯ ಒಂದು ಗುಂಪನ್ನು ಆವತ್ತು ಲೀಡ್ ಮಾಡಿದ್ದೇ ಹೆಬ್ಬೆಟ್ಟು ಮಂಜ. ಡಾಬಾದ ಹಿಂಬಾಗಿಲಿನಿಂದ ನಾಲ್ಕೈದು ಮಂದಿ ಹಂತಕರ ಜೊತೆ ನುಗ್ಗಿದ್ದು ಮುಲಾಮನ ತಮ್ಮ ಪದ್ಮಿ!

ಲಾಂಗ್ ಹಿಡಿದ ಹಂತಕರ ಪಡೆಯನ್ನು ಕಂಡಿದ್ದೇ ಊಟ ಮಾಡುತ್ತಿದ್ದ ರೌಡಿಗಳು ಚೆಲ್ಲಾಪಿಲ್ಲಿಯಾಗಿಬಿಟ್ಟರು. ಮುಂದಿದ್ದ ಹೆಬ್ಬೆಟ್ ಮಂಜ ನುಗ್ಗಿದವನೇ ತನ್ನ ಬಳಿಯಿದ್ದ ರಿವಾಲ್ವರ್‌ನಿಂದ ಫೈರ್ ಮಾಡಿದ್ದಾನೆ. ಇದ್ದಕ್ಕಿದ್ದಂತೆ ಕೊರಂಗು ಬಲಗೈ ಬಂಟ ದೀಪು ಉರ್ಫ್ ಸಂದೀಪ ಗಾಬರಿಯಾಗಿ ಬಚ್ಚಿಟ್ಟುಕೊಳ್ಳಲೆಂದು ವಾಷ್‌ಬೇಸಿನ್ ಇದ್ದ ಕೋಣೆಗೆ ನುಗ್ಗಿಬಿಟ್ಟ. ಮುಂದೆ ಓಡಲು ದಾರಿ ತಾನೇ ಇನ್ನೆಲ್ಲಿತ್ತು? ದಿಕ್ಕು ತೋಚದೇ ಆತ ಇನ್ನೇನು ವಾಪಸ್ಸು ತಿರುಗಬೇಕೆನ್ನುವಷ್ಟರಲ್ಲಿ ಎದುರಿಗೇ ಬಂದುಬಿಟ್ಟ ಹೆಬ್ಬೆಟ್ ಮಂಜ ಫೈರ್ ಮಾಡಿಬಿಟ್ಟ. ಗುಂಡು ಸೀದಾ ಎದೆಗೆ ನಾಟಿದೆ. ಅಷ್ಟೇ, ದೀಪು ಖಲಾಸ್!

ಬೈಚಕುಪ್ಪೆಯ ಜಾನಿ ಎದ್ದೂ ಬಿದ್ದು ಓಡಿದವನು ಹಿಂದಿದ್ದ ಕಬ್ಬಿನ ಗದ್ದೆಯಲ್ಲಿ ಮಲಗಿಬಿಟ್ಟ. ಜೊತೆಗಿದ್ದ ಕತ್ತಿಗುಪ್ಪೆ ಲಿಂಗ, ಕಾಟ್‌ರವಿ, ಕೋತಿರಾಮ ಎಲ್ಲರೂ ಡಾಬಾದಿಂದ ಹೊರ ಕ್ಕೋಡಿ ಹೋಗಿದ್ದಾರೆ. ಕಾವಲಿಗಿದ್ದ ಪೊಲೀಸರು ಲಾಂಗ್ ಹಿಡಿದು ನುಗ್ಗಿದ್ದ ಹಂತಕರ ಆವೇಶ ಕಂಡು ಅಡುಗೆ ಮನೆ ಹೊಕ್ಕು ಅಡಗಿ ಕೂತುಬಿಟ್ಟರು. ಇಷ್ಟಾಗಿದ್ದೇ ಆರು ಜನರಿದ್ದ ಹಂತಕರ ಗ್ಯಾಂಗ್ ಹೊರಗೆ ಕೂತು ಸಿಗರೇಟು ಸೇದುತ್ತಿದ್ದ ಕೊರಂಗು ಮೇಲೆ ಬಿದ್ದಿದೆ. ತಲೆಗೇ ಗುರಿಯಿಟ್ಟು ಬೀಸಿದ ಲಾಂಗಿಗೆ ಕೊರಂಗು ಕೈ ಅಡ್ಡ ಹಿಡಿದಿದ್ದಾನೆ. ಬಲಗೈನ ತೋರು ಬೆರಳೇ ತುಂಡಾಗಿಬಿದ್ದಿದೆ. ಅದು ಮಿಸ್ಸಾಯಿತೆಂದರೆ ಮತ್ತೊಬ್ಬ ಕುತ್ತಿಗೆ ಲಾಂಗ್ ಬೀಸಿದ್ದಕ್ಕೆ ಕೊರಂಗು ತನ್ನ ಎಡಗೈ ಅಡ್ಡವಿಟ್ಟರೆ ಆತನ ಎಡ ಹಸ್ತವೇ ಕತ್ತರಿಸಿ ನೇತಾಡುತ್ತಿತ್ತು. ತಲೆಗೆ ಸರಿಯಾಗಿ ಮೂರು ಲಾಂಗ್ ಏಟುಗಳು ಬಿದ್ದಿದ್ದವು.

ಇಷ್ಟೆಲ್ಲ ಅನಾಹುತದ ಮಧ್ಯೆಯೂ ಧೈರ್ಯ ಕೆಡದೇ ಪೊಲೀಸರ ಬಳಿಯಿದ್ದ ಗನ್ ಎತ್ತಿಕೊಂಡ ಕುರುಡ ಸೀನ ಕೊರಂಗು ಮುತ್ತಿಕೊಂಡಿದ್ದ ಹಂತಕರ ಬಳಿ ಬಂದವನೇ ಫೈರ್ ಮಾಡುವಂತೆ ನಟಿಸಿಬಿಟ್ಟ. ಸೀನನ ಕೈಯಲ್ಲಿ ಗನ್ನನ್ನು ನೋಡಿದ್ದೇ ಕೊರಂಗುನನ್ನು ಹಾಕಿ ಕತ್ತರಿಸುತ್ತಿದ್ದವರೆಲ್ಲ ಓಡಿಹೋಗಿದ್ದಾರೆ!

ಅಷ್ಟೇ. ಕೇವಲ ಐದು ನಿಮಿಷದಲ್ಲಿ ಅನಾಹುತ ನಡೆದುಹೋಗಿತ್ತು. ದೀಪು ವಾಷ್‌ಬೇಸಿನ್ ಬುಡದಲ್ಲೇ ಒರಗಿ ಹೆಣವಾಗಿ ಬಿದ್ದಿದ್ದ. ಕೊರಂಗು ವಿಕಾರವಾಗಿ ಚೀರಾಡುತ್ತಾ ಒದ್ದಾಡುತ್ತಿದ್ದ. ರಕ್ತ ಸೋರುತ್ತಲೇ ಇತ್ತು. ಹಂತಕರ ಪಡೆ ಪರಾರಿಯಾಗಿದ್ದು ಖಚಿತವಾಗುತ್ತಲೇ ಕತ್ತಲಲ್ಲಿ ಅಡಗಿದ್ದ ಕೋತಿರಾಮ, ಲಿಂಗ, ಕಾಟ್ ರವಿ, ಜಾನಿ ಮುಂತಾದವರೆಲ್ಲ ಬಂದಿದ್ದ ಡಿ.ಎ.ಆರ್. ವ್ಯಾನಿನಲ್ಲೇ ಕೊರಂಗುನನ್ನು ಹೇರಿಕೊಂಡು ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ತಂದಿದ್ದಾರೆ. ಸುದ್ದಿ ತಿಳಿದ ಚಿತ್ರದುರ್ಗದ ಪತ್ರಕರ್ತರು ಆಸ್ಪತ್ರೆಗೆ ಬಂದರೆ ಅಲ್ಲಿದ್ದ ಕೋತಿರಾಮ ಮತ್ತು ಲಿಂಗ ಫೋಟೋ ಏನಾದ್ರೂ ತೆಗೆದರೆ ನಿಮ್ಮನ್ನೇ ಕತ್ತರಿಸ್ತೀವಿ ಎಂದು ಕೂಗಾಡಿದ್ದಾರೆ. ಅಲ್ಲೇ ಇದ್ದ ಸಶಸ್ತ್ರ ದಳದ ಡಿವೈಎಸ್‌ಪಿ ಪ್ರಕಾಶ್ ಸಮಾಧಾನ ಮಾಡಲೆತ್ನಿಸಿದರೆ ಆತನನ್ನೂ ವಾಚಾಮಗೋಚರ ಬೈದಿದ್ದಾರೆ.

ಜವಗೊಂಡನಹಳ್ಳಿ ಡಾಬಾದ ಮೇಲೆ ಮುಲಾಮನ ಪಡೆ ನಡೆದ ದಾಳಿಯಿಂದಾಗಿ ಇಡೀ ಬೆಂಗಳೂರು ಅಂಡರ್‌ವರ್ಲ್ಡೇ ಥರಗುಟ್ಟಿ ಹೋಗಿತ್ತು. ಹಿಂದೆ ನಡೆದ ಮಚ್ಚನ ಹತ್ಯೆ, ಆನಂತರದ ಸೂರಿ-ಟೋನಿ ಜೋಡಿ ಕೊಲೆಗಳಿಗಿಂತಲೂ ಸಶಸ್ತ್ರಧಾರಿ ಪೊಲೀಸರ ಬೆಂಗಾವಲಿನಲ್ಲಿದ್ದ ದೀಪುವನ್ನು ಕೊಂದು, ಕೊರಂಗುವನ್ನು ಅರೆಜೀವ ಮಾಡಿದ ಮುಲಾಮನ ಶಿಷ್ಯರ ದಾಳಿಯೇ ಭಯಂಕರವಾಗಿತ್ತು. ಮತ್ತು ಆತನಕ ನಡೆದ ಎಲ್ಲಾ ರಕ್ತಪಾತಗಳಿಗಿಂತಲೂ ಅತ್ಯಂತ ಚಾಣಾಕ್ಷ ಕಾರ್ಯತಂತ್ರ ಅದಾಗಿತ್ತು.

ಬಹುಶಃ ಇಡೀ ದಾಳಿ ಚಿತ್ರದುರ್ಗದ ಡಿ.ಎ.ಆರ್. ಪೊಲೀಸರ ಶಾಮೀಲಿನೊಂದಿಗೇ ನಡೆದಿತ್ತಾ?

ಹೀಗೊಂದು ಪ್ರಶ್ನೆ ಸಹಜವಾಗೇ ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್ ತಂಡವನ್ನು ಕಾಡಿತ್ತು. ಕೊರಂಗು ತಂಡದ ಕಾವಲಿಗಿದ್ದ ಪೊಲೀಸ್ ಪಡೆಯ ನೇತೃತ್ವ ವಹಿಸಿದ್ದ ಸಬ್‌ಇನ್ಸ್‌ಪೆಕ್ಟರ್ ಪದ್ಮಾರೆಡ್ಡಿಗೆ ಆಗಲೇ ಐವತ್ತೆಂಟರ ಮುದಿ ವಯಸ್ಸು. ಇನ್ನೆರಡು ದಿನದಲ್ಲಿ ಆತ ನಿವೃತ್ತಿಯಾಗಿ ಬಿಡುತ್ತಿದ್ದ. ಇನ್ನೊಬ್ಬ ಪೇದೆ ಮಚ್ಚೇಂದ್ರಪ್ಪನೂ ಇನ್ನು ಕೆಲವೇ ತಿಂಗಳಲ್ಲಿ ರಿಟೈರಾಗುವವನಿದ್ದ. ಇತರೇ ಪೇದೆಗಳಾದ ರಾಂಪ್ರಸಾದ್, ಕಲ್ಲೇಶ್, ಕೆ. ಬಸವರಾಜ್, ಸುಭಾಶ್, ಚಂದ್ರ ನಾಯ್ಕ, ತಿಪ್ಪೇಸ್ವಾಮಿ, ರಾಜು ಮುಂತಾದ ಪೇದೆಗಳ ಪೈಕಿ ಕಾರ್ಬೈನ್ ಮಿಷಿನ್‌ಗನ್ ಇದ್ದದ್ದು ಬಸವರಾಜನ ಬಳಿ. ಆತ ಸುಮ್ಮನೇ ತನ್ನ ಗನ್ನಿನ ಕುದುರೆ ಎಳೆದರೂ ಸಾಕಿತ್ತು ಒಮ್ಮೆಗೇ ಮೂವತ್ತು ಗುಂಡುಗಳು ಹಾರುತ್ತಿದ್ದವು.

ತಮಾಷೆಯೆಂದರೆ ಅಂಥ ಶಕ್ತಿಶಾಲಿ ಗನ್ ಹಿಡಿದಿದ್ದರೂ ಬಸವರಾಜನಿಗೆ ಅದನ್ನು ಬಳಸುವುದು ಹೇಗೆಂದೇ ಗೊತ್ತಿರಲಿಲ್ಲ!

ಅಥವಾ ಗೊತ್ತಿದ್ದೂ ಗೊತ್ತಿಲ್ಲ ಎಂಬಂತೆ ಆತ ನಾಟಕವಾಡುತ್ತಿದ್ದ!

ವ್ಯಾನಿನ ಚಾಲಕ ಶಿವಾಜಿರಾವ್ ಅಲ್ಲೇ ಏಕೆ ಊಟಕ್ಕೆಂದು ನಿಲ್ಲಿಸಿದ? ಕೊರಂಗು ಹೇಳಿದ್ದಕ್ಕೇ ಆತ ವ್ಯಾನು ನಿಲ್ಲಿಸಿದ್ದನಾ? ಅಥವಾ ಶಿವಾಜಿರಾವ್ ಇಲ್ಲೇ ಊಟ ಮಾಡೋಣ ಎಂದಿದ್ದಕ್ಕೆ ಕೊರಂಗು ತಲೆದೂಗಿದ್ದನಾ? ಈ ಬಗ್ಗೆ ತನಿಖೆಯಾಗಿದ್ದರೆ ಕೊರಂಗು ಮೇಲಿನ ದಾಳಿಗೆ ಮುಲಾಮ ಅದೆಂಥಾ ತಯಾರಿ ನಡೆಸಿದ್ದ ಎಂದು ಬಯಲಾಗುತ್ತಿತ್ತು. ದುರ್ಗದ ಎಸ್ಪಿ ಸುಧೀರ್ ಪ್ರಾರಂಭದಲ್ಲಿ ಕಾವಲಿಗಿದ್ದ ಪೊಲೀಸರನ್ನೆಲ್ಲ ಸಸ್ಪೆಂಡ್ ಮಾಡ್ತೀನಿ ಎಂದವರು ಕ್ರಮೇಣ ವಿಷಯವನ್ನೇ ತೇಲಿಸಲಾರಂಭಿಸಿದರು. ದಾಳಿಯಲ್ಲಿ ಬಚಾವಾಗಿದ್ದ ಜಾನಿ ದಾಳಿಯಲ್ಲಿ ಗೋಪಾಲಯ್ಯ, ಕಡಬುಗೆರೆ ಪಾಯ್ಸನ್ ರಾಮು, ಸೀನ, ಬ್ರೇಕ್ ಜಗ್ಗಿ, ಬಸವ ಮುಂತಾದವರೆಲ್ಲ ಇದ್ದರು ಎಂದು ಅನಗತ್ಯವಾಗಿ ಇಲ್ಲದ ಹೆಸರುಗಳನ್ನೆಲ್ಲ ಸೇರಿಸಿಬಿಟ್ಟ.

ಅಲ್ಲಿಗೆ ಜವಗೊಂಡನಹಳ್ಳಿ ಅಟ್ಯಾಕ್ ಕೇಸೇ ಹಳ್ಳಹಿಡಿಯಿತು. ದಾಳಿಯಲ್ಲಿ ಹೆಬ್ಬೆಟ್ಟು ಮಂಜನಿದ್ದದ್ದು ನಿಜವಾಗಿತ್ತು. ಆದರೆ ಶಿವಮೊಗ್ಗ ನಾಗ ಖುದ್ದಾಗಿ ಭಾಗವಹಿಸಿರಲಿಲ್ಲ. ಆತ ತೆರೆಮರೆಯಲ್ಲಿದ್ದು ಮುಲಾಮನಿಗೆ ನೆರವಾಗಿದ್ದ. ಜೊತೆಗೆ ಮುಲಾಮನಿಗೆ ಹೆಬ್ಬೆಟ್ ಮಂಜನನ್ನು ಪರಿಚಯಿಸಿ ಜೊತೆ ಮಾಡಿಕೊಟ್ಟಿದ್ದೇ ಈತ. ಗೋಪಾಲಯ್ಯ, ಪಾಯ್ಸನ್ ರಾಮ, ಸೀನ ಯಾರೂ ದಾಳಿಯಲ್ಲಿರಲಿಲ್ಲವಾದರೂ ಜಿದ್ದಿಗೆ ಬಿದ್ದು ಜಾನಿ ಸುಳ್ಳುಸುಳ್ಳೇ ಹೆಸರು ಸೇರಿಸಿದ್ದಾನೆಂದು ಪೊಲೀಸರೇ ವಾದಕ್ಕಿಳಿದರು. ಕೊನೆಗೂ ಕೇಸಿಗೆ ಫಿಟ್ಟಾಗಿದ್ದು ಹೆಬ್ಬೆಟ್ಟು ಮಂಜ, ಮುಲಾಮ, ಶಿವಮೊಗ್ಗ ನಾಗ ಇತ್ಯಾದಿಗಳೇ.


ಕೊಲೆಯಾದ ದೀಪು

ಏಟು ಬಿದ್ದ ತಕ್ಷಣ 'ನಾನು ಬದುಕ್ತೀನಾ ಸಾರ್' ಎಂದು ಡಾಕ್ಟರುಗಳ ತಲೆ ತಿನ್ನುತ್ತಿದ್ದ ಕೊರಂಗುನನ್ನು ಹಿರಿಯೂರು ಆಸ್ಪತ್ರೆಯಿಂದ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಲಾಯ್ತು. ಅಲ್ಲಿ ಏಳು ದಿನಗಳ ಕಾಲ ಚೇತರಿಸಿಕೊಂಡ ಕೊರಂಗು ಆನಂತರ ವಿಕ್ಟೋರಿಯಾ ಆಸ್ಪತ್ರೆಗೆ ಶಿಫ್ಟಾದ. ಆತನ ಬಲಗೈನ ತೋರುಬೆರಳು ತುಂಡಾಗಿಬಿದ್ದಿತ್ತು. ಎಡಗೈನ ಅಂಗೈಯೇ ಸೆಪರೇಟ್ ಆಗಿತ್ತು. ಅನ್ಯಾಯವಾಗಿ ಪ್ರಾಣತೆತ್ತ ದೀಪು ಉರ್ಫ್ ಸಂದೀಪ್ ಮೂಲತಃ ಕುಪ್ಪಂನವನಾದರೂ ಬೆಳೆದಿದ್ದು ವೈಯಾಲಿಕಾವಲ್‌ನಲ್ಲೇ. ಮಲ್ಲೇಶ್ವರದ ಎಂಇಎಸ್ ಕಾಲೇಜಿನಲ್ಲಿದ್ದಾಗಲೇ ಕೊರಂಗು ಜೊತೆಬಿದ್ದು ಹಾದಿತಪ್ಪಿದವನು ಬನಾಯ್ಸ್ ರಾಜೇಂದ್ರನ ಮೇಲಿನ ದಾಳಿಯಲ್ಲೂ ಭಾಗವಹಿಸಿದ್ದ. ತಾಯಿಗಿದ್ದ ಒಬ್ಬನೇ ಮಗ ದೀಪು ಕ್ರೈಂ ಹುಚ್ಚಿಗೆ ಬಿದ್ದು ಪ್ರಾಣತೆತ್ತ ವಿಲಕ್ಷಣ ಗ್ಯಾಂಗ್‌ಸ್ಟರ್!

ಇಂಥ ಅದೆಷ್ಟು ಮಂದಿ ಹುಡುಗರು ಹೀಗೆ ಅನ್ಯಾಯವಾಗಿ ಕೊಲೆಯಾಗಿ ಹೋಗಿಲ್ಲ?

ಹಾಗೇ ಆವತ್ತು ಕೊರಂಗು ತಂಡದ ಮೇಲೆ ಆ ಥರದ ಡೇರ್-ಡೆವಿಲ್ ಅಟ್ಯಾಕ್ ಮಾಡಿದ ಹೆಬ್ಬೆಟ್ ಮಂಜನಿಗೆ ಹೇಗೆ ತಾನು ಜಿದ್ದೇ ಇಲ್ಲದೆ ದೀಪುವನ್ನು ಕೊಂದೆನೋ ಹಾಗೇ ಸಂಬಂಧವೇ ಇಲ್ಲದೆ ಮಾಡಿದ ಸುಪಾರಿ ಕೊಲೆಗಾಗಿ ಆದಾಗಿ ತಿಂಗಳಿಗೇ ತನ್ನನ್ನು ಪೊಲೀಸರು ಎನ್‌ಕೌಂಟರ್ ಮಾಡಿ ಕೊಲ್ಲುತ್ತಾರೆಂಬುದು ಕೂಡ ಗೊತ್ತಿಲ್ಲವೆಂದೇನಲ್ಲ, ಗೊತ್ತಿತ್ತು. ಜೊತೆಗೆ ಬಚಾವಾಗುವುದು ಕೂಡ ಚೆನ್ನಾಗಿ ಗೊತ್ತಿತ್ತು. ಆತನ ಆದರೆ ಅಂಥಾ ಕಲೆ ಶಿವಮೊಗ್ಗ ನಾಗನಿಗೆಲ್ಲಿತ್ತು? ಆತ ಶತಭಂಡ. ಆತನ ಜೊತೆಗೇ ಇನ್ನೊಬ್ಬನ ಹೆಸರೂ ಪೊಲೀಸರ ಹಿಟ್ ಲಿಸ್ಟಿನಲ್ಲಿ ಸೇರಿಹೋಯಿತು. ಅವನು ತಮಿಳು ಕುಮಾರ. ವಿಶೇಷವೆಂದರೆ ಹೆಬ್ಬೆಟ್ ಮಂಜ, ತಮಿಳು ಕುಮಾರ ಮತ್ತು ಶಿವಮೊಗ್ಗ ನಾಗ ಈ ಮೂವರೂ ಶಿವಮೊಗ್ಗದವರೆ. ಇಂಥ ಹುಂಬ ಶಿವಮೊಗ್ಗದ ಹುಡುಗರನ್ನು ಮುಂದಿಟ್ಟುಕೊಂಡೇ ಮುಲಾಮ ಕೊರಂಗುವನ್ನು ಮುಗಿಸಲು ಸ್ಕೆಚ್ ರೂಪಿಸಿದ್ದ.

ಯಾರ ಗ್ರಹಚಾರ ಕೆಟ್ಟಿತ್ತೋ; ಕೈ ತುಂಡಾದ ನಂತರವೂ ಕೊರಂಗು ಬದುಕುಳಿದು ಬಿಟ್ಟ!



ಸುನೀಲನ ಹತ್ಯೆಗೆ ಒಂಟೆಯ ಸ್ಕೆಚ್ಚು?

ಫೈಟಿಂಗ್ ಇನ್ ಪರಪ್ಪನ ಅಗ್ರಹಾರ

ಬೆಂಗಳೂರಿನ ಎಲ್ಲಾ ಗ್ಯಾಂಗ್‌ವಾರ್, ನಡುಬೀದಿ ಕೊಲೆಗಳು ಮತ್ತು ಸಕಲ ಅನಾಚಾರಗಳಿಗೆಲ್ಲ ಹೇಗೆ ಪೊಲೀಸ್ ವ್ಯವಸ್ಥೆಯನ್ನು ದೂರುತ್ತಾರೋ ಹಾಗೇ ಪರಪ್ಪನ ಅಗ್ರಹಾರ ಜೈಲೂ ಕೂಡ ಕಾರಣವಾಗುತ್ತಿದೆಯೆ?

'ಹೌದು' ಎನ್ನದೇ ವಿಧಿಯೇ ಇಲ್ಲ. ಇಲ್ಲದಿದ್ದರೆ ಜೈಲಿನ ಬ್ಯಾರಕ್ಕುಗಳಿಂದ ಇಂಥ ಸುದ್ದಿಗಳು ಹೊರಬೀಳುತ್ತಿರಲಿಲ್ಲ.

ನಿನ್ನೆ ಮೊನ್ನೆಯಷ್ಟೇ ಅಣ್ಣ ತಮ್ಮಂದಿರಂತಿದ್ದ ಒಂಟಿ ಮತ್ತು ಸುನೀಲರ ಮಧ್ಯೆ ಜೈಲೊಳಗೇ ಫೈಟಿಂಗ್ ನಡೆಯಿತೆಂದು ಟೀವಿ ನೈನ್ ವೀರಾವೇಶದ ಸುದ್ದಿ ಬಿತ್ತರಿಸಿದೆ. ಬೆನ್ನಲ್ಲೇ ಸುನೀಲನ ತಂಡಕ್ಕೂ ಬ್ರೇಕ್ ಜಗ್ಗಿಯ ಹುಡುಗರಿಗೂ ಹೊಡೆದಾಟವಾಯಿತೆಂಬ ಸುದ್ದಿಯೂ ಹೊರಬಿದ್ದಿದೆ. ಶಾರ್ಪ್‌ಶೂಟರ್ ಹಾವೇರಿ ಅಸ್ಲಂ ಮೇಲೆ ತರಕಾರಿ ಖಲೀಲ್ ಹುಡುಗರು ಹಲ್ಲೆಗೆ ಮುಂದಾದರಂತೆ ಎಂಬುದು ಒಂದು ವದಂತಿಯಾದರೆ, ಖಲೀಲ್‌ನ ಸೆಲ್ಲಿಗೇ ನುಗ್ಗಿ ಆತನನ್ನು ಹಾವೇರಿ ಅಸ್ಲಂ ಹುಡುಗರು ಅಟ್ಟಾಡಿಸಿ ಚಚ್ಚಿದರೆಂಬುದು ಇನ್ನೊಂದು ವರ್ತಮಾನ!

ಒಟ್ಟಿನಲ್ಲಿ ಪರಪ್ಪನ ಅಗ್ರಹಾರ ಜೈಲೆಂಬುದು ಬೆಂಗಳೂರಿನ ಗ್ಯಾಂಗ್‌ವಾರ್‌ನ ಸುರಕ್ಷಿತ ಅಭಯಾರಣ್ಯವಾಗಿಬಿಟ್ಟಿದೆ ಎಂಬುದಕ್ಕೆ ಅಲ್ಲಿನ ಪ್ರತಿನಿತ್ಯದ ಜೈಲು ಯುದ್ಧಗಳೇ ಸಮರ್ಥನೆ ಕೊಡುತ್ತಿವೆ.

ಟೀವಿ ನೈನ್‌ನ ಅದ್ಭುತ ಸಂಶೋಧನೆಯಂತೆ ನಿಜಕ್ಕೂ ಸುನೀಲ ಮತ್ತು ಒಂಟೆ ಹೊಡೆದಾಡಿಕೊಂಡಿದ್ದಾರಾ? ಅಂಡರ್‌ವರ್ಲ್ಡ್ ಆಧಿಪತ್ಯಕ್ಕಾಗಿ ಅವರಿಬ್ಬರಲ್ಲೇ ಕಚ್ಚಾಟ ವಿದೆಯಾ? ಈ ಥರದ ಸುದ್ದಿ ಏಕೆ ಹೊಗೆಯಾಡುತ್ತಿದೆ? ಅದರ ಮರ್ಮವೇನು?



ಕೊಲೆಯಾದ ಡಿಂಗಿ ಕೃಷ್ಣ

ಹಕೀಕತ್ತೇನೆಂದರೆ ಇದೇ ಮೇ 16ರ ಬೆಳಿಗ್ಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬ್ರೇಕ್ ಜಗ್ಗಿಯ ಹುಡುಗರಿಗೂ ಪಟಲ್ ಕಾಕ್ ಆಡುತ್ತಿದ್ದ ಸುನೀಲನಿಗೂ ಬಡಿದಾಟವಾಗಿದೆ. ಡಿಂಗಿ ಕೃಷ್ಣನನ್ನು ಕೊಂದ ಜಗ್ಗಿ ಶಿಷ್ಯರಾದ ಪೂರಿ ಶಿವ, ಕುಮಾರಿ, ರಾಬರಿಗಿರಿ, ಅಭಿಷೇಕ್ ಮುಂತಾದವರೆಲ್ಲ ಪರಪ್ಪನ ಅಗ್ರಹಾರ ಜೈಲಿನ ಮೂರನೇ ಬ್ಲಾಕ್‌ನಲ್ಲಿದ್ದರೆ ಪಕ್ಕದ ನಾಲ್ಕನೇ ಬ್ಲಾಕು ಹೇಳಿಕೇಳಿ ಸುನೀಲನ ಅಡ್ಡೆ. ಸದ್ಯ ಬೆಂಗಳೂರು ಅಂಡರ್‌ವರ್ಲ್ಡ್ ಹೇಗೆ ಇಬ್ಭಾಗವಾಗಿದೆಯೋ ಅದಕ್ಕೆ ತಕ್ಕಂತೆ ಪರಪ್ಪನ ಅಗ್ರಹಾರ ಜೈಲಾಧಿಪತಿ ಅಬ್ಬಾಯಿಯೂ ಪುಂಗಿ ಊದುತ್ತಿದ್ದಾರೆ. ಅದರರ್ಥ ಸುನೀಲನ ಬೆಂಬಲಿತ ಯಾವುದೇ ಗ್ಯಾಂಗಿನ



ವಿಜಿ



ಮುರುಳಿ, ಲೂಸ್ ಜಗದೀಶ, ಪ್ರಭಾಕರ, ಶಿವಕುಮಾರ

ಯಾರೇ ಹುಡುಗರು ಜೈಲಿಗೆ ಬಂದರೂ ಅವರನ್ನು ನಾಲ್ಕನೇ ಬ್ಲಾಕಿಗೆ ಹಾಕುವುದು ಆತನ ವಿರೋಧಿ ಗ್ಯಾಂಗಿನ ಯಾರೇ ಬಂಧಿಸಲ್ಪಟ್ಟರೂ ಅವರನ್ನು ಮೂರನೇ ಬ್ಲಾಕಿನಲ್ಲಿ ಜೋಪಾನ ಮಾಡುವುದು ಜೈಲ್ ಡಿಐಜಿ ಅಬ್ಬಾಯಿಯ ಜಾಯಮಾನ.


ಪ್ರತಿ ಗ್ಯಾಂಗಿಗೂ ಈ ರೀತಿ ತಂತಮ್ಮವರ ಜೊತೆಗೇ ಮಸಲತ್ತು ಮಾಡಲು ಬಿಟ್ಟರೆ ಅದು ಹೇಗೆ ತಾನೇ ಜೈಲಾಗಿ ಉಳಿಯುತ್ತದೆ?

ಇದರ ಪರಿಣಾಮವೇ ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ನಡೆದ ಜೈಲು ಫೈಟಿಂಗ್. ಆವತ್ತು ಬೆಳ್ಳಂಬೆಳಿಗ್ಗೆ ಶಿವಾಜಿನಗರದ ರೌಡಿ ಇಪ್ತಿಯಾಕ್ ಪೈಲ್ವಾನ್ ಜೊತೆ ಪಟಲ್ ಕಾಕ್ ಆಡುತ್ತಿದ್ದ ಸುನೀಲನ ಮೇಲೆ ವಿರೋಧಿ ಬಳ್ಳನ ಗ್ಯಾಂಗ್ ದಾಳಿ ಮಾಡಿದೆ. ಬಳ್ಳ, ರಾಬರಿ ಗಿರಿ, ವಿಶ್ವ ಇತ್ಯಾದಿ ಇಪ್ಪತ್ತಕ್ಕೂ ಹೆಚ್ಚು ಮಂದಿಯಿದ್ದ ತಂಡ ನುಗ್ಗಿದ್ದೇ ಸುನೀಲನ ಹುಡುಗರನ್ನು ಹಿಡಿದು ಬಡಿದಿದೆ. ಆವತ್ತು ಸುನೀಲನ ರಕ್ಷಣೆಗೆ ಇಪ್ತಿಯಾಕ್ ಪೈಲ್ವಾನ್ ನಿಲ್ಲದೇ ಹೋಗಿದ್ದರೆ ಏನಾಗುತ್ತಿತ್ತೊ!

ಇಷ್ಟಕ್ಕೆ ಪಿತ್ಥ ನೆತ್ತಿಗೇರಿದ ಜೈಲ್ ಡಿಐಜಿ ಅಬ್ಬಾಯಿ ಕಿಲ್ಲರ್ ಬಳ್ಳ ಉರುಫ್ ಗುರುಮೂರ್ತಿಯನ್ನು ಬಳ್ಳಾರಿ ಜೈಲಿಗೆ ಕಮಾನೆತ್ತಿಬಿಟ್ಟರು. ಸುನೀಲನಿಗೂ ವಾರ್ನ್ ಮಾಡಿದ್ದರು. ಆದರೆ ಘಾತಕಿಗಳ ಕಾಸಿಗೆ ಕೈಯೊಡ್ಡಿ ಜೈಲಧಿಕಾರಿಗಳೇ ಗ್ಯಾಂಗ್‌ವಾರು ಗುಂಪು ಕಟ್ಟಲು ಅನುವು ಮಾಡಿಕೊಟ್ಟಾಗ ಜೈಲು ಫೈಟಿಂಗ್ ತಾನೇ ಆದೆಲ್ಲಿಂದ ನಿಲ್ಲಲು ಸಾಧ್ಯ?

ಅಬ್ಬಾಯಿಗೆ ಇದು ಅರ್ಥವಾಗದ್ದೇನಲ್ಲ, ಆದರೆ ಈ ರೀತಿ ಕಮಾನೆತ್ತಿ ಕಾಸು ಮಾಡುವುದರ ಹೊರತಾಗಿ ಬೇರೆ ಆದಾಯವಿರಬೇಕಲ್ಲ? ಪರಿಣಾಮ ಪರ-ವಿರೋಧಿ ಎರಡೂ ಗ್ಯಾಂಗುಗಳು ಯಥಾವತ್ತಾಗೇ ಪರಪ್ಪನ ಅಗ್ರಹಾರ ಜೈಲಲ್ಲಿ ಬಲಿತುಕೊಂಡವು. ಜೈಲೆಂಬುದು ರೌಡಿಗಳ ಅಭಯಾರಣ್ಯವಾಗಿಹೋಯಿತು. ಜೈಲಲ್ಲಿದ್ದುಕೊಂಡೇ ಲ್ಯಾಂಡ್‌ಡೀಲ್ ಮಾಡುವುದು, ಸೆಲ್ ಒಳಗಿದ್ದುಕೊಂಡೇ ಹುಡುಗರನ್ನು ಬಿಟ್ಟು ಸ್ಕೆಚ್ ಹಾಕುವುದು, ಕೊಲ್ಲಿಸುವುದು ಇತ್ಯಾದಿ ನಡೆದೇ ಇತ್ತು. ಈ ಮಧ್ಯೆಯೇ ಡಿಂಗಿ ಕೃಷ್ಣನ ಕೊಲೆ ಸಂಭವಿಸಿದೆ.

ನೆಲಮಂಗಲದ ಬಳಿ ಕೊಲೆಯಾದ ಡಿಂಗಿ ಕೃಷ್ಣ ಗಾಯತ್ರಿನಗರದ ಲಕ್ಕಿಗೆ ಗುರು. ಹಾಗೇ ಸುನೀಲನಿಗೂ ಒಂದಾನೊಂದು ಕಾಲಕ್ಕೆ ಗುರುವಾಗಿದ್ದ. ಈ ಡಿಂಗಿಯ ತಮ್ಮ ಲಕ್ಕಿಯ ತಂಗಿಯನ್ನು ಪೀಡಿಸಿದನೆಂದು ರೊಚ್ಚಿಗೆದ್ದ ಲಕ್ಕಿಯೇ ಕ್ಯಾಪ್ಟನ್ ರಾಜನ ಜೊತೆ ಸೇರಿ ಆತನನ್ನು ಕೊಂದನೆಂಬುದು ಜಗ್ಗಿಯ ವಾದವಾದರೆ, ತನ್ನ ತಮ್ಮ ಪೂರಾದಿಯ ಹತ್ಯೆಗೆ ಡಿಂಗಿ ಕೃಷ್ಣನನ್ನು ಕೊಂದು ಜಗ್ಗಿ ಸೇಡು ತೀರಿಸಿಕೊಂಡನೆಂದು ಲಕ್ಕಿ ಕಿಡಿಕಾರಿದ್ದ. ಪೊಲೀಸರು ಈ ಕೇಸಿನಲ್ಲಿ ಜಗ್ಗಿ ಶಿಷ್ಯರಾದ ಪೂರಿ ಶಿವ, ಕುಮಾರಿ, ಅಭಿಷೇಕ್, ಪುಟ್ಟಸ್ವಾಮಿ ಮತ್ತು ಮೋರಿನಾಗನ ಕೊಲಿ ಕೇಸಿನಲ್ಲಿದ್ದ ಯಶವಂತಪುರದ ರಾಬರಿಗಿರಿಯನ್ನು ಫಿಟ್ ಮಾಡಿ ಜೈಲಿಗೆ ದಬ್ಬಿದ್ದಾರೆ. ಈ ಹೊತ್ತಿಗಾಗಲೇ ಸುನೀಲನ ಹುಡುಗರಿಗೂ ಜಗ್ಗಿ ಶಿಷ್ಯರಿಗೂ ಜೈಲಲ್ಲೇ ಒಂದು



ಸುನೀಲ ಮತ್ತು ಒಂಟೆ

ರೌಂಡ್ ಫೈಟಿಂಗ್ ನಡೆದು ಬಳ್ಳನನ್ನು ಬಳ್ಳಾರಿಗೆ ಕಮಾನೆತ್ತಿದ್ದೂ ಆಗಿತ್ತು.

ಆದರೆ ಡಿಂಗಿ ಕೃಷ್ಣನ ಕೊಲೆಗೆ ಪ್ರತೀಕಾರವಾಗಿ ಮೊನ್ನೆಯಷ್ಟೇ ಲಕ್ಕಿ ಗ್ಯಾಂಗ್‌ನ ಮುರುಳಿ, ಲೂಸ್ ಜಗದೀಶ, ಪ್ರಭಾ ಮತ್ತು ಶಿವಕುಮಾರ್ ಸೇರಿಕೊಂಡು ಅದೇ ನೆಲಮಂಗಲ ರೋಡಿನ ದೊಡ್ಡಣ್ಣ ಲೇಔಟಿನಲ್ಲಿ ಪೂರಿ ಶಿವನ ತಮ್ಮ ಲೊಡ್ಡೆ ಲೋಕಿಯನ್ನು ಕೊಚ್ಚಿ ಕೊಂದಿತು. ಇದು ಗೊತ್ತಾಗಿದ್ದೇ ಪೂರಿಶಿವ ಮತ್ತು ರಾಬರಿಗಿರಿ ಸೇರಿಕೊಂಡು ಜೈಲಲ್ಲೇ ಸುನೀಲನನ್ನು ಎತ್ತುತ್ತೀವಿ ಎಂದು ಕೂಗಾಡಿದ್ದಾರೆ. ಅದ ಪಕ್ಕದ ಸುನೀಲನ ಬ್ಲಾಕ್‌ಗೆ ಮುಟ್ಟುವುದು ಎಷ್ಟು ಹೊತ್ತು?

ರೊಚ್ಚಿಗೆದ್ದ ಸುನೀಲನ ಬಂಟ ಪಿ.ಸಿ. ಉರುಫ್ ವಿಜಯ್‌ಕುಮಾರ್ ಮೂರನೇ ಬ್ಲಾಕಿಗೆ ನುಗ್ಗಿದ್ದೇ ರಾಬರಿಗೆ ಇಟ್ಟಿಗೆಯಿಂದ ಚಚ್ಚಿಬಿಟ್ಟ. ಅದಕ್ಕೆ ಪ್ರತಿಯಾಗಿ ಸುನೀಲನ ಕಡೆಯ ಹುಡುಗರನ್ನು ಜಗ್ಗಿ ಗ್ಯಾಂಗ್ ಅಟ್ಟಾಡಿಸಿದೆ. ಇದಾಗಿದ್ದು ಮೇ 16ರ ಬುಧವಾರದಂದು. ಯಾವತ್ತು ಸುನೀಲನ ಕಡೆಯವರು ಚಾಕು ಹಿಡಿದು ನುಗ್ಗಿದರೆಂಬ ಸುದ್ದಿ ಅಬ್ಬಾಯಿ ಕಿವಿ ಮುಟ್ಟಿತೋ ಜೈಲಿನ ಎಲ್ಲಾ ಸಿಬ್ಬಂದಿಯನ್ನು ಸಜ್ಜುಗೊಳಿಸಿದ್ದೇ ಇಡೀ ಜೈಲಿನ ತಲಾಶ್ ಮಾಡಿದ್ದಾರೆ. ಭಕ್ಷಿ ಗಾರ್ಡನ್ನಿನ ರೌಡಿ ಗುಪ್ಪು, ಸುನೀಲ, ಅರಸಯ್ಯ, ಬನಶಂಕರಿ ವಿಜಿ, ಇಪ್ತಿಯಾಕ್ ಪೈಲ್ವಾನ್, ತರಕಾರಿ ಖಲೀಲ್ ಹೀಗೆ ಪ್ರತಿ ರೌಡಿಯ ಬಳಿಯೂ ಇದ್ದ ಮೊಬೈಲ್‌ಗಳೆಲ್ಲ ಅಬ್ಬಾಯಿಗೆ ಸಿಕ್ಕುಬಿಟ್ಟವೆ.


ಪರಿಸ್ಥಿತಿ ಹೀಗೇ ಮುಂದುವರಿದರೆ ಜೈಲಲ್ಲೇ ಹೆಣ ಬೀಳುವುದು ಗ್ಯಾರಂಟಿ ಎನ್ನಿಸಿದೆ ಅಬ್ಬಾಯಿಗೆ. ಅದಕ್ಕೆ ತಕ್ಕಂತೆ ತರಕಾರಿ ಖಲೀಲ್ ಮತ್ತು ಹಾವೇರಿ ಅಸ್ಲಂ ಪಡೆಗಳು ಒಂದಲ್ಲ ಎರಡು ಬಾರಿ ಬಡಿದಾಡಿವೆ. ಜರಗನಹಳ್ಳಿ ಸಂಜೀವನ ಮೇಲೆ ವಿಜಿಯ ಹುಡುಗರು ಏರಿಹೋಗಿದ್ದಾರೆ. ಶಿವಾಜಿನಗರದ ಡಾನ್ ತನ್ವೀರ್‌ಗೂ ಕೋಳಿ ಫಯಾಜ್ ಮಗ ಪಪ್ಪು ಹುಡುಗರಿಗೂ ಘರ್ಷಣೆಯಾಗಿದೆ. ಏನಾದರೂ ತಿಪ್ಪೆ ಸಾರಿಸಬೇಕಲ್ಲ, ಅದಕ್ಕೆ ಸುನೀಲ ಮತ್ತು ಒಂಟೆಯನ್ನು ಬಿಜಾಪುರ ಜೈಲಿಗೆ ಕಮಾನೆತ್ತಿದ್ದಾರೆ ಅಬ್ಬಾಯಿ. ಹಾಗೆ ಪೂರಿ ಶಿವ, ಕುಮಾರಿ, ಪುಟ್ಟ ಇತ್ಯಾದಿ ಹುಡುಗರನ್ನು ಬೆಳಗಾವಿಗೆ ಸಾಗಹಾಕಿದ್ದಾರೆ.

ತಮಾಷೆಯೆಂದರೆ ಪರಿಸ್ಥಿತಿಯ ತಲೆಬುಡ ಗೊತ್ತಿಲ್ಲದೆ ಟೀವಿ ನೈನ್ ಜೈಲಲ್ಲಿ ಸುನೀಲ ಮತ್ತು ಒಂಟೆ ಹೊಡೆದಾಡಿಕೊಂಡಿದ್ದಾರಂತೆ ಎಂಬ ಹಾಸ್ಯಾಸ್ಪದ ಸುದ್ದಿ ಬಿತ್ತರಿಸಿದೆ. ಹಾಗೊಮ್ಮೆ ಸುನೀಲ ಮತ್ತು ಒಂಟೆ ಹೊಡೆದಾಡಿದ್ದರೆ ಇಬ್ಬರೂ ಒಟ್ಟೊಟ್ಟಿಗೇ ಏಕೆ ಬಿಜಾಪುರ ಜೈಲಿಗೆ ಹೋಗಬೇಕಿತ್ತು? ಇಬ್ಬರೂ ಸೇರಿ ಹೊಡೆದಾಡಲು ನಿಂತಿದ್ದರೆಂಬ ಜೈಲು ಸಿಬ್ಬಂದಿಯ ಹೇಳಿಕೆಯನ್ನು ಟೀವಿ ನೈನ್ ಇಬ್ಬರ ನಡುವಿನ ಫೈಟಿಂಗ್ ಎಂದು ತಪ್ಪಾಗಿ ಅರ್ಥೈಸಿಕೊಂಡಿತೆ? ಅಥವಾ ಸುನೀಲನೇ ಈ ಥರದ ರೂಮರ್ ಹಬ್ಬಿಸುತ್ತಿರಬಹುದೆ?

ಜೈಲೆಂಬುದು ಘಾತಕಿಗಳ ಅಭಯಾರಣ್ಯವಾದರೆ ಇನ್ನೇನಾಗುತ್ತೆ?

-ರಾ. ಸೋಮನಾಥ್

ಐಲು ರೌಡಿ ಖಲೀಲ್‌ಗೆ ಅಸ್ಲಂ ಗೂಸಾ ಕೊಟ್ಟ



ಪರಪ್ಪನ ಅಗ್ರಹಾರ ಜೈಲೆಂಬುದು ಹೇಗೆ ಎಲ್ಲಾ ಪಾತಕಗಳ ಅಗ್ರಹಾರವಾಗಿ ರೂಪುಗೊಳ್ಳುತ್ತದೆ ಎಂಬುದಕ್ಕೆ ತರಕಾರಿ ಖಲೀಲ್ ಮತ್ತು ಹಾವೇರಿ ಅಸ್ಲಂ ಮಧ್ಯೆ ಪದೇಪದೇ ನಡೆದ ಮಾರಾಮಾರಿ ಮತ್ತೊಂದು ಉದಾಹರಣೆಯಂತಿದೆ.

ಮುಸ್ಲಿಂ ಅಂಡರ್‌ವರ್ಲ್ಡ್‌ನಲ್ಲಿ ಅತ್ತ ತನ್ವೀರ್ ಬೆಂಬಲವಿಲ್ಲ ಇತ್ತ ಇಪ್ತಿಯಾಕ್ ದುಷ್ಮನಿ ಮುಗಿದಿಲ್ಲ ಎಂಬ ಅತಂತ್ರ ಸ್ಥಿತಿಯಲ್ಲಿರುವವನು ತರಕಾರಿ ಖಲೀಲ್. ಸದ್ಯ ಗೋರಿಪಾಳ್ಯದ ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಹೊರತಾಗಿ ಖಲೀಲ್‌ಗೆ ಹಿಂದಿನ ಬೆಂಬಲವಿಲ್ಲ. ಇಂಥಾ ಸ್ಥಿತಿಯಲ್ಲಿ ಖಲೀಲ್ ಮಂಡ್ಯದಿಂದ ಬೆಂಗಳೂರು ಜೈಲಿಗೆ ಶಿಫ್ಟಾಗಿ ಬಂದ ಶೂಟರ್ ಹಾವೇರಿ ಅಸ್ಲಂನನ್ನು ಅನಗತ್ಯವಾಗಿ ಬೆದರಿಸಲು ಯತ್ನಿಸಿ ತನ್ನ ಕಡೆಯ ನಾಲ್ಕರು ಪಂಟರುಗಳನ್ನು ಅಸ್ಲಂನ ಮೇಲೆ ಛೂಬಿಟ್ಟ. ವಿನಾಕಾರಣ ಕ್ಯಾತೆ ತೆಗೆದ ಖಲೀಲ್ ಬಂಟರನ್ನು ಕರಾಟೆ ಕಲಿತಿದ್ದ ಅಸ್ಲಂ ಒಬ್ಬನೇ ಹಿಗ್ಗಾಮುಗ್ಗಾ ಬಾರಿಸಿ ಓಡಿಸಿಬಿಟ್ಟ. ಅಷ್ಟಕ್ಕೇ ಅವಮಾನಿತವಾದ ಖಲೀಲ್ ನಿನ್ನನ್ನ ಮತ್ತೇ ಬಿಡ್ತೀನಿ ಎಂದು ಅಸ್ಲಂಗೆ ಧಮಕಿ ಕೊಟ್ಟ.

ಇಷ್ಟಾದ ಮೇಲೆ ಅಸ್ಲಂ ಸುಮ್ಮನಿರುತ್ತಾನಾ? ಹೇಳಿಕೇಳಿ ಗೋರಿಪಾಳ್ಯದ ಅಲ್ತಾಫ್‌ನ ಪರಮಾಪ್ತನಾದ ಅಸ್ಲಂ ಅದೇ ಜೈಲಿನಲಿದ್ದ ಮತ್ತೊಬ್ಬ ಅಲ್ತಾಫ್ ಶಿಷ್ಯನಾದ ಗೋರಿಪಾಳ್ಯದ ಲಡ್ಡು ಎಂಬಾತನ ಜೊತೆ ಇನ್ನಷ್ಟು ಹುಡುಗರನ್ನು ಜೊತೆ ಮಾಡಿಕೊಂಡಿದ್ದೇ ತನ್ನ ಸೆಲ್ ಮೇಲೆ ದಾಳಿಗೆ ಬಂದ ತರಕಾರಿ ಖಲೀಲ್ ಮತ್ತು ಆತನ ಸಹಚರರನ್ನು ಸಮಾ ಚಚ್ಚಿ ಓಡಿಸಿಬಿಟ್ಟ. ಈ ಘಟನೆ ಕೂಡ ಸುನೀಲನಿಗೂ ರಾಬರಿಗಿರಿ ಟೀಮಿಗೂ ಫೈಟಿಂಗ್ ನಡೆದ ಮರುದಿನವೇ ನಡೆಯಿತು. ಅಷ್ಟಕ್ಕೂ ತರಕಾರಿ ಖಲೀಲ್‌ನಂಥ ಹುಚ್ಚನನ್ನು ಅಷ್ಟೊಂದು ಸ್ವಚ್ಛಂದವಾಗಿ ಮೆರೆಯಲು ಅವಕಾಶ ಕೊಟ್ಟವರು ಯಾರು?

ಜೈಲು ದೊರೆಗಳ ತುಘಲಕ್ ದರ್ಬಾರ್‌ಗೆ ಅಂಕುಶವೆಲ್ಲಿದೆ?





ಬಿಜೆಪಿ ಶಾಸಕ ರೇಣುಕಾಚಾರ್ಯ ಎಂತಾ ಅವಿವೇಕಿ ಮುಠ್ಠಾಳನೆನ್ನಲು ಇಲ್ಲಿ ಪ್ರಕಟಿಸಿರುವ ಟೆಲಿಫೋನ್ ಸಂಭಾಷಣೆಯೇ ಸಾಕ್ಷಿ. ಜಯಲಕ್ಷ್ಮಿಯ ಕೆಲಸಗಾರ ಮನೋಜ್ ಎಂಬ ಮಲೆಯಾಳಿ ಜೊತೆ ಬ್ಲಾಕ್‌ಮೇಲ್ ಧಾಟಿಯಲ್ಲಿ ಕಿರುಚಿಕೊಳ್ಳುವ ರೇಣುಕಾ ಮಾತಿಗೆ ಮುಂಚೆ ಮದರ್ ಪ್ರಾಮಿಸ್ ಮಾಡುತ್ತಾ, ಪೋಕರಿ ಹುಡುಗನಂತೆ 'ಅವಳ ಫೋಟೋ ಐತಿ, ಏನ್ ಮಾಡ್ತಿನ್ನೋಡು' ಎಂದು ಧಮಕಿ ಹಾಕಿದ್ದಾನೆ. ಪೊಲೀಸರು ಇವನನ್ನು ಒದ್ದು ಒಳಗಾಕಲು ಇಷ್ಟೇ ಸಾಕು.

ಹಡಬೆ ರೇಣುಕನೂ ... ಮಲೆಯಾಳಿ ಮನೋಜನು...

ಬಿಜೆಪಿ ಶಾಸಕ ರೇಣುಕಾಚಾರ್ಯ ಎಂಥ ಪೋಕರಿ ಸ್ವಭಾವದವನೆನ್ನಲು ಅವನು ಜಯಲಕ್ಷ್ಮಿಗೆ ಹಾಕಿರುವ ಬೆದರಿಕೆಗಳೇ ಸಾಕ್ಷಿ. ಈ ಹಿಂದೂ ವೀರನು ಇಮತ್ತೊಬ್ಬ ಹಿಂದೂ ಮಹಿಳೆಯ ಬಗ್ಗೆ ಆಡಿರುವ ಮಾತುಗಳನ್ನು ಯಥಾವತ್ತಾಗಿ ಇಲ್ಲಿ ನೀಡಿದೆ. ರೇಣುಕನ ಜೊತೆ ಫೋನ್‌ನಲ್ಲಿ ಮಾತಾಡಿರುವ ಇನ್ನೊಬ್ಬ ವ್ಯಕ್ತಿಯ ಹೆಸರು ಮನೋಜ್. ಈತ ಜಯಲಕ್ಷ್ಮಿಯ ಗ್ರೀನ್ ಸಿಟಿ ನರ್ಸಿಂಗ್ ಕಾಲೇಜಿನವನು.

ಮನೋಜ್: ಇಲ್ಲಾ ನಿನ್ನೆ ಫೋನ್ ಮಾಡಿದ್ದೀವಿ......

ರೇಣುಕಾಚಾರ್ಯ: (ಮಧ್ಯೆ ಮಾತಾಡುತಾ) ಮದರ್ ಪ್ರಾಮಿಸ್ ಎಲ್ಲಾ ವಿಷಯ ಮಾತಾಡಿದ್ದೀನಿ.

ಮನೋಜ್: ಇಲ್ಲಾ ಏನ್ ಗೊತ್ತಾ ಅವರೇನೇಳಿದರು ಗೊತ್ತಾ ಇಲ್ಲಾ ಮನೋಜ್ ಅವರೆ, ಅವರ ಹತ್ತಿರ ಅಂತಾದ್ದೇನೂ ಇಲ್ಲಾ, ಫೋಟೋ ತೆಗೆಯೋಕೇ ಛಾನ್ಸ್ ಇಲ್ಲ, ಸುಮ್ನೆ ಹೇಳಿ ಯಾತಕ್ಕೆ ನಿಮ್ಗೆ disturb ಕೊಡ್ತಾರೆ ಗೊತ್ತಿಲ್ಲ, ಆ ಥರ.

ರೇಣುಕಾಚಾರ್ಯ: ಮನೋಜ್ (ನಡುವೆ ನಾಯಿ ಬೊಗಳುವ ಶಬ್ಧ) ಮದರ್ ಪ್ರಾಮಿಸ್ ನನ್ನ ಹತ್ತಿರ ಫೋಟೋಸ್ ಇದೆ, ಮಂಗಳವಾರ ಬೆಳಗ್ಗೆ ನೀವು ಸಿಕ್ಕಿದರೆ... ಈಗ ಫೋನ್ ಮಾಡಿದ್ದೆ ಅಂತಾ ಹೇಳಕ್ ಹೋಗ್‌ಬೇಡಿ, ಎಲ್ಲಾ ಜರ್ನಲಿಸ್ಟೂ ಫೋಟೋ ಕೇಳ್‌ತಿದಾರೆ ಈಗ, ನಾನು ಅವಳ ಇಮೇಜ್ ಹಾಳಾಗುತ್ತೆ ಲೈಫ್ ಹಾಳಾಗುತ್ತೆ ನಾನು ಅವಳು ಚೆನ್ನಾಗಿದ್ದೆವು, ಬಹಳ close ಆಗಿದ್ವಿ, ಎಲ್ಲಾ ರೀತಿ ಒಟ್ಟಿಗಿದ್ವಿ, ಅವಳ ಲೈಫ್ ಹಾಳಾಗ್‌ಬಾರದೂಂತ ಬಹಳ ಸಿಂಪಥಿ ಇದೆ ನನಗೆ, ನನಗೆ ಫೀಲ್ ಇದೆ.

ಮನೋಜ್: ಆ.... ಹ್ಞಾ!

ರೇಣುಕಾಚಾರ್ಯ: ಹ್ಞಾ

ಮನೋಜ್: ಆ... ಆಮೇಲೆ ಅವ್ರು ನನಗೆ ಹೆಲ್ಪ್ ಏನೂ ಮಾಡಿಲ್ಲ, ಸುಮ್ನೆ... ನಿಮಗೇ ಡಿಸ್ಟರ್ಬ್ ಕೊಡ್ತಾರೆ ಮನೋಜ್ ಅಂದ್ರು.

ರೇಣುಕಾಚಾರ್ಯ: ಏನ್ ಮನೋಜ್.

ಮನೋಜ್: ನಿಮ್ಗೆ ಡಿಸ್ಟರ್ಬ್ ಕೊಡ್ತಾರೆ, ಅವ್ರು ಹುಳ್ಳೇಳ್ತಾರೆ, ಅವ್ರುತ್ರ ಏನು ಇಲ್ಲಾ ಮನೋಜ್ ನೀನು ಟೆನ್ಷನ್ ಮಾಡ್‌ಬೇಡ, ಫೋಟೋ ತೆಗೆಯೋಕೆ ಛಾನ್ಸೇ ಇಲ್ಲಾ... ಅಂತಾರೆ

ರೇಣುಕಾಚಾರ್ಯ: ಮನೋಜ್, ಫೋಟೋ ತೆಗೆಯೋಕೆ ಛಾನ್ಸೇ ಇಲ್ಲಾ... ಎಲ್ಲಾ ಅವಳೇ ಕೊಟ್ಟಿರೊ ಫೋಜ್‌ಗಳು... ಐನೂರು ಫೋಟೋಸ್ ಇವೆ ನನ್‌ತಾಕೆ, ಬೇಕಾದ್ರೆ ತೋರುಸ್ತಾ.

ಮನೋಜ್: (ನಿಧಾನವಾಗಿ) ಹೌದಾ....!

ರೇಣುಕಾಚಾರ್ಯ: ಮ...ಮ.... ಮದರ್ ಪ್ರಾಮಿಸ್, ನಾನ್ ಸುಳ್ ಹೇಳಲ್ಲ

ಮನೋಜ್: ಆ...ಹಾ....

ರೇಣುಕಾಚಾರ್ಯ: ಮದರ್ ಪ್ರಾಮಿಸ್, ನಿಮಗ್ ತೋರುಸ್ತಾ, ಆವಾಗ್ ನಂಬಿಕೆ ಬರುತ್ತೆ, ನಾನ್ ಒಂದು ಫೋಟೋ ಕೊಟ್ರೆ ಅಂದ್ರೆ ಅವಳ್ ಲೈಫೇ scrap ಆಕತೆ, ಆಗಬಾರದೂಂತ ನನಗೆ ಸಿಂಪಥಿ ಇದೆ.

ಮನೋಜ್: ಆ... ಹ್ಞಾ, ಹ್ಞಾ, ಹ್ಞಾ

ರೇಣುಕಾಚಾರ್ಯ: (ಮುಂದುವರಿಸುತ್ತಾ, ತೊದಲುತಾ) ಅವಳು ನನ್ ಮ್ಯಾಲೆ ಎಲ್ರಿಗೂ... ನನ್ನ್ ಮ್ಯಾಲೆ ಚಾಲೆಂಜ್ ಮಾಡ್ತಾನೆ, ನನ್ ಮೇಲೆ... ನಾನು ನಾನು ಒಬ್ಬ ಜೆಂಟ್ಸು, ನಾನು ಅನಿವಾರ್ಯ ಮತ್ತೆ ಬೇಕು... ಕೊಟ್ರೆ ಅಂದ್ರೆ ಅವ್ರುಳ್ ಲೈಫು ಸ್ಕ್ಯಾಪ್ ಆಗುತ್ತೆ.

ಮನೋಜ್: ಉ... ಹ್ಞುಂ ಹಾ.

ರೇಣುಕಾಚಾರ್ಯ: (ಉತ್ಸಾಹದಿಂದ) ನಿಮಿಗೆ ಮಂಗಳವಾರ ಫೋಟೋ ತೋರಿಸಿದ್ರೆ ಗೊತ್ತಾಗುತ್ತಾ.

ಮನೋಜ್: ಓಕೆ ಹ್ಞಾ, ಹ್ಞಾ,

ರೇಣುಕಾಚಾರ್ಯ: ಈಗ ಮನೋಜ್, ನಿಮಗೆ ಇಂಟರೆಸ್ಟ್ ಇದ್ರೆ, ನಿಮಗೆ ಫೋರ್ಸ್ ಮಾಡಲ್ಲ, ಡಿಸ್ಟರ್ಬ್ ಮಾಡಲ್ಲ.

ಮನೋಜ್: (ತಡೆಯುತಾ) ಇಲ್ಲಾ ನನ್ಗೇನ್ ಗೊತ್ತಾ ಪ್ರೋಬ್ಲಂ ಆಗ್‌ಬಾರ್ದು, ಕ್ಲೀಯರ್ ಆಗ್‌ಬೇಕು, ಅಷ್ಟೆ.

ರೇಣುಕಾಚಾರ್ಯ: (ಗದ್ದನೆಂಬ ದನಿಯಲ್ಲಿ) ಮನೋಜ್ -ಈಗ ನಾನ್ ಮನಸ್ ಮಾಡಿದ್ರೆ ಏನ್ ಬೇಕಾದ್ರೂ ಮಾಡ್ತೀನಿ (ಮತ್ತೆ ಉದ್ವೇಗದಿಂದ) ಚಾಲೆಂಜ್ ಮಾಡಿದ್ರೆ, ಬಟ್ ನಾನು ಭಾಳ ಸುದಾರಿಸ್‌ಕಂಡ್ ಬಂದಿದ್ದೀನಿ, ನನ್ ಬಗ್ಗೇನೇ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟದಾಳೆ, ಅದ್ಕುತ್ತರ ನಾನ್ ಕೊಟ್ಟದೀನಿ.

ಮನೋಜ್: (ಬರೀ ಹ್ಞಾ, ಹ್ಞಾ, ಹ್ಞಾ).

ರೇಣುಕಾಚಾರ್ಯ: (ಬೇಡಿಕೊಳ್ಳುವ ದನಿಯಲ್ಲಿ) ನೀವ್ ಮಂಗಳವಾರ ನೀವು ಡೆಫನೇಟ್ ಸಿಗ್ತಿನಂದ್ರೆ ಫೋನ್ ಮಾಡ್ತೀನಿ, ಇಲ್ಲಾಂದ್ರೆ, ಇವ್ನೆನಪ್ಪ ಎಂಎಲ್‌ಎ, ಯಾಕಿಂಗೆ ಡಿಸ್ಟರ್ಬ್ ಮಾಡ್ತಾನೆ, ನಿಮ್ಗೆ ಆ ರೀತಿ ಮೆಂಟಾಲಿಟಿ ಇದ್ರೆ ನಾನ್ ಫೋನ್ ಮಾಡಲ್ಲ,

ಮನೋಜ್: ಇಲ್ಲಾ ನಮ್ಗೆ ಏನೂ ಆ ರೀತಿ ಇಲ್ಲಾ ನಮ್ಗೆ ಏನ್ ಹುಮಾನಿಟೇರಿಯನ್ ತಾನೆ (ಹಾಗೆಂದರೆ ಏನೊ ಭಗವಂತನೇ ಬಲ್ಲ) ಒಳ್ಳೆ ತರ ಆಗ್‌ಬೇಕ್ ಅಷ್ಟೆ.

ರೇಣುಕಾಚಾರ್ಯ: (ಉದ್ವೇಗದಿಂದ) ಹೌದು ತಾನೆ?

ಮನೋಜ್: ಎಲ್ರಿಗೂ ಒಳ್ಳೆದಾಗ್ಬೇಕು ತಾನೆ. ಸುಮ್ನೆ ಅವ್ರು ತೊಂದ್ರೆ ಕೊಟ್ರು. ಇವ್ರು ತೊಂದ್ರೆ ಕೊಟ್ರು, ಆ ತರಾ ಎಲ್ಲಾ ಬೇಕಾ?

ರೇಣುಕಾಚಾರ್ಯ: ಇಲ್ಲಾ.... ನಾನು ಫಾದರ್ ಹತ್ರ ಓಗ್ತೀನಿ, ಇವಳ್ ಫೋಟೋಸ್ ತಗಂಡೂ, ಇವಳ್‌ಗೆ ಬಿಲ್ಡಿಂಗ್ ಕೊಡ್‌ಬೆಡ್ರಿ, ಕ್ಯಾರಕ್ಟರ್ ಸರಿ ಇಲ್ಲ ಅಂತಾ, ಒಂದು ಮಾತು ಹೇಳಿದೇಂದ್ರೆ ಇವಳು ಕುಡಿದು ಡ್ಯಾನ್ಸ್ ಮಾಡೋದು, ಬೇರೆಯವ್ರತ್ರ ಇರೋದೂ ಎಲ್ಲಾ ಫೋಟೋಸ್ ತಗಂಡು, ನನ್ನತ್ರ ಇದೆ ತೋರಿಸ್ತೀನಿ, ಆ ಫೋಟೋ ತೋರ್‍ಸಿದ್ರೆ ಫಾದರ್ ಇವಳಿಗೆ ಬಿಲ್ಡಿಂಗ್ ಕೊಡ್ತಾರಾ? (ಆಗ ಜಯಲಕ್ಷ್ಮಿ ತನ್ನ ಗ್ರೀನ್‌ಸಿಟಿ ಕಾಲೇಜನ್ನು ಬನ್ನೇರುಘಟ್ಟ ರಸ್ತೆಯಿಂದ ಯಶವಂತಪುರದ ಚರ್ಚ್‌ಗೆ ಸೇರಿದ್ದ ಜಾಗಕ್ಕೆ ಬದಲಾಯಿಸಲು ಹೊರಟಿದ್ದಳು) ನಾನು ಗ್ರೀನ್‌ಸಿಟಿ ಕಾಲೇಜ್‌ಗೆಲ್ಲಾ ಫೋಟೋ ಕಳುಸ್ತೀನಿ, ಗ್ಯಾಪ್ಪ ಇಟ್ಕೋಳ್ಳಿ.

ಮನೋಜ್: ಹ್ಞಾ

ರೇಣುಕಾಚಾರ್ಯ: ನಾನ್ ಹ್ಯೂಮನ್, ಕನ್‌ಸಿಡರ್... (ತೊದಲು ಮಾತು) ಹ್ಯೂಮನ್ ನಾನು ಮಾನವೀಯ ದೃಷ್ಟಿಯಿಂದ ನೋಡ್ತಾ ಅದಿನಷ್ಟೆ. ಎಲ್ಲಾ ಫೋಟೋನೂ ರೆಡಿ ಅದೆ. ನೀವ್ ಮಂಗಳವಾರ ಬಂದ್ರೆ ಫೋಟೋಸ್ ತೋರುಸ್ತಾ.

ಮನೋಜ್: ಹ್ಞಾ, ಹ್ಞಾ, ಹ್ಞಾ

ರೇಣುಕಾಚಾರ್ಯ: ಇರ್‍ಲಿ ಇದು ಸರಿಯದ್ದಲ್ಲ, ಸರಿ ಮಾಡ್ತೀನಿ ಅಂದ್ರೆ ಮಂಗಳವಾರ ಫೋನ್ ಮಾಡ್ತೀ ಫೋಟೋಸ್ ತೋರಸ್ತಿನಿ.

ಮನೋಜ್: ಬನ್ನಿ ಸಾರ್.

ರೇಣುಕಾಚಾರ್ಯ: ಇಲ್ಲಾಂದ್ರೆ, ಉ... ಇದೇನಪ್ಪ ಎಂಎಲ್‌ಎ ಹಿಂಗ್ ಫೋನ್ ಮಾಡಿ ಡಿಸ್ಟರ್ಬ್ ಮಾಡ್ತಾರೆ ಅಂದ್ರೆ ನಾನ್ ಖಂಡಿತಾ ತಿರುಗಾ ಕಾಲ್ ಮಾಡಲ್ಲ.

ಮನೋಜ್: ಇಲ್ಲಾ ಆ ತರಾ ಏನೂ ಇಲ್ಲ, ರೇಣುಕಾಚಾರ್ಯ ಅಂದ್ರೆ ಒಂದು ರೆಸ್ಪೆಕ್ಟ್ ಇದೆಯಲ್ಲ,

ರೇಣುಕಾಚಾರ್ಯ: ಇಲ್ಲಾ, ನ....ನನ್ ಹತ್ರ ರೆಸ್ಪೆಕ್ಟ್ ಇತ್ತು...ನನ್ ಬಗ್ಗೆ ಅವಳಿಗೆ ಭಾಳ ಇದಿತ್ತು,

ಮನೋಜ್: ಹ್ಞಾ, ಅದೇ ಮತ್ತೆ?

ರೇಣುಕಾಚಾರ್ಯ: (ಹತಾಶೆ ದನಿಯಲ್ಲಿ) ಈಗಿಲ್ಲ ರೆಸ್ಪೆಕ್ಟ್ ಇಲ್ಲ, ಲಾಸ್ಟ್ ವೆಹಿಕಲ್ ಬಟ್ ಬಂದ ಮೇಲೆ ಅವಳ ಮನೀಗ್ ಬಂದಾಗ ಬೆಡ್‌ರೂಂನಲ್ಲಿದ್ರೂ ಇಲ್ಲಾ ಅಂತಾ ಹೇಳೂಂತಂದ್ಲು ನನ್ನತ್ರ ಅಷ್ಟೂ ಎಲ್ಲಾ ರೀತಿಲೂ ಡೀಪಾಗಿ ಚೆನ್ನಾಗಿದ್ಲು,

ಮನೋಜ್: ಹ್ಞಾ, ಹ್ಞಾ, ಹ್ಞಾ

ರೇಣುಕಾಚಾರ್ಯ: ಉ.... ಶಿವಕುಮಾರ್‌ಗೂ ಇವಳ್ಗೂ ಕಾಂಟಾಕ್ಟ್ ಹೇಗಿದೆ ಮನೋಜ್?

ಮನೋಜ್: (ಯೋಚಿಸಿ) ಅದು ನನಗೆ ಗೊತ್ತಿಲ್ಲಾ, ಯಾಕೆಂದ್ರೆ ನಾನೀಗ ಮನೆಗೆ ಓಗ್ತಾಯಿಲ್ಲಾ, ನಾನೇನಿದ್ರು ಕನ್‌ಸಲ್ಟ್ ಅಲ್ಲಾ, ಎಲ್ಲಾರು ದುಡ್‌ಕೋಸ್ಕರಾ ಅಲ್ಲಾ ದುಡಿತಿರೋದು.

ರೇಣುಕಾಚಾರ್ಯ: ಹ್ಞಾ... ಈಗ ಮನೋಜ್ ನಾನು even ರಾಜೀವ್‌ಗಾಂಧಿ ಯೂನಿವರ್ಸಿಟಿಗೇ ಒಂದು ಲೆಟರ್ ಮಾಡಿಸ್ತೀನಿ, ಯಾವ್ದೇ ಬೇಸಿಕ್ ನೀಡ್ಸ್ ಇಲ್ಲಾ, ಕಾಲೇಜ್ ನಡಿತಿರೋದು ಒಂದೇ ಕ್ಯಾಂಪಸ್‌ನೊಳ್ಗೆ ನಡಿತೀದವೆ. ಏಕಂದ್ರೆ ನಮ್ದೂ ಯೂನಿವರ್ಸಿಟಿ ಕಾಲೇಜ್ ಇರೋದ್ರಿಂದ ನನಿಗೂ ಗೊತ್ತದವೆ, ಏನೇನು ಬೇಸಿಕ್ ನೀಡ್ಸ್ ಇರಬೇಕಂತ ನಾನ್ ಎಲ್ಲಾ ಕಡೆ ಕಂಪ್ಲೇಂಟ್ ಮಾಡ್ತೀನಿ ಬೇಕಂದ್ರೆ, ಚಾಲೇಂಜ್ ಮಾಡಿದ್ರೆ.

ಮನೋಜ್: ಹ್ಞಾ, ಹ್ಞಾ, ಹ್ಞಾ,

ರೇಣುಕಾಚಾರ್ಯ: ಈವನ್ ನಾನ್ ಮಂತ್ರಿಗಳ್ಗೆ ಲೆಟರ್ ಕೊಟ್ಟೆ ಅಂದ್ರೆ ಕಾಲೇಜ್ ಸ್ಕ್ಯಾಪ್ ಆಕತೆ. ನನ್ಗೆ ಚಾಲೆಂಜ್ ಆಕುದ್ರೆ, ನೀವ್ ಮಂಗಳವಾರ ಡೆಫನೇಟ್ ಸಿಕ್ತೆನಂದ್ರೆ ಫೋನ್ ಮಾಡ್ತೀನಿ ಟೂಸ್‌ಡೇ.....

ಮನೋಜ್: ಟೂಸ್ ಡೇ ಹ್ಞಾ, ಹ್ಞಾ, ಹ್ಞಾ.

ರೇಣುಕಾಚಾರ್ಯ: (ಅಂಗಲಾಚುವ ದನಿಯಲ್ಲಿ) ಇಲ್ಲಾ ನಿಮಗೆ ಡಿಸ್ಟರ್ಬ್ ಆಗುತ್ತೇಂದ್ರೆ ಖಂಡಿತಾ ನಿಮಗೆ ಕಾಲ್ ಮಾಡಲ್ಲ.

ಮನೋಜ್: ಇಲ್ಲಾ ನನ್ಗೇನು ಗೊತ್ತಾ, ಒಂದು ಹ್ಯುಮಾನಿಟೆರಿಯನ್ನು..... ಎಲ್ಲಾ ಒಳ್ಳೇದಾಗಬೇಕ್ ಅಷ್ಟೆ.

ರೇಣುಕಾಚಾರ್ಯ: ನಿಮಗೆ ತೋರುಸ್ತೀನಿ. ಯಾಕ್ ಫೋಟೋಸ್ ಇಲ್ಲಾ, ಸಾವಿರ ಫೋಟೋ ಇದೆ. ಒಂದ್ ಐನೂರು ಫೋಟೋ ಇದೆ ತೋರುಸ್ತೀನಿ... ಸಿಕ್ತೀರಾ ಅಂಗಾರೆ.

ಮನೋಜ್: ಊನ್ ಸಾರ್ ಸಿಕ್ತೀನಿ.

ರೇಣುಕಾಚಾರ್ಯ: ಡೆಫನೆಟ್ಟಾಗಿ.

ಮನೋಜ್: ಓ ಡೆಫನೆಟ್ಟು.

ರೇಣುಕಾಚಾರ್ಯ: ನಾನು ಆಸ್ ಎ ಫ್ರೆಂಡು ನಿಮಿಗ್ ಕೇಳ್ತಿದನಿ, ನನ್‌ಗೇನು ಗೊತ್ತಾ, ಅವಳ ಲೈಫು ಹಾಳಾಗ್‌ಬಾರದು. ಚೆನ್ನಾಗಿರಬೇಕು (ಮತ್ತೆ ತೊದಲುತಾ) ಮ.... ಮದರ್ ಪ್ರಾಮಿಸ್ಸು.

ಮನೋಜ್: ಹ್ಞಾ, ಹ್ಞಾ, ಹ್ಞಾ,

ರೇಣುಕಾಚಾರ್ಯ: ನಾವಿಬ್ರೂ ಅಷ್ಟು ಚೆನ್ನಾಗಿದ್ದೊ ಅಂಗ್ ಆಗ್‌ಬಾರದೂಂತ ನನಿಗೆ ಹೂಮಾನ್ ಕನ್‌ಸಿಡರ್ ಇದೆ.

ಮನೋಜ್: ಆಗೇ ಇರಬೇಕಲ್ಲ ಸಾರ್.

ರೇಣುಕಾಚಾರ್ಯ: ನಿಮ್ಮತ್ರ ಮತ್ತೇನೇಳಿದ್ಲು?

ಮನೋಜ್: ಯಾರು....?

ರೇಣುಕಾಚಾರ್ಯ: ಅದೇ.....!

ಮನೋಜ್: ಇಲ್ಲಾ ಮನೋಜ್, ಫೋಟೋ ತೆಗಿಯೇಕೆ ಛಾನ್ಸೇ ಇಲ್ಲಾ ಅಂದ್ರು.


ರೇಣುಕಾಚಾರ್ಯ: (ಉತ್ಸಾಹದಿಂದ) ಅಂದ್ಮಾ, ತೋರುಸ್ತೀನಿ, ಅವ್ರುಳ ತಕುಸ್ಸುಂಡಿರದ ತೋರುಸ್ತೀನಿ, ನಂಬ್ಕೆ ಬರ್‌ತತಿ ಆವಾಗ, ಲೈಫ್ ಹಾಳಾಗಬಾರ್‌ದೂಂತ ವೆಯಿಟ್ ಮಾಡ್ತಾ ಅದಿನಿ, ಟುಸ್‌ಡೆ ಡೆಪನೆಟ್ ಸಿಕ್ತೀರಲ್ಲ,

ಮನೋಜ್: ಹ್ಞಾ, ಸಿಕ್ಕತೀವಿ ನಾನು.


ರೇಣುಕಾಚಾರ್ಯ: ಡೆಪನೆಟ್

ಮನೋಜ್: ಹ್ಞಾ

–ಈಶ



ರೇಣುಕಾಚಾರ್ಯ–ಜಯಲಕ್ಷ್ಮಿ ಸೆಕ್ಸ್ ಸಿಡಿ ಅಡ್ವಾಣಿ ಕೈಗೆ!





ಜಯಲಕ್ಷ್ಮಿ ಈಗ ಅವನನ್ನು ವೀರ ಕರಂಡಿಗೆ ಹೋಗಿ ಬೀಳುವಂತೆ ಂದೇ ಒಂದು ಹೊನ್ನಾಳ್ಳಿ ಹೊಡೆತ ೊಟ್ಟಿದ್ದಾಳೆ.

ೇಣುಕಾಚಾರ್ಯನೇನೊ ಅವನ ಅಯೋಗ್ಯತೆಗೆ ತಕ್ಕ ಜಾಗದಲ್ಲೇ ಿದ್ದಿದ್ದಾನೆ. ಆದರೆ ರಾಜ್ಯ ಿಜೆಪಿಗಳೇಕೆ ರೇಣುಕನನ್ನು ಕರಂಡಿಯಿಂದ ಆಚೆ ತರಲು ುತ್ನಿಸುತ್ತಿದ್ದಾರೆ. ಇನ್ನೇನು ಂದು ವಾರದಲ್ಲೇ ೇಣುಕನ ಸೆಕ್ಸ್ ಸಿಡಿ ರ್ನಾಟಕದಲ್ಲಿ ರಿಲೀಸ್ ಗಲಿದೆ. ಬಹುಶಃ ುಡ್ಡಿ, ಸದಾನಂದ ೌಡರಿಗೆ ಆಗ ಚ್ಚರವಾಗಬಹುದೇನೊ? ಂಥ ಚರಂಡಿ ಶಾಸಕನೂ ಜೆಪಿಗೆ ಅನಿವಾರ್ಯ ಗಿದ್ದಾನೆಂದರೆ....

ಇದನ್ನು ಬಜೆಪಿ ಷ್ಟ್ರನಾಯಕರ ಪೂರ್ವಜನ್ಮದ ರ್ಮ ಎನ್ನುತ್ತೀರೋ ಇಲ್ಲಾ ವರ ಹಣೇಬರಹವೇ ಇಷ್ಟು ಂದುಕೊಳ್ಳುತ್ತೀರೋ.... ಒಟ್ಟನಲ್ಲಿ ಜೆಪಿಯೊಳಗೀಗ ದಿನಕ್ಕೊಂದು ಸೆಕ್ಸ್ ಗರಣಗಳು ಸ್ಫೋಟಗೊಳ್ಳುತ್ತಿದೆ. ಜಯ ಜೋಶಿ, ಪ್ರಮೋದ್ ಹಾಜನ್ ಆಯಿತು. ಈಗ ುಕಾಚಾರ್ಯನ ಸರದಿ. ೋವೃದ್ಧ ಬಜೆಪಿ ರಾಷ್ಟ್ರನಾಯಕ ್.ಕೆ. ಅಡ್ವಾಣಿ ಹಾಗೂ ಪಾರ್ಟಿ ಕ್ಷ ರಾಜನಾಥಸಿಂಗರಿಗೀಗ ಸೆಕ್ಸ್ ಯೊಂದನ್ನು ಪರಾಂಬರಿಸಬೇಕಾದ ರ್(ಸೌ)ಭಾಗ್ಯ ಒದಗಿಬಂದಿದೆ.

ವಿಚಾರ ಇಷ್ಟೇ....

ಹೊನ್ನಾಳಿಯ ಹಿಂದೂ ವೀರ ಕ ರೇಣುಕಾಚಾರ್ಯನ ವಿಕೃತ ಲೈಂಗಿಕ ನೋಭಾವಗಳೆಲ್ಲಾ ಇರುವ ತ್ರಿಬಲ್ ಎಕ್ಸ್ ಯೊಂದು ಈಗ ಅಡ್ವಾಣಿ ಕೈ ಸೇರಿದೆ. ುಕಾ ಹಾಗೂ ಜಯಲಕ್ಷ್ಮಿ ನಡುವಿನ ಬಂಧಗಳ ಗಲಾಟೆ ಹಾದಿರಂಪ-ಬೀದಿರಂಪವಾಗಿ ಜನರೆಲ್ಲಾ ಕ್ಯಾಕರಿಸಿ ಉಗಿಯುತ್ತಿದ್ದರೂ ರಾಜ್ಯ ಬಜೆಪಿ ನಾಯಕ ಸದಾನಂದಗೌಡನಾಗಲಿ, ಯಡಿಯೂರಪ್ಪನಾಗಲೀ ರೇಣುಕನ ಮೇಲೆ ಯಾವುದೇ ಶಿಸ್ತುಕ್ರಮ ತೆಗೆದುಕೊಂಡಿಲ್ಲವಾದ್ದರಿಂದ ಈಗ ಈ ಹಗರಣ ಬಜೆಪಿ ಹೈಕಮಾಂಡ್ ಬಳಿಗೆ ಹೋಗಿದೆ.

ಅತ್ತ ಗುಜರಾತಿನಲ್ಲಿ ಕೆಲವು ಕಲಾವಿದರು ಭಾರತಮಾತೆಗೆ, ಹಿಂದೂ ದೇವಿಯರಿಗೆ ಮಾನಹಾನಿ ಮಾಡಿದ್ದಾರೆಂದು ಬಜೆಪಿಗಳೆಲ್ಲಾ ಚೀರಿಕೊಳ್ಳುತ್ತಾ ಗಲಾಟೆ ಎಬ್ಬಸುತ್ತಿದ್ದಾರೆ. ಇತ್ತ ಕರ್ನಾಟಕದಲ್ಲಿ ಅದೇ ಬಜೆಪಿಯ ಶಾಸಕ ರೇಣುಕಾಚಾರ್ಯ ಹೆಂಗಸರ ಒಳಉಡುಪು ಹಾಕಿಕೊಂಡು ನುಲಿಯುತ್ತಾ ಫೋಟೋ ತೆಗೆಸಿಕೊಂಡು ಆನಂದಿಸುತ್ತಾನೆಂದರೆ ಏನು ಹೇಳಬೇಕು!

ಅಷ್ಟೇ ಅಲ್ಲ, ತನ್ನ ಪ್ರೇಯಸಿ ನರ್ಸ್ ಜಯಲಕ್ಷ್ಮಿ ಬೆಡ್‌ರೂಂನಲ್ಲಿ ಬಟ್ಟೆ ಬದಲಾಯಿಸುವಾಗ, ಮನೆ ಉಡುಪಿನಲ್ಲಿ ಕಿಚನ್‌ನಲ್ಲಿದ್ದಾಗೆಲ್ಲಾ ಇವನು ಕದ್ದು ಕುಳಿತು ಫೋಟೋ ತೆಗೆದಿಟ್ಟುಕೊಳ್ಳುತ್ತಿದ್ದ. ಇದಿಷ್ಟು ಸಾಲದೆಂಬಂತೆ ತಮ್ಮಿಬ್ಬರ ಬೆಡ್‌ರೂಂ ದೃಶ್ಯಗಳನ್ನು ರೇಣುಕನೇ ಶೂಟ್ ಮಾಡಿಸಿಟ್ಟದ್ದ. ತನ್ನ ವಿಕೃತ ಮನಸ್ಥಿತಿಯ ಕ್ಲೈಮಾಕ್ಸ್ ಎಂಬಂತೆ ರೇಣುಕನೆ ಕುಡಿದು ಡ್ಯಾನ್ಸ್ ಮಾಡುತ್ತಾ ಒಂದೊಂದಾಗಿ ತನ್ನ ಬಟ್ಟೆ ಕಳಚುತ್ತಾ (ಇದೊಂದು ತರದ stripper ಎನ್ನಬಹುದು). ಕೊನೆಗೆ ಗೊಮ್ಮಟೇಶ್ವರನಂತಾಗಿ ಅವೆಲ್ಲವನ್ನು ಕ್ಯಾಮೆರಾದಲ್ಲಿ ಶೂಟ್ ಮಾಡಿಸಿದ್ದಾನೆ.

ಈಗ ಅಡ್ವಾಣಿ ಕೈಲಿರುವುದು ಅದೇ ದೃಶ್ಯಾವಳಿಗಳ ಸಿಡಿ. ಇದನ್ನು ದೆಹಲಿ ನಾಯಕರಿಗೆ ತಲುಪುವಂತೆ ಮಾಡಿರುವುದು ಬೇರೆ ಯಾರೂ ಅಲ್ಲ, ಸಂಸದ ಅನಂತ್‌ಕುಮಾರ್. ಹೇಳಿಕೇಳಿ ಅನಂತು ಯಡ್ಡಿ ವಿರೋಧಿ ಬಣದ ನಾಯಕ, ಈ ಸೆಕ್ಸ್ ಬಾಲಕ ರೇಣುಕನು ಯಡ್ಡಿಯ ಪರಮಾಪ್ತ ಶಿಷ್ಯ ಯಥಾ ರಾಜಾ.... ತಥಾ ಪ್ರಜಾ ತರಹ. ಹಾಗಾಗಿ ಈ ಹಗರಣ ಬಯಲಿಗೆ ಬಿದ್ದು ಒಂದು ತಿಂಗಳಾಗಿದ್ದರೂ ರಾಜ್ಯ ಬಜೆಪಿ ಲೀಡರ್‌ಗಳು ಸುಮ್ಮನಿದ್ದರೇ ವಿನಃ ಭಾರತೀಯ ಸಂಸ್ಕೃತಿ, ಹಿಂದೂ ಸಂಪ್ರದಾಯಗಳ ಸೊಲ್ಲೆತ್ತಿರಲಿಲ್ಲ. ಅದು ಯಾಕೆಂದರೆ ಒಂದು ಸಾರಿ ಈ ಅಪರಾಧಕ್ಕಾಗಿ ರೇಣುಕನ ಮೇಲೆ ಶಿಸ್ತು ಕ್ರಮ ತೆಗೆದುಕೊಂಡರೆ ಆಮೇಲೆನಾಗುತ್ತದೆಂಬುದು ರಾಜ್ಯ ಬಜೆಪಿಗಳಿಗೆ ಗೊತ್ತಿದೆ!

ಬಿಳಿದಾಳೆ ಈಶ

ಅರ್ಥಾತ್ ರೇಣುಕಾಚಾರ್ಯ ಮಾಡಿದ್ದು ತಪ್ಪೆಂದರೆ ಯಡಿಯೂರಪ್ಪ-ಶೋಭಾ ಕರಂದ್ಲಾಜೆ ನಡುವಿನ ಪರಮಾಪ್ತ ಸ್ನೇಹದ ಬಗ್ಗೆಯೂ ಪಾರ್ಟಿಯೊಳಗೆ ಪ್ರಶ್ನೆ ಬಂದೇ ಬರುತ್ತದಲ್ಲವೆ? ಆ ಪ್ರಶ್ನೆ ಎತ್ತಲು ಬಜೆಪಿಯೊಳಗೇ ಇರುವ ಯಡ್ಡಿ ವಿರೋಧಿಗಳೀಗ ಕಾಯುತ್ತಿದ್ದಾರೆ. ಅವರಿಗೆ ಅಂಥ ಅವಕಾಶ ಸಿಗಬಾರದೆಂದರೆ ರೇಣುಕನ್ನ ಈಗ ಕಾಪಾಡಲೇಬೇಕು... ಇದು ರಾಜ್ಯ ಬಜೆಪಿ ನಾಯಕರ ನಿಲುವು.

ಮತ್ತೊಂದೆಡೆ ರೇಣುಕನ ವಿರುದ್ಧ ರಾಜ್ಯ ಮಹಿಳಾ ಆಯೋಗಕ್ಕೆ ಜಯಲಕ್ಷ್ಮಿ ದೂರು ಕೊಟ್ಟರೆ ಅಧ್ಯಕ್ಷೆ ಬಜೆಪಿಯ ಪ್ರಮೀಳಾ ನೇಸರ್ಗಿ 'ಜಯಲಕ್ಷ್ಮಿಯ ಕ್ಯಾರೆಕ್ಟರ್ ಸರಿ ಇಲ್ಲ' ಎಂದು ಉದಯ ಟಿವಿ ಕಾರ್ಯಕ್ರಮದಲ್ಲೇ ಹೇಳಿದ್ದರು. ಅದೂ ತನಿಖೆ ಹಾಗೂ ವಿಚಾರಣೆ ಇನ್ನೂ ಪೂರ್ತಿಯಾಗದಿರುವಾಗಲೇ! ಇದರಿಂದ ರೊಚ್ಚಿಗೆದ್ದ ಜಯಲಕ್ಷ್ಮಿ ಬಜೆಪಿಗಳ ಮಹಿಳಾ ಆಯೋಗದ ಮೇಲೆ ನಂಬಿಕೆ ಕಳೆದುಕೊಂಡು ಈಗ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾಳೆ.

ಈ ಬೆಳವಣಿಗೆಗಳಿಂದಾಗಿ ರೇಣುಕನ ಹಲ್ಕಟ್‌ಗಿರಿಗಳೀಗ ಕರ್ನಾಟಕ ದಾಟ ದೆಹಲಿವರೆಗೂ ತಲುಪಿದೆ. ಬಹುಶಃ ಇನ್ನೊಂದು ವಾರದಲ್ಲಿ ಜಯಲಕ್ಷ್ಮಿ ತಾನೇ ದೆಹಲಿಗೆ ಹೋಗಿ ಪ್ರೆಸ್‌ಮೀಟ್ ಮಾಡಿ 'ರೇಣುಕಾ ಮಹಾತ್ಮೆ' ಸಿಡಿ ರಿಲೀಸ್ ಮಾಡಲಿದ್ದಾಳೆ. ಆಗಲೂ ಬಜೆಪಿಗಳು ರೇಣುಕನ ರಕ್ಷಣೆಗೆ ನಿಲ್ಲುತ್ತಾರಾ ನೋಡೋಣ.

ಯಡ್ಡಿಯ ಬಿಕ್ಕಟ್ಟು

ಇಷ್ಟೆಲ್ಲಾ ರಾದ್ಧಾಂತಗಳಾಗಿ ಬೆಳೆಯುವ ಮೊದಲೇ ರೇಣುಕನ ಸಂಪೂರ್ಣ ಜಾತಕ ಗೊತ್ತಿದ್ದದ್ದು ಒಬ್ಬನೇ ಒಬ್ಬ ಬಜೆಪಿ ನಾಯಕನಿಗೆ. ಅದು ಉಪಮುಖ್ಯಮಂತ್ರಿ ಯಡಿಯೂರಪ್ಪ, ಈಗ್ಗೆ ಮೂರ್ನಾಲ್ಕು ತಿಂಗಳ ಹಿಂದೆಯೇ ಜಯಲಕ್ಷ್ಮಿ ಯಡಿಯೂರಪ್ಪನವರನ್ನು ಭೇಟಿಯಾಗಿ ರೇಣುಕಾಚಾರ್ಯನ ದೌರ್ಜನ್ಯ, ಬೆದರಿಕೆ ಹಾಗೂ ಲೈಂಗಿಕ ವಿಕೃತಿಗಳ ವಿವರಗಳನ್ನೆಲ್ಲಾ ಹೇಳಿದ್ದಾಳೆ. ಅಷ್ಟೇ ಅಲ್ಲದೆ, ಸಾಕ್ಷಿಯಾಗಿ ಎಲ್ಲಾ ರೀತಿಯ ಫೋಟೋಗಳನ್ನು ಕೊಟ್ಟು ಬಂದಿದ್ದಾಳೆ. ಮುಂಗೋಪಿಯಾದರೂ ಆ ಫೋಟೋಗಳನ್ನು ಅಭ್ಯಾಸಬಲದಿಂದಾಗಿ ಸ್ವಲ್ಪ ವಿವರವಾಗೇ ಸ್ಟಡಿ ಮಾಡಿದ ಯಡ್ಡಿ ಕೊನೆಗೆ 'ಆಯ್ತು ಈಗ ನೀನು ಪೊಲೀಸ್ ಕಂಪ್ಲೇಂಟ್ ಕೊಡಬೇಡ, ನಾನು

(ಮುಂದಿನ ಪುಟಕ್ಕೆ)



ಈ ರೇಣುಕಾ ಅದೆಂತಾ ಶಿಕ್ಕಲನೆಂದರೆ ಿಡಿದು ಚಿತ್ತಾದೇಟಿಗೆ ಅವನು ಡ್ಯಾನ್ಸ್ ಡಲೇಬೇಕು. ಅದು ಎಂಥ ಡ್ಯಾನ್ಸ್ ಅಂತೀರಿ, ಲ್ಲಾ ಹುದಿ ನೃತ್ಯ ಮಾಡಿದಂತೆ.


ಅಂತಾ ಕೆಲವೊಂದು ಫೋಟೋಗಳು

ನಾನು ಜೀತೇಂದ್ರ ನೀನು ಶ್ರೀದೇವಿ...

ಡ್ರಿಲ್ ಡ್ಯಾನ್ಸ್ ಆಡೋಣ ಬಾ....

ಇಲ್ಲಿವೆ. ಪ್ರಕಟಿಸಲಾಗದ ಇನ್ನೂ ಕೆಲವು ಅಸಹ್ಯಕಾರಿ ಫೋಟೋಗಳು ನಮಗೆ ಸಿಕ್ಕಿವೆ. ಬಜೆಪಿ ವರಿಷ್ಠರು ವಿಕೃತಕಾಮಿ ರೇಣುಕನನ್ನು ತಕ್ಷಣ ಪಾರ್ಟಿಯಿಂದ ಓಡಿಸಿ ಮುಕ್ತ ತನಿಖೆ, ವಿಚಾರಣೆಗೆ ಈಗಲಾದರೂ ಅವಕಾಶ ಮಾಡಿಕೊಟ್ಟರೆ ಆ ಕೆಟ್ಟ ಫೋಟೋಗಳನ್ನು ಪ್ರಕಟಿಸುವ ಮುಜುಗರ ನಮಗೂ ತಪ್ಪಬಹುದೇನೋ ಕಾದು ನೋಡೋಣ.

ಕುಡಿದಾಗ ಬರೀ ಡ್ಯಾನ್ಸ್ ಮಾಡುವುದಷ್ಟೇ ಅಲ್ಲ, ಒಮ್ಮೆ ಕುಣಿಗಲ್ ರಸ್ತೆಯ ಬಳಿ ರೆಸಾರ್ಟ್‌ನಲ್ಲಿದ್ದಾಗ ರೇಣುಕಾ ಜನರಿಂದ ಒದೆ ತಿಂದೂ ಬಂದಿದ್ದಾನೆ. ಅವತ್ತು ಜಯಲಕ್ಷ್ಮಿ ಜೊತೆಲಿದ್ದ ರೇಣುಕ ರೂಂನೊಳಗೆ ಏನು ಕಿರುಕುಳ ಕೊಟ್ಟನೊ ಏನೊ ಜಯಲಕ್ಷ್ಮಿ ಆಚೆ ಓಡಿಬಂದಿದ್ದಾಳೆ. ಹಿಂದೆ ಕ್ಯಾಮರಾ ಕೈಲಿಡಿದಿದ್ದ ರೇಣುಕನೂ ಅರೆಬೆತ್ತಲಾಗಿ ಓಡಿ ಬಂದಿದ್ದಾನೆ. ಜನ ಜಯಲಕ್ಷ್ಮಿಯ ಕಿರುಚಾಟ ಕೇಳಿ ಸಿಟ್ಟನಿಂದ ಯಾರಂತಲೂ ವಿಚಾರಿಸದೆ ರೇಣುಕನ ಚಡ್ಡಿ



ಉದುರಿ ಬೀಳುವಂತೆ ಧರ್ಮದೇಟು ಕೊಟ್ಟದ್ದಾರೆ. ರೇಣುಕ ಏನೊ ಡ್ರಿಲ್ ಡ್ಯಾನ್ಸ್ ಮಾಡಲು ಹೋಗಿ ಹೀಗೆ ಮುಖ ಮುಸುಡಿ ಕಿತ್ತು ಹೋಗುವಂತೆ ಛಾತ ತಿಂದು ಬರಬೇಕಾಯಿತು... ಅಂತಾ ಉರುಉರುಳಾಡಿಕೊಂಡು ನಗುತ್ತಾ ರೆಸಾರ್ಟ್‌ನ ಜನ ನೆನಪಿಸಿಕೊಳ್ಳುತ್ತಾರೆ.



8 ಕೋಟಿ ನೈಸ್ ದುಡ್ಡು ಜಯಲಕ್ಷ್ಮಿ ಮನೇಲಿತ್ತು!

ಇನ್ನೊಂದು ನಂಬಲಸಾಧ್ಯ ಆದರೆ ವಾಸ್ತವ ಸತ್ಯ ಇದು.

ಬೆಂಗಳೂರು-ಮೈಸೂರು ಕಾರಿಡಾರ್ ರಸ್ತೆಯ ನೈಸ್ ಕಂಪನಿ ಭೂಕಬಳಿಕೆ ಬಗ್ಗೆ ಆಗ ವಿಧಾನಸಭೆ ಅಧಿವೇಶನದಲ್ಲೂ ಭಾರಿ ಗಲಾಟೆಗಳಾಗಿದ್ದವು. ಈ ಸೆಕ್ಸ್ ಬಾಲಕ ರೇಣುಕಾಚಾರ್ಯ ಅದರ ಮುಂಚೂಣಿಯಲ್ಲಿದ್ದ.

ಆನಂತರ ಅದೇನಾಯಿತೋ ಏನೋ ರೇಣುಕ ಮತ್ತೆಂದೂ ಸದನದಲ್ಲಿ ನೈಸ್ ವಿಚಾರ ಎತ್ತಲೇ ಇಲ್ಲ. ನಡುವೆ ಆಗಿದ್ದೇನೆಂದರೆ ಲಿಂಗಾಯತ ಜಾತಿಯವರಾಗಿದ್ದ ನೈಸ್‌ನ ಖೇಣಿ ಹಾಗೂ ಶಾಸಕ ರೇಣುಕಾಚಾರ್ಯ ಒಂದು ಒಳಒಪ್ಪಂದಕ್ಕೆ ಬಂದಿದ್ದರು. ಅದರಂತೆ ರೇಣುಕನು ಹೋಟೆಲ್ ಒಂದರಲ್ಲಿ ಖಾಸಗಿ ಪಾರ್ಟಿ ಏರ್ಪಡಿಸಿ 15 ಬಿಜೆಪಿ ಶಾಸಕರಿಗೆ ನೈಸ್ ಪ್ರಸಾದ ಹಂಚಿದ್ದಾನೆ. ಏಳೆಂಟು ಕೋಟಿಯಷ್ಟಿದ್ದ ಈ ಹಣ ಪಾರ್ಟಿಯ ಹಿಂದಿನ ದಿನವಷ್ಟೇ ರೇಣುಕನ ಗೆಳತಿ ಜಯಲಕ್ಷ್ಮಿಯ ಚಂದ್ರಾ ಲೇಔಟಿನ ಮನೆಗೆ ಬಂದು ತಲುಪಿತ್ತು. ಆದರಲ್ಲಿ ರೇಣುಕ ತನಗೆಷ್ಟು ಹಣ ಎತ್ತಿಟ್ಟುಕೊಂಡನೋ ಏನೋ ಕೊನೆಗೆ ಅದೂ ಸಾಲದೆಂಬಂತೆ ಖೇಣಿಗೆ ದುಂಬಾಲು ಬಿದ್ದು ಬಿಡದಿ ಹತ್ತಿರ ಒಂದೆಕರೆ ಜಮೀನನ್ನು ಕಿತ್ತುಕೊಂಡಿದ್ದಾನೆ, ಲಂಚದ ರೂಪದಲ್ಲಿ.


(ಹಿಂದಿನ ಪುಟದಿಂದ)

ರೇಣುಕನ್ನ ಕರೆದು ಬುದ್ಧಿ ಹೇಳ್ತೀನಿ, ಅಲ್ಲೀತನಕ ಕಾದಿರು' ಎಂದು ಧರ್ಮಬೋಧನೆ ಮಾಡಿದ್ದಾರೆ. ಬಹುಶಃ ಯಡ್ಡಿಗೆ ಆಗಲೇ ಈ ಕೇಸ್ ರೇಣುಕನ ಕುತ್ತಿಗೆ ಬಳಸಿಕೊಂಡು ತನ್ನ ಬುಡಕ್ಕೂ ಬರುವ ಅಪಾಯ ಗೊತ್ತಿತ್ತೆಂದು ಕಾಣುತ್ತದೆ. ಯಾಕೆಂದರೆ ರೇಣುಕನು ಜಯಲಕ್ಷ್ಮಿ ಹತ್ತಿರ ಯಾವಾಗಲೂ ಯಡ್ಡಿ-ಶೋಭಾರ ಆದರ್ಶ ದಾಂಪತ್ಯದ ಬಗ್ಗೆ ಪ್ರಸ್ತಾಪಿಸುತ್ತಿದ್ದ ಎಂದು ಜಯಲಕ್ಷ್ಮಿ ಸಾಕ್ಷಾತ್ ಯಡ್ಡಿಗೇ ಹೇಳಿದ್ದಳು.

ಆಗ ಇದನ್ನು ನಿರ್ಲಕ್ಷಿಸಿದರೆ ಸರಿ ಹೋದೀತೆಂದು ಯಡ್ಡಿ ಭಾವಿಸಿದ್ದರೇನೊ, ಆದರೆ ಈಗ ಪರಿಸ್ಥಿತಿ ಅವರ ಕೈಯಿಂದಲೂ ಜಾರಿ ಹೋಗಿದೆ.

ಹಾಕೋಕು ಬರ್ತಿರಲಿಲ್ಲ, ಯಾವಾಗ್ಲೂ ಬಿಳಿ ಪ್ಯಾಂಟು ಷರಟು ಹಾಕಿಕೊಂಡು ಒಳ್ಳೆ ವಾರ್ಡ್ ಬಾಯ್ ತರ ಇರ್ತಿದ್ದ. ಅವನ್ನ ನೋಡಕ್ಕಾಗದೆ ನಾನೇ ಜೀನ್ಸ್ ಪ್ಯಾಂಟು-ಟೀ ಶರ್ಟ್ ಕೊಡಿಸಿ ಹಾಕೋದನ್ನು ರೂಢಿ ಮಾಡಿಸಿದೆ" ಎಂದು ನಕ್ಕಳು. ಇನ್ನೇನನ್ನೊ ನೆನಪಿಸಿಕೊಳ್ಳುತ್ತಾ "ನಾವು ಶಾಪ್ಪಿಂಗ್‌ಗೆ ಹೋದರೆ ಒಂದ್ರೂಪಾಯಿಯೂ ಖರ್ಚು ಮಾಡ್ತಿರಲಿಲ್ಲ. ಅವನತ್ರ ಈಗಲೂ ಇರೊ ಮೊಬೈಲ್ 9845657720 ನಂದು, ಅದರ ಬಿಲ್ ನಾನೇ ಕಟ್ಟುತ್ತಿದ್ದೆ" ಎನ್ನುತ್ತಾಳೆ.

ಜಯಲಕ್ಷ್ಮಿಯನ್ನು ಹೇಗಾದರೂ ಮಾಡಿ ತನ್ನ ನಿಯಂತ್ರಣದಲ್ಲೇ ಇಟ್ಟುಕೊಳ್ಳಬೇಕೆಂದು ಚಡಪಡಿಸುತ್ತಿದ್ದ ರೇಣುಕನಿಗೆ ಆಕೆಯ ಸ್ವತಂತ್ರ ಪ್ರವೃತ್ತಿ, ನಿರ್ಭಿಡೆಯ ವರ್ತನೆಗಳು, ಧೈರ್ಯವೆಲ್ಲಾ



ವಾರ್ಡ್ ಬಾಯ್ ರೇಣುಕ

ಈ ಜಯಲಕ್ಷ್ಮಿ ಸ್ವಲ್ಪ ಗಟ್ಟಿ ಮಹಿಳೆ: 'ನಿನ್ನ ಬೆತ್ತಲೆ ಫೋಟೋ ಪೇಪರ್‌ನವ್ರಿಗೆ ಕೊಟ್ಟು ಲೈಫ್ scrap ಮಾಡುಸ್ತೀನಿ' ಅಂತಾ ರೇಣುಕನು ಧಮಕಿ ಕೊಟ್ಟರೆ ಈಕೆ ತಾನೇ ಎರಡು ಹೆಜ್ಜೆ ಮುಂದೆ ಹೋಗಿ ರೇಣುಕನ ರಾಸಲೀಲೆಗಳ ಫೋಟೋ ರಿಲೀಸ್ ಮಾಡಿ 'ನೀನು ಅಂದ್ರೆ ನಿಮ್ಮಪ್ಪ' ಎಂದಿದ್ದಾಳೆ.

ಸ್ವಲ್ಪ ನಾಟ ತಳಿ ಟಗರಿನಂತೆ ವರ್ತಿಸುವ ರೇಣುಕಾಚಾರ್ಯನಿಗೆ ನಯ.... ನಾಜೂಕು, ಮಾತಿನಲ್ಲಿ ಗಾಂಭೀರ್ಯ ತೂಕವಿಲ್ಲ. ರೇಣುಕನ ಜೊತೆಗಿನ ತನ್ನ ಹಿಂದಿನ ಒಡನಾಟಗಳನ್ನೆಲ್ಲಾ ನೆನಪಿಸಿಕೊಳ್ಳುತ್ತಾ ಮೊನ್ನೆ ನಮ್ಮೊಂದಿಗೆ ಮಾತನಾಡಿದ ಜಯಲಕ್ಷ್ಮಿ "ಸಾರ್, ಅವನಿಗೆ ನಾಗರಿಕತೆನೂ ಇರಲಿಲ್ಲ, ನಾನೇ ಅವನಿಗೆ ನಯ ನಾಜೂಕು ಕಲಿಸಿಕೊಟ್ಟೆ. ಆತನಿಗೆ ಒಳ್ಳೇ ಬಟ್ಟೆ

ಹೊಟ್ಟೆಯಲ್ಲಿ ಆಸಿಡ್ ಸುರಿದಂತೆ ಅನ್ನಿಸುತ್ತಿತ್ತೇನೊ, ಹಾಗಾಗಿ ಅವಳನ್ನು ಒಂದು ಮದುವೆ ಅಂತಾ (ಗುಟ್ಟಾಗಿ) ಮಾಡಿಕೊಂಡು ಬಿಟ್ಟರೆ ಜಯಲಕ್ಷ್ಮಿ ಸಮೇತ ಅವಳ ಆಸ್ತಿ, ಕಾಲೇಜು, ಟ್ರಸ್ಟು ಎಲ್ಲವೂ ಕೈವಶವಾದಂತೆ ಎಂದುಕೊಂಡು ಕಿರುಬನಂತೆ ದಾಳಿ ಮಾಡಿದ್ದಾನೆ. ಆದರೆ ಜಯಲಕ್ಷ್ಮಿ ಈಗ ಅವನನ್ನು ನೇರ ಚರಂಡಿಗೆ ಹೋಗಿ ಬೀಳುವಂತೆ ಒಂದೇ ಒಂದು ಹೊನ್ನಾಳ್ಳಿ ಹೊಡೆತ ಕೊಟ್ಟಿದ್ದಾಳೆ.

ರೇಣುಕಾಚಾರ್ಯನೇನೊ ಅವನ ಅಯೋಗ್ಯತೆಗೆ ತಕ್ಕ ಜಾಗದಲ್ಲೇ ಬಿದ್ದಿದ್ದಾನೆ. ಆದರೆ ರಾಜ್ಯ ಬಿಜೆಪಿಗಳೇಕೆ ರೇಣುಕನನ್ನು ಚರಂಡಿಯಿಂದ ಆಚೆ ತರಲು ಯತ್ನಿಸುತ್ತಿದ್ದಾರೆ. ಇನ್ನೇನು ಒಂದು ವಾರದಲ್ಲೇ ರೇಣುಕನ ಸೆಕ್ಸ್ ಸಿಡಿ ಕರ್ನಾಟಕದಲ್ಲಿ ರಿಲೀಸ್ ಆಗಲಿದೆ. ಬಹುಶಃ ಯಡ್ಡಿ ಸದಾನಂದಗೌಡರಿಗೆ ಆಗ ಎಚ್ಚರವಾಗಬಹುದೇನೊ?

ಇಂಥ ಚರಂಡಿ ಶಾಸಕನೂ ಬಿಜೆಪಿಗೆ ಅನಿವಾರ್ಯ ಆಗಿದ್ದಾನೆಂದರೆ.... ■

ಪತ್ರಕರ್ತರಿಗೂ ಗೂಸಾ

ಈಗತಾನೆ ಕಣ್ಣುಬಿಡುತ್ತಿರುವ ಕೆಲವು ಎಳಸು ಪತ್ರಕರ್ತರ ಬಗ್ಗೆ ಜಯಲಕ್ಷ್ಮಿ ಕಾಮೆಂಟ್ ಮಾಡುವುದು ಮಜವಾಗಿರುತ್ತದೆ.

ಹೀಗೆ ಶಿವಮೊಗ್ಗದ ಎಳಸೊಬ್ಬ 'ಜಯಲಕ್ಷ್ಮಿ ಶೀಘ್ರದಲ್ಲೇ ರಾಜಕೀಯಕ್ಕೆ' ಎಂದು ಹೆಡ್ಡಿಂಗ್ ಕೊಟ್ಟು 'ಅವರು ಈಗಾಗಲೇ ಎರಡು ಬಾರಿ ಕ್ಷೇತ್ರಕ್ಕೆ ಭೇಟಿ ನೀಡಿರುವುದು ಗಮನಾರ್ಹ' ಎಂತಲೂ ಸೇರಿಸಿದ್ದ.

"ಎಂಥ ಹುಚ್‌ನನ್‌ಮಕ್ಳು ಸಾರ್ ಇವ್ರು. ನಾನು ನಮ್ ಊರಿಗೆ ಹೋದ್ರೆ ಕ್ಷೇತ್ರಕ್ಕೆ ಭೇಟಿ ನೀಡಿದೆ ಅಂತ ಬರೀತಾರಲ್ಲ" ಎಂದು ನಗುತ್ತಾಳೆ ಜಯಲಕ್ಷ್ಮಿ. ಇನ್ನೂ ಕೆಲವರಂತೂ ಮೇಡಂ 'ಸೆಕ್ಸ್ ವಿಚಾರ ಹೇಳಿ' ಅಂತಲೂ ಕೇಳಿ ಬಯ್ಸಿಕೊಂಡು ಹೋಗಿದ್ದಾರೆ.

ಸೆನ್ಸೇಷನಲ್ ಸುದ್ದಿಯ ಹಸಿವಿರುವವರಿಗೆ ವಿವೇಚನೆ ಇರೋಕೆ ಸಾಧ್ಯ ಹೇಗೆ?

ಅಟ್ಟಹತ್ತಿ ನೋಡಿದ

ಜಯಲಕ್ಷ್ಮಿಯ ಪ್ರತಿ ಚಲನವಲನಗಳನ್ನು ಹದ್ದಿನ ಕಣ್ಣಲ್ಲಿ ಕಾಯುತ್ತಿದ್ದ ರೇಣುಕ ಒಮ್ಮೆ ಮನೆಗೇ ಹೋಗಿದ್ದಾನೆ. ಆಗ ಜಯಲಕ್ಷ್ಮಿ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೆ ಹೋಗಿದ್ದದ್ದು ರೇಣುಕನಿಗೆ ಗೊತ್ತಿರಲಿಲ್ಲ. ಬೆಂಗಳೂರಿನ ಮನೆಯಲ್ಲಿ ತನ್ನ ಪ್ರಾಣಪಕ್ಷಿ ಇಲ್ಲದ್ದನ್ನು ಕಂಡ ರೇಣುಕ ಚಟಪಡಿಸುತ್ತಾ ಸೀದಾ ಜಯಲಕ್ಷ್ಮಿಯ ಹಳ್ಳಿ ಮನೆಗೇ ಹೋಗಿದ್ದಾನೆ. ಹಾಗೆ ಹೋದವನು ಯಾರ ಹತ್ತಿರವೂ ಏನೂ ಹೇಳದೆ ಕೇಳದೆ ಮನೆಯನ್ನೆಲ್ಲಾ ಹುಡುಕಿ ಹುಡುಕಿ ಜಯಲಕ್ಷ್ಮಿ ಕಾಣಿಸದೆ ಹೋದಾಗ ಕೊನೆಗೆ ಅಟ್ಟ ಹತ್ತಿ ಹುಡುಕಾಡಿದನಂತೆ. ಅಷ್ಟರಲ್ಲಿ ಹಳ್ಳಿಯ ಜನರೆಲ್ಲಾ ಇದೇನಿದು ಅಂಥ ಮನೆ ಒಳಗೆ ಬಂದು ನೋಡುತ್ತಾರೆ.

ಮಾನ್ಯ ಗೌರವಾನ್ವಿತ ಹೊನ್ನಾಳಿಯ ಶಾಸಕರು ಮೈಯೆಲ್ಲಾ ಧೂಳತ್ತಿಸಿಕೊಂಡು ಅಟ್ಟದ ಮೇಲೆ ಪಿಳಿಪಿಳಿ ಕಣ್ಣುಬಿಡುತ್ತಾ ಕುಳಿತಿರಬೇಕೆ!

ಅನಿಲ್ ಲಾಡ್ ಜಯಲಕ್ಷ್ಮಿಗೆ 6 ಲಕ್ಷ ಕೊಟ್ಟಿದ್ದು!

ಬಿಜೆಪಿಯ ಇನ್ನೊಬ್ಬ ಶಾಸಕ ಅನಿಲ್ ಲಾಡ್ ಜಯಲಕ್ಷ್ಮಿಗೆ ಒಂದೇ ಇಡುಗಂಟಿನಲ್ಲಿ 6 ಲಕ್ಷ ರೂಪಾಯಿ ಕೊಟ್ಟಿದ್ದಾನೆ ಎಂದರೆ ನಂಬುತ್ತೀರಾ?

ಇದು ನಿಜ.

ಜಯಲಕ್ಷ್ಮಿ-ರೇಣುಕನ ಜಗಳದಲ್ಲಿ ಈ ಲಾಡ್ ಯಾಕೆ ತಲೆ ಹಾಕಿದ, ಹಣ ಯಾಕೆ ಕೊಟ್ಟ ಎಂಬುದೂ ತನಿಖೆಗೆ ಯೋಗ್ಯವಾದ ವಿಚಾರವಲ್ಲವೆ? ಅನಿಲ್ ಲಾಡ್ ನಮ್ಮ ಮುಖ್ಯಮಂತ್ರಿಗಳ ಗೆಳತಿ ಕಬಾಬು ರಾಧಿಕಾಳಿಗೂ ಮನೆ ಖರೀದಿಗೆ ಹಲವು ಕೋಟಿ ಕೊಟ್ಟಿದ್ದನೆಂಬ ಸಂಗತಿ ನಿಮಗೂ ಗೊತ್ತು. ಮಹಿಳೆಯರಿಗೆ ಅದರಲ್ಲೂ ರಾಜಕಾರಣಿಗಳ ಒಡನಾಟದಲ್ಲಿರುವ ಸ್ತ್ರೀರತ್ನಗಳಿಗೆ ಲಾಡ್‌ನ ಬೆಂಬಲ ಯಾವಾಗಲೂ ಇರುತ್ತದೆ ಬಿಡಿ. ಅದೇರೀತಿ ತನ್ನದೇ ಬಿಜೆಪಿ ಪಾರ್ಟಿಯ ಹೊನ್ನಾಳ್ಳಿ ಶಾಸಕ ರೇಣುಕನ ಮಾನ ರಕ್ಷಣೆಗೆಂದು ದಂಡದ ರೂಪದಲ್ಲಿ ಲಾಡ್ ಜಯಲಕ್ಷ್ಮಿಗೆ ಈ ಹಣ ಕೊಟ್ಟಿರಬಹುದಾ? ಯಾಕೆಂದರೆ ಲಾಡ್ ಹಾಗೂ ಜಯಲಕ್ಷ್ಮಿ ನಡುವೆ ಅದಕ್ಕೂ ಮೊದಲು ಪರಿಚಯವೇ ಇರಲಿಲ್ಲ. ಆದರೆ ರೇಣುಕಾ ಮತ್ತು ಲಾಡ್ ನಡುವೆ ಅನೇಕ ಅಕ್ರಮ-ಸಕ್ರಮ ವ್ಯವಹಾರಿಕ ಸಂಬಂಧಗಳಿವೆ.



ಯಾವಾಗ ಜಯಲಕ್ಷ್ಮಿ-ರೇಣುಕನ ನಡುವೆ ಜಗಳ ಬೆಳೆದು ಬೀದಿಗೆ ಬೀಳುವ ಹಂತಕ್ಕೆ ಬಂತೊ, ಆದರ ಹಿಂದೆಯೇ ದುಡ್ಡೂಕಾಸಿನ ಮಾತೂ ಬಂದಿದೆ. ಈ ಸಂಬಂಧ ವಿವಾದ ಬಗೆಹರಿಸಿ ರೇಣುಕನ ಮಾನ ಹರಾಜಾಗದಂತೆ ತಡೆಯಲು ಈ ಲಾಡ್ 6 ಲಕ್ಷ ರೂ.ಗಳನ್ನು ಜಯಲಕ್ಷ್ಮಿಗೆ ಕೊಟ್ಟಿದ್ದಾನೆ.

ದಿನಾಂಕ 12.1.06 ರಂದು ಚೆಕ್ ನಂಬರ್ OWC 721870 ಎಜುಕೇಷನಲ್ ಅಂಡ್ ಸೋಷಿಯಲ್ ವೆಲ್‌ಫೇರ್ ಟ್ರಸ್ಟ್ ಹೆಸರಿಗೆ ಸಿಟಿ ಮಾರ್ಕೆಟ್ಟಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಶಾಖೆಯ ಅಕೌಂಟ್ ನಂಬರ್ 54018114394 ಗೆ (ಹಳೆಯ ನಂಬರ್ 01100050273) ಹಣ ಬಂದು ಬಿದ್ದಿದೆ.

ರೇಣುಕನಿಗೆ ಅಷ್ಟು ದೊಡ್ಡ ಮೊತ್ತದ ಮಾನ ಮರ್ಯಾದೆ ಇತ್ತಾ ಎಂಬುದು ಬೇರೆ ಪ್ರಶ್ನೆ ಬಿಡಿ. ಆದರೆ ಈ ಹಣ ಜಯಲಕ್ಷ್ಮಿಗೆ ಸಿಗಲೇ ಇಲ್ಲ, ಅದರದ್ದೇ ಇನ್ನೊಂದು ಕತೆ ಇದೆ.

ಈ ಜಯಲಕ್ಷ್ಮಿ-ರೇಣುಕಾ ನಡುವೆ ಇನ್ನು ಜಗಳ ತಾರಕಕ್ಕೇರಿರದಿದ್ದಾಗ ಪಿನಾಕಲ್ ಸ್ಕೂಲ್ ಆಫ್ ನರ್ಸಿಂಗ್ ಸೈನ್ಸ್ ಎಂಬ ಕಾಲೇಜನ್ನು ಖರೀದಿಸುವ ಯೋಜನೆ ಹಾಕಿಕೊಳ್ಳುತ್ತಾರೆ. ಅದರ ಓನರ್ ರಾಜಪ್ಪನ ಹತ್ತಿರ 35 ಲಕ್ಷಕ್ಕೆ ಒಪ್ಪಂದವೂ ಆಗಿತ್ತು, ಮುಂದಿನ 10 ದಿನಗಳಲ್ಲೇ ತನಗೆ 10 ಲಕ್ಷ ನೀಡಿ ಬಾಕಿ ಹಣವನ್ನು ತುರ್ತಾಗಿ ಕೊಡಬೇಕೆಂದೂ ರಾಜಪ್ಪ ಕೇಳಿದ್ದಾನೆ. ಜಯಲಕ್ಷ್ಮಿ ಹತ್ತಿರ ಆಗ ಹಣ ಇರಲಿಲ್ಲ. ಆಗ ರೇಣುಕನು ಸೀದಾ ಅನಿಲ್ ಲಾಡ್ ಹತ್ತಿರ ಹೋಗಿ ಜಯಲಕ್ಷ್ಮಿ ಹೆಸರಿಗೆ ಆರು ಲಕ್ಷದ ಚೆಕ್ ಕೊಡಿಸಿದ್ದಾನೆ. ನಂತರ ಆ ದುಡ್ಡು ರಾಜಪ್ಪನ ಕೈಸೇರಿದೆ. ಆಮೇಲೆ ಈ ಕಾಲೇಜಿಗೆ ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನ ಮಾನ್ಯತೆ ಇಲ್ಲ ಎಂದು ಗೊತ್ತಾಗಿ ಹಣ ವಾಪಸ್ ಕೇಳಿದಾಗ ರಾಜಪ್ಪ ಕೈ ಎತ್ತಿದ್ದಾನೆ. ಆಗ ಜಯಲಕ್ಷ್ಮಿ-ರೇಣುಕಾ ಇಬ್ಬರೂ ನೇರ ಸಿಸಿಬಿ ಪೊಲೀಸರ ಹತ್ತಿರ ಹೋಗಿ ವಂಚನೆ ದೂರು ದಾಖಲಿಸಿದ್ದಾರೆ. ಇಂಥ ಡೀಲುಗಳನ್ನು ಸೆಟಲ್ ಮಾಡುವಲ್ಲಿ ಪ್ರವೀಣ ಆಗಿರುವ ಡಿಸಿಪಿ ನಾರಾಯಣಗೌಡ ಕೇಸನ್ನು ಇನ್ಸ್‌ಪೆಕ್ಟರ್ ರೇವಣ್ಣನಿಗೆ ವಹಿಸಿ ಹಣ ವಾಪಸ್ ಕೊಡಿಸಿದ್ದಾರೆ. ಆದರೆ ರೇಣುಕನ ಕೈಗೆ ವಾಪಸ್ ಬಂದ ಹಣ ಕೇವಲ 3 ಲಕ್ಷ.

ಈ ನರ್ಸಿಂಗ್ ಕಾಲೇಜಿನ ಖರೀದಿ ಕತೆ ಒತ್ತಟ್ಟಿಗಿರಲಿ, ಶಾಸಕ ಅನಿಲ್ ಲಾಡ್ ಯಾಕೆ ಜಯಲಕ್ಷ್ಮಿಗೆ ಆರು ಲಕ್ಷ ಕೊಟ್ಟ?

ಮಿಲಿಯನ್ ಡಾಲರ್ ಪ್ರಶ್ನೆ ಇದು. ■

...ೊಪ್ಪಳ-ರಾಯಚೂರು ...ೃತರಿಗೆ ದೋಖಾ ...ಚಿವರಿಗೆ ಲಾಭ?


...ಅರ್ಧ ಹಸಿರಿನಿಂದ ಇನ್ನರ್ಧ ಬರಗಾಲದಿಂದ ಕಂಗೆ... ಕೊಪ್ಪಳ-ರಾಯಚೂರು ಜಿಲ್ಲೆಗಳಲ್ಲಿ ಭತ್ತ ಬೆಳೆಯುವ ...ರಿಗೆ ಈ ಬಾರಿ ಬರಸಿಡಿಲಿನಂತೆ ಎರಗಿದ್ದು ಪಯೋನಿಕ್ ... ಬೀಜದ ಮಲ್ಲಿ ನ್ಯಾಷನಲ್ ಕಂಪನಿ. ಒಂದೆಡೆ ...ನ್ನೆ ವಿಪರೀತ ಬೀಸಿದ ಗಾಳಿ, ಅಕಾಲಿಕ ಆಲಿಕಲ್ಲು ...ಗೆ ಭತ್ತದ ಬೆಳೆ ಹಾಳಾದರೆ, ಇನ್ನೊಂದೆಡೆ ಬೆಳೆದ ...ದ ಬೆಲೆ ಕುಸಿತದಿಂದ ಕೊಪ್ಪಳ-ರಾಯಚೂರು ಜಿಲ್ಲೆಯ ...ರು ಕಂಗೆಟ್ಟಿದ್ದರೆ ಈಗ ಪಯೋನಿಕ್ ಕಂಪನಿ ಅವರ ...ಟ್ಟೆಗೆ ಬರೆ ಹಾಕಿದೆ.

...ಗಂಗಾವತಿ ತಾಲೂಕು ರಾಜ್ಯದಲ್ಲಿ ಭತ್ತದ ಕಣಜ ...ವೇ ಖ್ಯಾತಿ. ಇಂತಹ ತಾಲೂಕಿನಲ್ಲಿ ಕಳೆದ ಹಿಂಗಾರಿನ ...ಯಾಗಿ 40 ಹಳ್ಳಿಗಳ 700 ಎಕರೆಯಲ್ಲಿ ಪಯೋನಿಕ್ ...ನಿಯ ಬತ್ತನೆ ಬೀಜ ಬಿತ್ತಲಾಗಿತ್ತು, ಅಬ್ಬರದ ಪ್ರಚಾರಕ್ಕೆ ...ಳಾಗಿ ಈ ಕಂಪನಿಯ ಬೀಜ ಬಿತ್ತಿ ಜೊಳ್ಳು ...ಯಿಂದ ರೈತ ಹಾನಿಗೊಳಗಾಗಿದ್ದಾನೆ.



ಅತ್ತ ರಾಯಚೂರು ಜಿಲ್ಲೆಯಲ್ಲಿ 400 ಎಕರೆ ಭೂಮಿಯಲ್ಲಿ ಬೆಳೆದ ಭತ್ತವೂ ವೇಸ್ಟ್ ಆಗಿದೆ. ರೈತ ಬಾಯಿ ಬಡಿದುಕೊಳ್ಳುತ್ತಿದ್ದಾನೆ. ಆದರೆ ಬೀಜ ಕಾಯ್ದೆ ಪ್ರಕಾರ ಕಳಪೆ ಅಥವಾ ನಕಲಿ ಬೀಜ ಕೊಡುವುದು,ಮಾರುವುದು ಅಪರಾಧ. ಇದು ಸಾಬೀ...ರೆ ಕಂಪನಿಯ ಲೈಸೆನ್ಸ್ ರದ್ದು ಜೊತೆಗೆ ಸೂಕ್ತ ...ಹಾರ ಆಗಬೇಕು. ಆದರೆ ಇಲ್ಲಿ ಆಗುತ್ತಿರುವುದೇನು?


...ಎರಡು ಜಿಲ್ಲೆಯಲ್ಲಿ 10 ಶಾಸಕರು, 2 ಸಚಿವರಿದ್ದರೂ ...ಗಾದ ಮೋಸಕ್ಕೆ ಯಾರೊಬ್ಬರೂ ತಲೆಕೆಡಿಸಿಕೊಳ್ಳುತ್ತಿಲ್ಲ. ...ವತಿ ತಾಲೂಕಿನಲ್ಲಿ ಹಾನಿಗೀಡಾದ ರೈತರಿಗೆ ...ೋನಿಕ್ ಕಂಪನಿ ಬರೀ 1300 ರೂ. ಪರಿಹಾರ ...ುತ್ತೇನೆ ಎನ್ನುತ್ತಿದೆ. ಆದರೆ ರೈತ ಮಾತ್ರ 1 ಎಕರೆಗೆ ...ಾವಿರ ರೂಪಾಯಿ ಖರ್ಚು ಮಾಡಿದ್ದಾನೆ. ಕೊಟ್ಟಷ್ಟು ...ಳ್ಳಿ ಎಂಬುದು ಕಂಪನಿಯ ಮುಲಾಜಿಲ್ಲದ ಮಾತು. ...ೆ ಉರಿಯುವ ಮನೆಗಳಲ್ಲಿ ಗಳ ಹಿರಿಯುವ ಚಾಳಿ ...ವ ಕೊಪ್ಪಳ ಜಿ.ಪಂ. ಅಧ್ಯಕ್ಷೆ ವಿಜಯಲಕ್ಷ್ಮಿ ರೈತರಿಗೆ ...ವಿರ ಪರಿಹಾರ ಕೊಡಿ ಸಾಕು ಎನ್ನುತ್ತಿದ್ದಾಳೆ. ಇದರ ... ತಲೆಕೆಡಿಸಿಕೊಳ್ಳಬೇಕಿದ್ದ ಜಿಲ್ಲಾ ಸಚಿವ ಇಕ್ಬಾಲ್ ...ರಿ ಎಂಬ ದೊಡ್ಡ ಮನುಷ್ಯ ಅಯ್ಯಪ್ಪ ದೇಗುಲದ ...ದದ ಕೆಸರನ್ನು ತೊಳೆದುಕೊಳ್ಳಲೆಂದು ಬೆಂಗಳೂರಿನಲ್ಲಿ ...ಿದ್ದಾನೆ.



...ಇನ್ನು ಆಸ್ತಿ ವಿವರ ...ದೆ ಲೋಕಾಯುಕ್ತ ... ಶಾಕ್ ಟ್ರೀಟ್ ...ಟ್‌ಗೊಳಗಾಗಿರುವ ...ಚೂರು ಮಂತ್ರಿ ...ೀಡ್ ಹನುಮಂತಪ್ಪನ ...ೂ ಇದೇ ಕಂಪನಿ ...ರುವ ಬೀಜಗಳಲ್ಲಿ ...ಪ್ಪು ದೋಷ. ಒಂದು ...ಗೆ 30 ಚೀಲ ಭತ್ತ ಇಳುವರಿ ಅಂತ ಪ್ರಚಾರ ... ಕಂಪನಿ ಕೊಟ್ಟಿದ್ದ ಕಳಪೆ ಬೀಜಗಳನ್ನೇ. ಅವರು ... ಬೀಜಗಳು ಬರಿ ಜೊಳ್ಳಾಗಿ, ರೈತನನ್ನು ನೇಣಿನ ...ಗೆ ತಂದು ನಿಲ್ಲಿಸಿರುವ ಪಯೋನಿಕ್ ಕಂಪನಿಯನ್ನು ...ಸಲು ಕೃಷಿ ಇಲಾಖೆಯ ಅಧಿಕಾರಿಗಳು, ಕೆಲ ...ಕಾರಣಿಗಳು ಟೊಂಕಕಟ್ಟಿ ನಿಂತುಬಿಟ್ಟಿದ್ದಾರೆ. ...ಚೂರಿನ ಕೃಷಿ ಕಾಲೇಜಿನ ಸಂಶೋಧಕ ನಿರ್ದೇಶಕರ ... ಈ ಬಗ್ಗೆ ಅಧುನದ ವರದಿ ನೀಡಿದ್ದರೂ, ...ಗೆ ಮೋಸವಾಗಿದ್ದ ಗೊತ್ತಿದ್ದೂ ಕೂಡ ಮಂತ್ರಿ ...ೀದ್ ಮಾತ್ರ 'ಬಂಡ ನೋಡೋಣ ಹೋಗಿ' ... ಸಾಗಹಾಕಿದಾತ ಇಂದಿಗೂ ಪತ್ತೆಯಿಲ್ಲ.

...ಕಲಿ ಬೀಜಗಳನ್ನು ಮಾರುವ ಅಂಗಡಿಗಳ ಮೇಲೆ ...ಗೊಳ್ಳಬೇಕಾದ ...ಷಿ ಇಲಾಖೆ ಸುಮ್ಮನಿದ್ದರೂ ...ದರೂ ಬಾಯಿ ...ಡದ ಕೃಷಿ ಮಂತ್ರಿ ಬಂಡೆಪ್ಪ ...ಪುರ ಅದ್ಯಾವ ಕಟುಣಿಯ ಕ್ರಿಮಿನಾಶಕ ಕುಡಿದು [illegible] ...ಜಾರದಸ್ನಾನ ...ಾಡಿದರೆ ರೈತರ ಮನೆಯಲ್ಲಿ ...ದ್ದು ಹೋಗಿ ...ಡುತ್ತಿದ್ದಾರೆ. ಇಲ್ಲಿ ಬದುಕಿರುವ ... ಸಾಬೀತು ಪಡಿಸಬೇಕಾದ ಮುನ್ನವೇ ಆತನನ್ನು ...ಿಸಿದೆ. ಅದಲೀಗ ಏನೂ ಮಾಡೋಣ್ರಾದು?

-ವರದಿಗಾರ



ಕುವೆಂಪು ವಿ.ವಿ.: ಜಾತಿ ರಾಜಕಾರಣವೂ, ಸದಾನಂದನ ಬಂಧನವೂ....

ಮಲೆನಾಡ ಜನರ ಆಶೋತ್ತರಗಳ ಈಡೇರಿಕೆಗೆ ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯ ಇಂದು ಅವನತಿಯ ಹಾದಿ ಹಿಡಿದು ಬಡ ವಿದ್ಯಾರ್ಥಿಗಳಿಂದ ದೂರವಾಗಿ ಲಾಭಕೋರ ಲಾಬಿಗಳ ಕೈವಶವಾಗಿದೆ. ಇತ್ತೀಚೆಗೆ ನಡೆದ ಪ್ರಾಧ್ಯಾಪಕ ಜೆ.ಎಸ್. ಸದಾನಂದನ ಬಂಧನದ ಪ್ರಕರಣ ಕುವೆಂಪು ವಿವಿಯ ಭ್ರಷ್ಟಾಚಾರ ಮತ್ತು ಅವ್ಯವಸ್ಥೆಗೆ ಒಂದು ನಿದರ್ಶನ. ಪರಮ ಭ್ರಷ್ಟ, ಜಾತೀವಾದಿ ಮತ್ತು ವಿಕೃತ ಚಿಂತಕನಾದ ಸದಾನಂದನನ್ನು ಮೊನ್ನೆ ಮೈಸೂರಿನ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದಾಗ ಈತನ ಪಾಪದ ಕೊಡ ತುಂಬಿದೆ ಎಂದೇ ವಿವಿಯ ಸಜ್ಜನ ನೌಕರರು ನಿಟ್ಟುಸಿರು ಬಿಟ್ಟರು.

ಹಾಗೆ ನೋಡಿದರೆ ಈತನ ತಂತ್ರಗಾರಿಕೆ ಮತ್ತು ನಯವಂಚನೆಗೆ ಒಂದು ದೊಡ್ಡ ಇತಿಹಾಸ ಇದೆ. ದಶಕದಲ್ಲಿ ಈತನ ಹಲ್ಕ ಕೆಲಸಗಳಿಂದ ಬೆಚ್ಚಿದ ಆಗಿನ ಮಂಗಳೂರಿನ ಕುಲಪತಿ ಸಫೀವುಲ್ಲಾ ಈತನನ್ನು ಪೊಲೀಸರ ಸಹಾಯದಿಂದ ಹೊರದಬ್ಬಿದ್ದರು. ಆಗ ಅರೆಕಾಲಿಕ ಉಪನ್ಯಾಸಕನಾಗಿದ್ದ ಈತ ದಲಿತ ಪ್ರಾಧ್ಯಾಪಕ ಮುಸ್ಲಿಂ ಪ್ರಾಧ್ಯಾಪಕ ಪ್ರೊ. ಮಧುಸೂದನ್ ಮಾನೆ ಮತ್ತು ಜಮೀಲ್ ಅಹಮದ್ (ವೀರಪ್ಪನ್‌ನಿಂದ ಹತನಾದ ಶಕೀಲ್ ಅಹಮದ್ ಅವರ ಸಹೋದರ) ಅವರ ವಿರುದ್ಧ ವಿದ್ಯಾರ್ಥಿಗಳನ್ನು ಎತ್ತಿಕಟ್ಟಿ ಅವರನ್ನು ಹೊರಹಾಕಿ ಅವರ ಜಾಗದಲ್ಲಿ ತಾನು ಕಾಯಂ ಆಗಲು ಪ್ರಯತ್ನಪಟ್ಟಿದ್ದ. ಆ ಪ್ರಯತ್ನದ ಅಂಗವಾಗಿಯೇ ಈ ಮುಗ್ಧರ ವಿರುದ್ಧ ಒಂದು ಸುಳ್ಳು ಸೆಕ್ಸ್ ಸ್ಕ್ಯಾಂಡಲ್‌ನ್ನೇ ಸೃಷ್ಟಿಸಿದ್ದ. ಕೊನೆಗೆ ಯಾವಾಗ ಸತ್ಯ ಹೊರಬಿತ್ತೋ ಅಲ್ಲಿಂದ ರಾತ್ರೋರಾತ್ರಿ ಪರಾರಿಯಾಗಿ ನಂತರ ಕುವೆಂಪು ವಿವಿಗೆ ಬಂದು ವಕ್ಕರಿಸಿದ.

ಕುವೆಂಪು ವಿವಿ ಸ್ಥಾಪನೆಯಾದಾಗ ಅರೆಕಾಲಿಕ ಉಪನ್ಯಾಸಕನಾಗಿ ಸೇರಿಕೊಂಡ ಈತ ತನ್ನ ಮ್ಯಾನಿಪುಲೇಷನ್ ಮತ್ತು ಮೋಸದ ತಂತ್ರಗಾರಿಕೆಯಿಂದಲೇ ಪಿಎಚ್‌ಡಿಯೂ ಇಲ್ಲದೆ, ಒಂದೇ ಒಂದು ದಿನದ ಖಾಯಂ ಬೋಧನಾ ಅನುಭವವಿಲ್ಲದೆ ನಿಯಮಗಳ ವಿರುದ್ಧವಾಗಿ ಜಾತಿ ರಾಜಕೀಯ ಮಾಡಿ ನೇರವಾಗಿ ರಾಜ್ಯಶಾಸ್ತ್ರದ ರೀಡರ್ ಆಗಿ ನೇಮಕಗೊಂಡ. ನಂತರ ಕೆಲವೇ ದಿನಗಳಲ್ಲಿ ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಿ, ಮೀಸಲಾತಿ ನಿಯಮಗಳನ್ನು ಗಾಳಿಗೆ ತೂರಿ ಪ್ರೊಫೆಸರ್ ಆಗಿಯೂ ನೇಮಕಗೊಂಡ.

ಈ ಅಕ್ರಮಗಳ ವಿರುದ್ಧ ಡಿಎಸ್‌ಎಸ್ ಸಂಸ್ಥಾಪಕರಾದ ಪ್ರೊ. ಬಿ. ಕೃಷ್ಣಪ್ಪನವರು ದೊಡ್ಡ ಹೋರಾಟವನ್ನೇ ಮಾಡಿ ಕೋರ್ಟಿನಲ್ಲಿ ತಡೆಯಾಜ್ಞೆ ತಂದಿದ್ದರು. ಇವನ ಜಾತಿ ಮತ್ತು ಹಣದ ಲಾಬಿಯ ಮುಂದೆ ಪಾಪ ಕೃಷ್ಣಪ್ಪನವರ ಹೋರಾಟ ವ್ಯರ್ಥವಾಯಿತು.

1998ರಲ್ಲಿ ಅನುರಾಧಾ ಪಟೇಲ್ ಎಂಬುವವರು ದಿಢೀರ್ ಬಡ್ತಿ ಪಡೆದು ಇದೇ ಸದಾನಂದನ ಸಹಪಾಠಿ ರಾಜಾರಾಮ್ ಹೆಗಡೆ ಎಂಬುವವರು ಆಕೆಯ ವಿರುದ್ಧ ಹೈಕೋರ್ಟಿಗೆ ಹೋಗಿದ್ದರು. "ಬಡ್ತಿಗೆ ಬೇಕಾದ ಐದು ವರ್ಷಗಳ ಖಾಯಂ ಸೇವೆಯನ್ನು ಆಕೆ ಮಾಡಿಲ್ಲ ನಿಯಮ ಉಲ್ಲಂಘಿಸಿ ಬಡ್ತಿ ನೀಡಲಾಗಿದೆ" ಎಂದೆಲ್ಲಾ ಹೆಗಡೆ ಕೋರ್ಟಿನಲ್ಲಿ ಮಾತ್ರವಲ್ಲದೇ ಕಂಡಕಂಡವರ ಮುಂದೆಲ್ಲಾ ಚೀರಾಡಿದ್ದರು. ಆದರೆ ವಿಚಿತ್ರವೆಂದರೆ ಹೆಗಡೆಯ ಸಹಪಾಠಿ ಸದಾನಂದನೇ ಹತ್ತು ವರ್ಷಗಳ ಹಿಂದೆಯೇ ಯಾವ ಸೇವಾ ಅನುಭವವಿಲ್ಲದೇ, ಯಾವ ಪಿಎಚ್‌ಡಿ ಇಲ್ಲದೇ, ಕೇವಲ ಜಾತಿರಾಜಕಾರಣದ ಮೂಲಕ ಬಡ್ತಿ ಪಡೆದ ಬಗ್ಗೆ ಅವರು ಚಕಾರವೆತ್ತಲಿಲ್ಲ. ಈ ಸತ್ಯ ಗೊತ್ತಿದ್ದ ವಿ.ವಿ.ಯ ಹಿರಿಯ ತಲೆಗಳು ಒಳಗೊಳಗೇ ಪಿಸುಗುಟ್ಟಿಕೊಂಡರೇ ವಿನಃ ಯಾರೂ ತುಟಿಪಿಟಕ್ ಎನ್ನಲಿಲ್ಲ.

ಆದರೆ ಅನುರಾಧಾ ಪಟೇಲ್ ವಿರುದ್ಧ ಇವರು ಕೇಸು ದಾಖಲಿಸಿರುವುದರ ಹಿಂದಿನ ಅಸಲಿ ಸತ್ಯ ಬೇರೆಯೇ ಇದೆ. ಆಗ ಕುವೆಂಪು ವಿ.ವಿ.ಯ ಕುಲಪತಿಗಳಾಗಿದ್ದ ಹಿ. [illegible]ರಾಮಯ್ಯನವರು ಬಹಳ ಕಾಲ ನೆನೆಗುದಿಗೆ ಬಿದ್ದಿದ್ದ ವಿ.ವಿ.ಯ ಅಧ್ಯಾಪಕರ ಮತ್ತು ಅಧ್ಯಾಪಕೇತರ ಹುದ್ದೆಗಳನ್ನು ಭರ್ತಿ ಮಾಡುವಾಗ ದಕ್ಷ, ದಲಿತ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಿದ್ದರು. ಹೀಗೆ ಅಂದು ಅವರು ಆಯ್ಕೆ ಮಾಡಿದವರಲ್ಲಿ ಅನುರಾಧಾ ಪಟೇಲ್ ಕೂಡ ಒಬ್ಬರಾಗಿದ್ದರು. ಇದನ್ನು ನೋಡುತ್ತಿದ್ದ ಮಹಾನ್ ಜಾತಿವಾದಿ ಸದಾನಂದ ಒಳಗೊಳಗೇ ಕುದಿಯುತ್ತಿದ್ದ; ಹೇಗಾದರೂ ಮಾಡಿ ಇದನ್ನು ತಪ್ಪಿಸಬೇಕೆಂದು ತಲೆ ಕೆರೆದುಕೊಳ್ಳುತ್ತಿದ್ದ. ಕೊನೆಗೆ ರಾಜಾರಾಮ್ ಹೆಗಡೆ ಎಂಬ ಒಡನಾಡಿಯನ್ನು ಕುಲಪತಿ ವೆಂಕಟರಾಮಯ್ಯನವರ ವಿರುದ್ಧ ಎತ್ತಿಕಟ್ಟಿ ಹೈಕೋರ್ಟಿಗೆ ಹೋಗುವಂತೆ ಪ್ರೇರೇಪಿಸಿದ. ಇನ್ನೊಂದೆಡೆ, ಕೋಮುವಾದಿ ಎಬಿವಿಪಿ ನಾಯಕರೊಂದಿಗೆ ಕೈಜೋಡಿಸಿ ವೆಂಕಟರಾಮಯ್ಯನವರು ಎರಡನೇ ಬಾರಿಗೆ ವಿ.ವಿ.ಯ ಕುಲಪತಿಗಳಾಗದಂತೆ ಪಿತೂರಿಯನ್ನೂ ನಡೆಸಿದ.



ಈ ಕೇಸಿಗೆ ಸಂಬಂಧಿಸಿದಂತೆ ಸದಾನಂದ-ಹೆಗಡೆದ್ವಯರು ಸಲ್ಲಿಸಿದ ಅನುರಾಧ ಪಟೇಲರ ಅಂಕಪಟ್ಟಿಗೆ ಸಂಬಂಧಪಟ್ಟ ದಾಖಲೆಯು ಫೋರ್ಜರಿ ಎಂದು ಅನುರಾಧ ಇವರ ವಿರುದ್ಧ ಮೈಸೂರಿನ ನ್ಯಾಯಾಲಯದಲ್ಲಿ ಕಟ್ಲೆಹೂಡಿದ್ದರು. ಈ ಸಂಬಂಧ ಈತನನ್ನು ಮೊನ್ನೆ ಮೈಸೂರು ಪೊಲೀಸರು ಬಂಧಿಸಿ ಎಳೆದುಕೊಂಡು ಹೋಗಿದ್ದಾರೆ.

ಸದಾನಂದನಿಗೆ ಯಾವುದಾದರೂ ವಿಶ್ವವಿದ್ಯಾಲಯದ ಕುಲಪತಿಯಾಗಬೇಕೆಂಬ ತೆವಲು ಬಹುಕಾಲದಿಂದಲೂ ಇದೆ. ಇಂಥ ಒಂದು ಕನಸು ಕಾಣುವ ಮೊದಲು ಆತ ತನ್ನ ಮುಖವನ್ನು ಕನ್ನಡಿಯಲ್ಲಿ ಎಂದಾದರೂ ನೋಡಿಕೊಂಡಿದ್ದಾನೋ ಇಲ್ಲವೋ ಗೊತ್ತಿಲ್ಲ. ಈಗ ಅನುರಾಧ ಪಟೇಲ್ ಪ್ರಕರಣದಿಂದ ಈತನ ಮಹತ್ವಾಕಾಂಕ್ಷೆ ಕನಸಿಗೆ ಗುದ್ದು ಬೀಳತೊಡಗಿದೆ. ಅದಕ್ಕಾಗಿ ಇನ್ನೊಂದು ನಯವಂಚನೆಯನ್ನು ಶುರುಮಾಡಿಕೊಂಡ. ಅದೆಂದರೆ, ಕುಲಪತಿ ಶೇರೇಗಾರನನ್ನು ಮುಂದಿಟ್ಟುಕೊಂಡು ಅನುರಾಧ ಪಟೇಲರೊಂದಿಗೆ ಸಂಧಾನಕ್ಕೆ ಮುಂದಾದ. ಈ ಯೋಜನೆಯಂತೆ ಸಂಧಾನವೂ ನಡೆದು ಇಬ್ಬರೂ ತಮ್ಮ ತಮ್ಮ ಕೇಸುಗಳನ್ನು ವಾಪಸ್ ಪಡೆಯುವುದೆಂದು ನಿರ್ಧರಿಸಲಾಗಿತ್ತು. ಅದರಂತೆ ಹೆಗಡೆಯನ್ನು ಜಾಣತನದಿಂದ ಪುಸಲಾಯಿಸಿ ಕೇಸನ್ನು ವಾಪಸ್ಸು ಪಡೆಯುವುದರಲ್ಲೇ ಸಫಲನಾದ. ಆದರೆ ಸದಾನಂದನ ವಿರುದ್ಧದ ಕೇಸನ್ನು ಕಾರಣಗಳಿಂದ ಹಿಂತೆಗೆಯಲು ಸಾಧ್ಯವಿಲ್ಲವೆಂದು ನ್ಯಾಯವಾದಿಗಳು ಅಭಿಪ್ರಾಯಪಟ್ಟರು.

ಈತನ ಕಿತಾಪತಿ ಮತ್ತು ನೀಚತನ ಕುವೆಂಪು ವಿವಿಯ ವ್ಯಾಪ್ತಿಗೆ ಸೀಮಿತವಾಗಿಲ್ಲ. ಶಿವಮೊಗ್ಗದ ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ರಾತ್ರೋರಾತ್ರಿ ಇವನ ಹೆಂಡತಿ ಖಾಯಂ ಉಪನ್ಯಾಸಕಿಯಾಗಿ ನೇಮಕಗೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ. ಒಂದು ಖಾಯಂ ಹುದ್ದೆಗೆ ಆಯ್ಕೆಮಾಡುವಾಗ ಎಲ್ಲಾ ರಾಷ್ಟ್ರೀಯ ಮತ್ತು ಸ್ಥಳೀಯ ಪತ್ರಿಕೆಗಳಿಗೆ ಕಡ್ಡಾಯವಾಗಿ ಜಾಹೀರಾತು ಕೊಟ್ಟು, ನಂತರ ಸಂದರ್ಶನದ ಮೂಲಕ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ಆದರೆ ಇಲ್ಲಿ ಆಗಿದ್ದೇನೆಂದರೆ, ನುರಿತ ಹಾಗೂ ಬುದ್ಧಿವಂತ ಅಭ್ಯರ್ಥಿಗಳನ್ನು ಕೈಬಿಟ್ಟು ಎಲ್ಲೂ ಸಲ್ಲದ ಈತನ ಪತ್ನಿ ನಿರ್ಮಲಳನ್ನು ಗಣಿತಶಾಸ್ತ್ರದ ಉಪನ್ಯಾಸಕಿಯಾಗಿ ಆಯ್ಕೆ ಮಾಡಲಾಗಿದೆ. ಈತನ ನರಿಬುದ್ಧಿಗೆ ಇದೊಂದು ಉದಾಹರಣೆ ಬಿಟ್ಟರೆ ಇನ್ನೇನು ಹೇಳಬೇಕು?

ಯಾವ ವಿದ್ವತ್ತೂ ಇಲ್ಲದ ಸಾಮಾನ್ಯ ದರ್ಜೆಯ ಉಪನ್ಯಾಸಕನಾದ ಈತ ಕೇವಲ ಜಾತಿರಾಜಕಾರಣದ ಮೂಲಕ ಭಾರೀ ಮೊತ್ತಗಳ ಪ್ರಾಜೆಕ್ಟ್‌ಗಳನ್ನು ತಂದು ಸಾಕಷ್ಟು ಹಣವನ್ನು ಗುಳುಂ ಮಾಡಿರುವುದನ್ನು ನೋಡಿದ ವಿವಿಯ ಜನ ಇವನೇನು ಉಪನ್ಯಾಸಕನೋ ಅಥವಾ ರಾಜಕಾರಣಿಯೋ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ಈತ ಎಂತಹ ಮೇಧಾವಿ(!) ಎಂದರೆ, ಈ ದೇಶದಲ್ಲಿ ಅಸ್ಪೃಶ್ಯತೆ ಎಂಬುದು ಎಂದೂ ಇರಲೇ ಇಲ್ಲ, ಜಾತಿ ತಾರತಮ್ಯ, ಮೇಲು-ಕೀಳು ಎಂಬುದೆಲ್ಲವೂ ಬ್ರಿಟಿಷರು ಸೃಷ್ಟಿಸಿದ್ದು, ಬಸವಣ್ಣನಾಗಲೀ ಅಥವಾ ಇಡೀ ವಚನ ಸಾಹಿತ್ಯವಾಗಲೀ ಎಲ್ಲೂ ಜಾತಿಯತೆಯನ್ನು ಖಂಡಿಸಿಯೇ ಇಲ್ಲ ಎಂದು ಕಂಡಕಂಡಲ್ಲಿ ಬಡಬಡಾಯಿಸುತ್ತಾನೆ. ಇದು ಅವನ ಬೌದ್ಧಿಕ ದಿವಾಳಿಕೋರತನಕ್ಕೆ ಹಿಡಿದ ಕನ್ನಡಿ ಎಂದು ಮಾತ್ರ ಹೇಳಿದರೆ ಸಾಕಾಗುವುದಿಲ್ಲ. ಏಕೆಂದರೆ, ಅವನ ಈ ಮಾತುಗಳ ಹಿಂದೆ ಆರೆಸ್ಸೆಸ್, ಭಜರಂಗದಳ, ವಿಶ್ವಹಿಂದೂ ಪರಿಷತ್‌ನಂತಹ ಕೋಮುವಾದಿ ಸಂಘ ಪರಿವಾರದ ಸಿದ್ಧಾಂತ ಮಾತ್ರವಲ್ಲ, ಅದರ ದುಡ್ಡೂ ಇದೆ. ವಿವಿಧ ಪ್ರಾಜೆಕ್ಟ್‌ಗಳ ಆಧಾರದ ಮೇಲೆ ಈ ರೀತಿ ಮಾತನಾಡುವುದಕ್ಕೆ, ಬರೆಯುವುದಕ್ಕೆ ಅವನಿಗೆ ಸಂಘಪರಿವಾರದಿಂದಲೂ ದುಡ್ಡು ಬರುತ್ತೆ ಹಾಗೂ ವಿಶ್ವಮಟ್ಟದ ಬ್ರಾಹ್ಮಣ ಸಂಘಟನೆಗಳಿಂದಲೂ ದುಡ್ಡು ಬರುತ್ತದೆ. ಆದ್ದರಿಂದಲೇ ಆತನ ಸಂಪತ್ತು ಇಂದು ಎಲ್ಲೆ ಮೀರಿ ಬೆಳೆದಿರುವುದು.

ಆದರೆ ವಿಚಿತ್ರ ಎಂದರೆ, ಇಷ್ಟೆಲ್ಲಾ ಪಕ್ಕಾ ಬಲಪಂಥೀಯ ಚಿಂತನೆಗಳನ್ನು, ದಲಿತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ನಿಲುವುಗಳನ್ನು ಹೊಂದಿದ್ದರೂ ಈತ ತಾನೋರ್ವ ಎಡಪಂಥೀಯನೆಂದು ಪೋಸು ಕೊಡುತ್ತಾನೆ! ವಿಶ್ವ ವಿಪ್ರರ ಹಣದ ಥೈಲಿ ಒಂದೆಡೆ, ಎಡಪಂಥೀಯ ಚಿಂತಕನೆಂದು ಕರೆಸಿಕೊಳ್ಳಬೇಕೆಂಬ ತೆವಲು ಇನ್ನೊಂದೆಡೆ, ಈತನ ಎಡಬಿಡಂಗಿತನಕ್ಕೆ ಏನೆನ್ನಬೇಕೋ ಗೊತ್ತಿಲ್ಲ. ಪಾಯಶಃ ಇವತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿ ಕುವೆಂಪು ಇದ್ದಿದ್ದರೆ ಅದಕ್ಕೊಂದು ಸೂಕ್ತ ಟೈಟಲ್ ಕೊಡುತ್ತಿದ್ದರೋ ಏನೋ.

ಕುವೆಂಪು ವಿ.ವಿ. ಬಡವರೇ ಹೆಚ್ಚಾಗಿರುವ ಗ್ರಾಮೀಣ ಪ್ರದೇಶದಲಿದ್ದರೂ ಇಂದು ಕರ್ನಾಟಕದಲ್ಲೇ ಅತೀ ದುಬಾರಿ ವಿವಿಯಾಗಿದೆ. ಬಡ [illegible]


-ವರದಿಗಾರ


ಅನುರಾಧ ಪಟೇಲ್ ಯಾರು?

ಈ ಅನುರಾಧ ಪಟೇಲ್ ಬಹಳ ಸಾಚಾ ಏನಲ್ಲ. ಸದಾನಂದ ಪರಮ ಪಾಪಿಯಾದರೆ ಈಕೆಯನ್ನು ವರ್ಣಿಸಲು ಅಂತಹುದೇ ಇನ್ನೊಂದು ಶಬ್ದ ಬೇಕಾಗುತ್ತದೆ. ಈಕೆಯ ಗಂಡ ಪ್ರಕಾಶ್ ಬೀದರ್ ಜಿಲ್ಲಾ ಪಂಚಾಯ್ತಿ ಅಧಿಕಾರಿ. ಇತ್ತೀಚೆಗಷ್ಟೇ ಇವರ ಮನೆಯ ಮೇಲೆ ಲೋಕಾಯುಕ್ತರು ದಾಳಿ ಮಾಡಿ ಕೋಟ್ಯಂತರ ರೂಪಾಯಿ ಮತ್ತು ಆಸ್ತಿ ವಶಪಡಿಸಿಕೊಂಡಿದ್ದಾರೆ. ಮಹಾನ್ ಭ್ರಷ್ಟ ಎಂದೇ ಹೆಸರು ಮಾಡಿರುವ ಪ್ರಕಾಶ್ ತನ್ನ ಪತ್ನಿಯನ್ನು ಸುಳ್ಳು ದಾಖಲೆಗಳ ಮೂಲಕ ರೀಡರ್ ಹುದ್ದೆಗೆ ನೇಮಕ ಮಾಡಿದ್ದಾನೆ ಎಂಬ ಆರೋಪವಿದೆ. ಈಕೆಯು ಬಾಯಿಗೆ ಕುವೆಂಪು ವಿವಿಯಲ್ಲಿ [illegible] ಒಟ್ಟಿನಲ್ಲಿ ಈ ಇಬ್ಬರು ಪಾಪಿಗಳ ಜಗಳದಲಿ ವಿದ್ಯಾರ್ಥಿಗಳು ಮತ್ತು ವಿವಿ ನಲುಗುತ್ತಿದೆ [illegible]

ಹುಲಿಯ ಬಾಯಲ್ಲಿ ಹರಯದ ಕಾಯಿ

ಯಾವಾಗ ಹುಲಿ ಇವಳಿಗೆ ಬಾಯಿಹಾಕಿತೋ.... ಎಲ್ಲರೂ ಚಿಟ್ಟನೆ ಚೀರಿ, ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಇವರೆಲ್ಲರ ಸಾಮೂಹಿಕ ಚೀರುವ ಸದ್ದಿಗೆ ಹುಲಿಯೂ ಆ ಹುಡುಗಿಯನ್ನು ಅಲ್ಲೇ ಬಿಟ್ಟು ಕಾಡಿನತ್ತ ಓಡಿಹೋಗಿದೆ. ಇತ್ತ ಜನ ಹಳ್ಳಿಯತ್ತ ಓಡಿಹೋಗಿದ್ದಾರೆ. ಈ ಹುಡುಗಿಯೊಬ್ಬಳೇ ಹೊಲದ ನಡುವೆ ಬಿದ್ದಿದ್ದಾಳೆ. ಈ ಜನ ತಕ್ಷಣ ನನಗೆ ಮಾಹಿತಿ ರವಾನಿಸಲು ಆಳನ್ನು ಓಡಿಸಿದ್ದಾರೆ. ಅಷ್ಟು ಹೊತ್ತಿಗೆ ಆ ಹುಡುಗಿಗೆ ಪ್ರಜ್ಞೆ ತಿರುಗಿದೆ. ಅವಳು ಅಲ್ಲಿಂದ ಎದ್ದು, ಕನಸಿನಲ್ಲಿ ಬಂದವಳಂತೆ ಹಳ್ಳಿಗೆ ಹಿಂತಿರುಗಿದ್ದಾಳೆ. ಹಳ್ಳಿಗರೆಲ್ಲಾ ಬೆಚ್ಚಿಬಿದ್ದಿದ್ದಾರೆ. ಅವಳ ಸುತ್ತಾ ಫೇರಾಯಿಸಿ ನನ್ನೊಂದಿಗೆ ಹೇಳುತ್ತಿದ್ದಾರೆ....





ಕನ್ನಡ ರೂಪಾಂತರ: ಡಾ. ಟಿ.ಎಸ್.ವಿವೇಕಾನಂದ

ಚೆರ್ನಾ ಸುಳಿಯುವ ಈ ಲೇಜಿಗೆಯು ಕೆಲಸ ಮುಗಿಯುವ ಹೊತ್ತಿಗೆ ಸೂರ್ಯ ಪಶ್ಚಿಮದ ದಿಗಂತದಲ್ಲಿ ಕಣ್ಮರೆಯಾಗಿದ್ದ. ಈ ಹೊತ್ತಿನಲ್ಲಿ ಇಲ್ಲಿಂದ ಹೊರಡುವ ಸಾಧ್ಯತೆಯೇ ಇರಲಿಲ್ಲ. ಉಳಿದುಕೊಂಡಿರುವ ನರಭಕ್ಷಕ ಒಂದು ದಯುಷ್ಯಾದ ಹುಲಿ. ಇದೇ ಪ್ರಾಂತ್ಯದಲ್ಲಿ ತನ್ನ ಜೀವಮಾನವನ್ನು ಕಳೆದಿರುವ ಅದಕ್ಕೆ ಇಲ್ಲಿನ ಒಂದೊಂದೂ ಅಂಗುಲದ ಸ್ಥಳಗಳ ಪರಿಚಯವಿರುತ್ತದೆ. ಅಲ್ಲದೆ ಈ ಅವಧಿಯಲ್ಲಿ ನೂರಾರು ಬಾರಿ ಅದು ಮನುಷ್ಯರು ಬಂದೂಕಿನ, ಕೆಪಿನ ಕೋವಿಗಳ ಮೂಲಕ ಆದಿರುವ ಮಂಗಾಟಗಳನ್ನೂ ಕಂಡಿದೆ. ಇಂಥವನ್ನೆಲ್ಲಾ ಹೆದರುವ ಮನಸ್ಥಿತಿಯನ್ನು ಸಹಜವಾಗಿಯೇ ಅದು ಮೀರಿರುತ್ತದೆ. ಹೀಗಿದ್ದಾಗ ಈ ಸಮಯದ ಪಯಣ ಎಷ್ಟು ಸರಿ? ಅಲ್ಲದೆ ಗಂಡೆದೆಯ ಆ ಹುಲಿ ರಾತ್ರಿಗೆ ಈ ಹಸುವಿನ ಉಳಿಕೆಗಳ ಬಳಿಗೆ ಬಂದರೂ ಬರಬಹುದು. ರಾತ್ರಿ ಇಲ್ಲೇ ಗೊತ್ತು ಕೂತರೆ ಹೇಗೆ?

ಇಲ್ಲಿ ಕಂಡಿದ್ದರಲ್ಲೇ ಒಂದು ಒಳ್ಳೆಯ ಮರವನ್ನು ಆರಿಸಿಕೊಂಡು ಕುಳಿತುಕೊಂಡೆ. ಇದು ಹನ್ನೆರಡು ಗಂಟೆಗಳ ವಿಶ್ರಾಂತಿಗೆ ತಕ್ಕುದಾಗಿರಲಿಲ್ಲ. ಬೆಳಿಗ್ಗೆ ಎದ್ದಾಗ ನನ್ನ ಒಂದೊಂದು ಕೀಲೂ ಕಿರುಗುಟ್ಟುತ್ತಿದ್ದವು. ರಾತ್ರಿ ಆರಂಭದಲ್ಲಿ ಶುರುವಾದ ಹುಲಿಯ ಘರ್ಜನೆಯಂತೂ ಇಡೀ ರಾತ್ರಿ ಅನಿರ್ದಿಷ್ಟ ಸಮಯಗಳ ಅಂತರದಲ್ಲಿ ಮರುಕಳಿಸುತ್ತಲೇ ಇತ್ತು. ಬೆಳಗಾದಂತೆ ನಿಧಾನವಾಗಿ ದೂರ ಸರಿಯುತ್ತಾ ಕಣಿವೆಯ ನೆತ್ತಿಯ ಕಡೆಗೆ ಸಾಗಿ ನನ್ನ ಶಬ್ದವಲಯದಿಂದ ದೂರವಾಯಿತು.

ಕಳೆದ ಅರವತ್ತು ಗಂಟೆಗಳಿಂದ ನಿದ್ರಾಹಾರಗಳಿಲ್ಲದೆ ನನ್ನ ಮೈ-ಮನಸ್ಸುಗಳು ಮರಗಟ್ಟಿ ಹೋಗಿದ್ದವು. ರಾತ್ರಿ ಒಂದು ಗಂಟೆಯ ಸುಮಾರಿಗೆ ಆರಂಭವಾಗಿ ಸುಮಾರು ಹೊತ್ತು ಸುರಿದ ಮಳೆ ನನ್ನನ್ನು ಇನ್ನಷ್ಟು ಹಿಂಸೆಗೀಡು ಮಾಡಿತ್ತು. ನನ್ನ ಬಟ್ಟೆಗಳೆಲ್ಲಾ ಮೈಗಂಟಿಕೊಂಡು ದುರ್ವಾಸನೆ ಹೊಡೆಯುತ್ತಿದ್ದವು. ಎದುರಿನ ವಸ್ತುಗಳು ಸ್ಪಷ್ಟವಾಗಿ ಕಾಣುವಷ್ಟು ಬೆಳಕಾಗುತ್ತಿದ್ದಂತೆ ಮರ ಇಳಿದು, ಹುಲಿಯ ಚರ್ಮವನ್ನು ಬೆನ್ನಿಗೇರಿಸಿಕೊಂಡು ದಲ್ಕಾನಿಯಾದತ್ತ ನಡೆದೆ.

ಹಸಿ ಚರ್ಮವನ್ನು ನಾನೆಂದೂ ತೂಕ ಮಾಡಿದವನಲ್ಲ. ಇಂದು ತಲೆ, ಪಂಜಗಳ ಸಹಿತವಾದ ಈ ಚರ್ಮವನ್ನು ಹೊತ್ತುಕೊಂಡು ಹೋಗುವಾಗ ಸುಮಾರು ನಲವತ್ತು ಪೌಂಡುಗಳಷ್ಟಿರಬೇಕೆಂದು ಅಂದಾಜು ಮಾಡಿದೆ. ಆದರೆ ನಾನು ಹದಿನೈದು ಮೈಲಿ ನಡೆದು ಕ್ಯಾಂಪಿಗೆ ಬಂದು ತೂಕ ಮಾಡಿದರೆ ಅದರ ತೂಕ ಇನ್ನೂರು ಪೌಂಡುಗಳಷ್ಟಾಗಿತ್ತು.

ಹಳ್ಳಿಯ ಮಧ್ಯಭಾಗದಲ್ಲಿ ಹಸಿರು ಬಣ್ಣದ ಬಳಪದ ಕಲ್ಲಿನ ಚಪ್ಪಡಿಗಳನ್ನು ಹಾಸಲಾಗಿತ್ತು. ಇದರ ಇಕ್ಕೆಲಗಳಲ್ಲಿ ಹತ್ತು ಹನ್ನೆರಡು ಮನೆಗಳಿದ್ದವು. ಈ ಚಪ್ಪಡಿಗಳ ಮೇಲೆ ಇಡೀ ಹಳ್ಳಿಯ ಜನ ನಮ್ಮವರೊಂದಿಗೆ ಕೂತು ಗಂಭೀರ ಸಮಾಲೋಚನೆಯಲ್ಲಿ ತೊಡಗಿದ್ದರು. ಬೀದಿಯಲ್ಲಿ ರಕ್ತಸಿಕ್ತವಾದ ಬಟ್ಟೆಗಳೊಂದಿಗೆ ಹುಲಿ ಚರ್ಮವನ್ನು ಹೊತ್ತು ಬರುತ್ತಿದ್ದ ನನ್ನನ್ನು ಯಾರೂ ಗಮನಿಸಲಿಲ್ಲ, ಸ್ವಾಗತಿಸಲೂ ಇಲ್ಲ. ನಾನು ಅವರ ಸಭೆಯ ಮಧ್ಯಕ್ಕೆ ಬಂದಾಗ ಅವರೆಲ್ಲಾ ಸ್ತಂಭೀಭೂತರಾದರು. ಆ ಕ್ಷಣದ ಅವರ ದಿಗ್ಭ್ರಾಂತ ನೋಟಗಳನ್ನು ನನ್ನಲ್ಲಿ ನೆನಪಿನ ಶಕ್ತಿ ಇರುವವರೆಗೂ ನಾನು ಮರೆಯಲಾಗುವುದಿಲ್ಲ.

ನಾನು ನನ್ನ ಟೆಂಟನ್ನು ಹಳ್ಳಿಯಿಂದ ಇನ್ನೂರು ಗಜ ದೂರದಲ್ಲಿದ್ದ ಬೆಟ್ಟದ ನೆತ್ತಿಯ ಮೇಲೆ ಹೂಡಿದೆ. ಟೀ ಹೊತ್ತಿಗೆ ಇದೆಲ್ಲಾ ಮುಗಿದಿತ್ತು. ಹಾಗಾಗಿ ನಮ್ಮ ಟೀ ಪಾರ್ಟಿ ದೊಡ್ಡದಾಗಿತ್ತು. ಟೀ ಕುಡಿಯುತ್ತಿದ್ದಾಗ ಅವರ ದಿಗ್ಭ್ರಾಂತ ನೋಟಗಳ ಹಿನ್ನೆಲೆಯ ವಿವರಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತಾ ಹೋದವು. ನನ್ನ ದೀರ್ಘ ಗೈರುಹಾಜರಿ ಹಳ್ಳಿಯಲ್ಲಿ ವಿಚಿತ್ರ ವಾಗ್ವಾದಗಳಿಗೆ ನಿಮಿತ್ತವಾಗಿದೆ. ಮೂರು ದಿನಗಳ ನನ್ನ ನಾಪತ್ತೆಯಿಂದಾಗಿ ಇಡೀ ಹಳ್ಳಿ ತಳಮಳಕ್ಕೀಡಾಗಿದೆ. ನನ್ನನ್ನು ನರಭಕ್ಷಕಿ ಬಲಿತೆಗೆದುಕೊಂಡಿದ್ದಾಳೆ ಎಂಬ ಖಚಿತ ತೀರ್ಮಾನಕ್ಕೆ ಬಂದಿದೆ. ಆದರೆ ಕಳೆದ ಹತ್ತಾರು ವರ್ಷಗಳಿಂದ ನನ್ನ ಜೊತೆಗಿದ್ದ, ಇಂಥ ಹಲವು ದುಸ್ಸಾಹಸದ ಯಾತ್ರೆಗಳಲ್ಲಿ ಭಾಗವಹಿಸಿ ಅನುಭವವಿದ್ದ ನನ್ನ ಸಹಾಯಕರು ಯಾವ ಕ್ಷಣದಲ್ಲಿಯಾದರೂ ಹಿಂತಿರುಗಬಹುದಾದ ನನಗಾಗಿ ಹಗಲೂ-ರಾತ್ರಿ ಟೀ ಕಾಯಿಸಲು ನೀರು ಕುದಿಸಿಕೊಂಡು ಮೂರೂದಿನ ಕಾಯುತ್ತಾ ಕುಳಿತಿದ್ದಾರೆ. ಅವರು ಹಳ್ಳಿಗರ ಮಾತುಗಳನ್ನು ಲಕ್ಷ್ಯಕ್ಕೇ ತಗೆದುಕೊಂಡಿಲ್ಲ, ಇದರಿಂದ ಮತ್ತಷ್ಟು ವಿಚಲಿತನಾದ ಹಳ್ಳಿಯ ಮುಖ್ಯಸ್ಥ ಇಂದು ಮುಂಜಾನೆ ನಾನು ಕಾಣೆಯಾಗಿರುವ ವರದಿಯನ್ನು ಸುತ್ತಮುತ್ತಲ ಹಳ್ಳಿಗಳಿಗೂ ಹಾಗೂ ಆಲ್ಮೋರಾ ಮತ್ತು ನೈನಿತಾಲ್‌ಗಳ ಜಿಲ್ಲಾ ಮುಖ್ಯಸ್ಥರಿಗೆ ರವಾನಿಸಬೇಕೆಂದು ಪಟ್ಟು ಹಿಡಿದಿದ್ದಾನೆ. ನಮ್ಮವರು ಇದನ್ನು ನಿರಾಕರಿಸಿದ್ದಾರೆ.

ನನಗೆ ಈ ಸಂಗತಿಗಳಿಗಿಂತ ತಕ್ಷಣ ಒಂದು ಬಿಸಿನೀರಿನ ಸ್ನಾನದ ಅಗತ್ಯವಿತ್ತು, ಯಾರು ಏನಾದರೂ ಅಂದುಕೊಳ್ಳಲಿ ಎಂದು ಬಯಸಿಸಲ್ಲೇ ನಿಂತು ಮನಸದಣಿಯೆ ಸ್ನಾನ ಮಾಡಿದೆ. ಇದು ಮುಗಿದ ತಕ್ಷಣ ಮೂರೂದಿನದ ಪಾಕವನ್ನು ಸೇರಿಸಿ ಊಟ ಮಾಡಿದೆ. ಊಟಮಾಡಿದ ಕೂಡಲೇ ಗುಡಾರ ಹೊಕ್ಕು, ಹಾಸಿಗೆಯಲ್ಲಿ ಒರಗಿದೆ. ನನಗಷ್ಟೇ ಜ್ಞಾಪಕ. ಮತ್ತೆ ಎಚ್ಚರವಾದಾಗ ಮಿಂಚುಗುಡುಗುಗಳ ದಾಳಿ ಆರಂಭವಾಗಿತ್ತು, ಹಿಂದೆಯೇ ಬಿರುಗಾಳಿ ಎದ್ದಿತು. ಅದರ ರಭಸಕ್ಕೆ ನನ್ನ ಗುಡಾರ ಥರಗುಟ್ಟತೊಡಗಿತು. ಉದ್ದನೆಯ ಗಡಾರಿಗಳನ್ನು ಹೊಡೆದು ಕಟ್ಟಿದ್ದರೂ ಗುಡಾರ ಭಯಜನಕವಾಗಿ ತಲ್ಲಣಿಸುತ್ತಿತ್ತು. ಇರುವ ಹಗ್ಗಗಳನ್ನೆಲ್ಲಾ ತಂದು ಗುಡಾರದ ಮೇಲೆ ಅಡ್ಡಡ್ಡ-ಉದ್ದುದ್ದ ಹಾಕಿ ಬಿಗಿದರು. ಮಳೆ ಆರ್ಭಟಿಸಿ ಹೊಡೆಯುತ್ತಿತ್ತು, ಏನೇ ಹಗ್ಗ ಹಾಕಿದ್ದರೂ ನನ್ನ ಗುಡಾರದ ಬಟ್ಟೆ ಹಗ್ಗಗಳ ಉದ್ದಕ್ಕೆ ಸಿಗಿದುಕೊಂಡು ಹೋಗುತ್ತಿತ್ತು, ಒಳಗಿದ್ದ ನನ್ನ ವಸ್ತುಗಳೆಲ್ಲಾ ನೆಂದುಹೋದವು. ಹೊರಗಿನಿಂದ ಹರಿದುಬಂದು ನೀರು ನನ್ನ ಗುಡಾರದ ಒಳಗೆ ಒಂದು ಕಾಲುವೆಯನ್ನು ಸೃಷ್ಟಿಸಿತು. ನಾನು ನನ್ನ ಕ್ಯಾಂಪ್‌ಬೆಡ್ಡನ್ನು ಮಾತ್ರ ನೆನೆಯದಂತೆ ನೋಡಿಕೊಂಡಿದ್ದೆ. ರಾತ್ರಿ ಸುಮಾರು ಹತ್ತು ಗಂಟೆಯ ಹೊತ್ತಿಗೆ ಗಾಳಿ ಮಳೆಗಳ ಆರ್ಭಟ ಕಡಿಮೆಯಾಯಿತು. ನನ್ನ ಜನರಿಗೆ ಹಳ್ಳಿಗರು ಒಂದು ಭದ್ರವಾದ ಬಾಗಿಲಿದ್ದ ಮನೆಯನ್ನು ಬಿಟ್ಟುಕೊಟ್ಟರು. ಅವರು ಅದರಲ್ಲಿ ತೂರಿಕೊಂಡರು. ನಾನು ಲೋಡ್ ಮಾಡಿದ ಬಂದೂಕವನ್ನು ಪಕ್ಕದಲ್ಲಿಟ್ಟುಕೊಂಡು ನಿದ್ದೆ ಹೋದವನು ಮತ್ತೆ ಹನ್ನೆರಡು ಗಂಟೆಗಳ ಕಾಲ ಮೇಲೇಳಲಿಲ್ಲ.

ಮರುದಿನ ಪೂರ್ತಿ ನನಗೆ ನನ್ನ ಬಿಡಾರ, ಹಾಸಿಗೆ ಒಣಗಿಸುವುದು ಮತ್ತು ಚರ್ಮದ ಸಂಸ್ಕರಣಾ ವಿಧಿಗಳನ್ನು ಮುಗಿಸುವ ಕೆಲಸ ಬಿತ್ತು. ನಾನು ಚರ್ಮವನ್ನು ಹದ ಹಾಕುವಾಗ ಇಡೀ ಹಳ್ಳಿಯ ಜನ ನನ್ನ ಸುತ್ತ ಇದ್ದರು. ಎಲ್ಲರೂ ಅಂದು ಕೆಲಸಗಳಿಗೆ ವಿರಾಮ ಘೋಷಿಸಿ ಬಿಟ್ಟಿದ್ದರು. ನಾನು ನನ್ನ ಕೆಲಸ ಮಾಡುತ್ತಲೇ ನಡೆದದ್ದನ್ನೆಲ್ಲಾ ಹೇಳುತ್ತಿದ್ದೆ. ಹಾಗೇ ಅವರು ಅದಕ್ಕೆ ಅನುರೂಪವಾದ ಒಂದಷ್ಟು ಘಟನೆಗಳನ್ನು ಹೇಳುತ್ತಿದ್ದರು. ಅಲ್ಲಿದ್ದ ಪ್ರತಿಯೊಬ್ಬರೂ ತಮ್ಮ ಒಬ್ಬರಲ್ಲೊಬ್ಬ ಸಂಬಂಧಿಕರನ್ನು ಕಳೆದುಕೊಂಡಿದ್ದರು. ಹಾಗೂ ತಮ್ಮ ಮೈಮೇಲೆ ಹುಲಿಯ ಪಂಜ-ಕೋರೆಗಳಿಂದಾದ ಗಾಯಗಳನ್ನು ಹೊತ್ತಿದ್ದರು. ಹೊಸದರಲ್ಲಿ ಅವು ಕೊಳೆತು ವ್ರಣಗಳಾಗಿ ಪಡಬಾರದ ಯಾತನೆ ಪಟ್ಟಿದ್ದರು. ಈಗಲೂ ಆ ಗುರುತುಗಳು ಅವರ ಯಾತನೆಯ ಸಂಕೇತಗಳಾಗಿ, ಅಚ್ಚೊತ್ತಿದಂತೆ ದೇಹದ ಭಾಗವಾಗಿ ಕುಳಿತಿದ್ದವು.

ನಾನು ಈ ನರಭಕ್ಷಕಿಯನ್ನು ಹೊಡೆಯಲಾಗದೇ ಹೋದುದಕ್ಕಾಗಿ ಹಳ್ಳಿಗರ ಕ್ಷಮೆ ಕೇಳಿದೆ. ಅದನ್ನು ಅವರು ಒಪ್ಪಲಿಲ್ಲ. "ಕೆಲವು ತಿಂಗಳುಗಳ ಮುಂಚೆ ಈ ಮಾತು ಹೇಳಿದ್ದರೆ ಒಪ್ಪುತ್ತಿದ್ದೆವು. ಆದರೆ ಇತ್ತೀಚಿನ ದಿನಗಳಲ್ಲಿ ಈ ಹಳ್ಳಿಗರ ರಕ್ಷಣಾ ತಂಡ ಹುಲಿ ಹೊತ್ತೊಯ್ದವರನ್ನು ಹುಡುಕಲು ಹೋದಾಗ ಅಲ್ಲಿ ಎರಡು ಹುಲಿಗಳನ್ನು ಕಂಡಿದೆ. ಇಲ್ಲಿಗೆ ಹದಿನೈದು ದಿನಗಳ ಹಿಂದೆ ಗಂಡ ಹೆಂಡತಿ ಇಬ್ಬರನ್ನೂ ಒಮ್ಮೆಲೇ ನರಭಕ್ಷಕ ಎಳೆದುಕೊಂಡು ಹೋಗಿತ್ತು. ಹಾಗೆ ಮಾಡಲು ಒಂದು ಹುಲಿಯಿಂದ ಸಾಧ್ಯವೇ ಇಲ್ಲ. ಈ ಎರಡೂ ಸೇರಿಯೇ ಅದನ್ನು ಮಾಡಿವೆ. ಇದೇನು ಸಾಚಾ ಅಲ್ಲ, ಇದು ಈಗಾಗಲೇ ದಾರಿತಪ್ಪಿತ್ತು." ಎಂದರು.

ನಾನು ಪರ್ವತದ ನೆತ್ತಿಯಲ್ಲಿದ್ದ ಚಾಚನಲ್ಲಿ ಬಿಡಾರ ಹೂಡಿದ್ದೆ. ಇಲ್ಲಿಂದ ಇಡೀ ಪರ್ವತಸ್ತೋಮದ ವಿಹಂಗಮ ನೋಟ ಸಿಗುತ್ತಿತ್ತು. ನನ್ನ ಬಿಡಾರದ ಕಡೆಯಿಂದ ಆರಂಭವಾಗುತ್ತಿದ್ದ ನಾಂದೋರ್ ನದಿ ಕಣಿವೆಯು ಸುಮಾರು ಒಂಭತ್ತು ಸಾವಿರ ಅಡಿಗಳಷ್ಟು ಎತ್ತರಕ್ಕೆ ನಿಂತು ಕೃಷಿಗೆ ಪಳಗುವುದನ್ನು ನಿರಾಕರಿಸಿತ್ತು. ಅಂದು ಸಂಜೆ ನಾನು ಪಕ್ಕದಲ್ಲಿ ಮೆಟ್ಟಲೋಪಾದಿಯಲ್ಲಿದ್ದ ಗದ್ದೆಯ ಬದುವಿನ ಮೇಲೆ ಕುಳಿತು ನನ್ನ ಬೈನಾಕ್ಯುಲರ್‌ನಿಂದ ಕಣಿವೆಯನ್ನು ತಡಕುತ್ತಿದ್ದೆ ನನ್ನ ಪಕ್ಕದಲ್ಲಿ ಸರ್ಕಾರ ಕೊಟ್ಟಿದ್ದ ಭೂಪಟವೂ ಇತ್ತು. ಹಳ್ಳಿಗರು, ನಿರ್ದಿಷ್ಟವಾಗಿ ಕಳೆದ ಮೂರು ವರ್ಷಗಳಲ್ಲಿ ಇದೊಂದೇ ಕಣಿವೆಯಲ್ಲಿ ಇಪ್ಪತ್ತು ಜನರು ಬಲಿಯಾದ ಜಾಗಗಳನ್ನು ತೋರಿಸುತ್ತಿದ್ದರು. ಈ ಇಪ್ಪತ್ತು ಬಲಿಗಳು ಕನಿಷ್ಠ ನಲವತ್ತು ಚದರ ಮೈಲಿಗಳ ವಿಸ್ತಾರದಲ್ಲಿ ಹರಡಿಹೋಗಿದ್ದವು. ಇಲ್ಲಿನ ಕಾಡು ಪ್ರದೇಶ ದನಗಳು ಮೇಯಲು ಮುಕ್ತವಾಗಿತ್ತು, ಎಲ್ಲೆಲ್ಲಿಂದಲೋ ಅಸಂಖ್ಯಾತ ದಾರಿಗಳು ಈ ಹುಲ್ಲುಗಾವಲುಗಳನ್ನು ಸಂಪರ್ಕಿಸುತ್ತಿದ್ದವು. ನಾನು ಈ ಕಾಡು ದಾರಿಗಳ ಅಂಚಿನಲ್ಲಿ ಕೋಣಗಳನ್ನು ಕಟ್ಟುವುದೆಂದು ನಿರ್ಧರಿಸಿದೆ.

ಮುಂದಿನ ಹತ್ತು ದಿನ ಹುಲಿಯ ಬಗ್ಗೆ ಯಾವುದೇ ಸುದ್ದಿ ಸಮಾಚಾರಗಳಿರಲಿಲ್ಲ. ನಾನು ಕೋಣಗಳನ್ನು ಕಾಯುತ್ತಾ ದಿನಗಳನ್ನು ಕಳೆದೆ. ಬೆಳಿಗ್ಗೆ ಹೊತ್ತು ಸುತ್ತಮುತ್ತಲ ಕಣಿವೆಯನ್ನು ಇಂಚಿಂಚಾಗಿ ತಡಕಾಡುವುದು, ಸಂಜೆಯಾಗುತ್ತಿದ್ದಂತೆ ಕೋಣಗಳ ಹತ್ತಿರ ಗೊತ್ತು ಕೂರುವುದು ಮಾಡುತ್ತಿದ್ದೆ. ಹನ್ನೊಂದನೆಯ ದಿನ ಹಸುವೊಂದನ್ನು ಹಿಡಿದ ಸುದ್ದಿ ನನಗೆ ತಲುಪಿತು. ಇದರಿಂದ ನಿಜಕ್ಕೂ ನಾನು ಉತ್ಸಾಹಿತನಾದೆ. ನನ್ನ ಬಿಡಾರದ ಮೇಲ್ಭಾಗದ ಕಮರಿಯ ಬಳಿ ಇದು ಸಂಭವಿಸಿತ್ತು. ನಾನು ಅದನ್ನು ತನಿಖೆಮಾಡಲು ಹೋದಾಗ ಸಮಾಧಾನವಾಯಿತು. ಅದು ಹುಲಿಯ ಕೆಲಸವಾಗಿರಲಿಲ್ಲ. ಯಾವುದೋ ಬೀಡಾಡಿ ಚಿರತೆಯೊಂದು ಅದನ್ನು ಕೊಂದಿತ್ತು. ಆ ಚಿರತೆಯ ಹೆಜ್ಜೆ ಗುರುತುಗಳನ್ನು ನಾನು ಈ ನಡುವೆ ಅನೇಕ ಬಾರಿ ನೋಡಿದ್ದೆ. ಹಳ್ಳಿಗರು "ಈ ಚಿರತೆ ಅನೇಕ ವರ್ಷಗಳಿಂದ ಹೀಗೆ ನಮ್ಮ ಒಳ್ಳೊಳ್ಳೆಯ ರಾಸುಗಳನ್ನು ಹಿಡಿದು ತಿಂದು, ನಮಗೆ ಹಿಂಸೆ ಕೊಡುತ್ತಿದೆ" ಎಂದು ದೂರು ಹೇಳಿದರು. ಅವರ ಮಾತಿನಲ್ಲಿದ್ದ ಆಕ್ರೋಶ ನೋಡಿದರೆ ಆ ಚಿರತೆ ಇವರಿಗೆ ಸರಿಯಾಗೇ ಕಾಟ ಕೊಟ್ಟಂತಿತ್ತು. ಸರಿ, ರಾತ್ರಿಗೆ ನಾನು ಹಸುವಿನ ಕಳೇಬರದ ಮೇಲೆ ಕಾವಲಿಗೆ ಕೂರುತ್ತೇನೆಂದು ಹೇಳಿದೆ. ಸಂಜೆಯ ಹೊತ್ತಿಗೆ ಹಸುವಿನಿಂದ ಸ್ವಲ್ಪ ದೂರದ ದಿಬ್ಬದಲ್ಲಿದ್ದ ಗೂಡಿನಂಥ ಜಾಗದಲ್ಲಿ ಅವಿತು ಕುಳಿತೆ. ಸ್ವಲ್ಪ ಹೊತ್ತಿನಲ್ಲಿಯೇ ಕಣಿವೆಯ ತಗ್ಗಿನ ಕಡೆಯಿಂದ ಚಿರತೆ ಬರುತ್ತಿರುವುದು ಕಾಣಿಸಿತು. ಬಂದೂಕವನ್ನೆತ್ತಿ ಅದು ಗುರಿಯ ಸರಹದ್ದಿಗೆ ಬರುತ್ತಿದ್ದಂತೆ ಗುರಿಕಟ್ಟಿದೆ; ಇನ್ನೇನು ಬೇಟೆ ಒಂದೆರಡು ಹೆಜ್ಜೆ ಮುಂದೆ ಬರಬೇಕು... ನಾನು ಟ್ರಿಗರ್ ಒತ್ತಬೇಕು....! ಅಷ್ಟರಲ್ಲಿ ಹಳ್ಳಿಯ ಕಡೆಯಿಂದ ಯಾರೋ ಜೀವಹೋಗುವಂತೆ ನನ್ನೇ ಕೂಗುತ್ತಿರುವುದು ಕೇಳಿಸಿತು!!

ಅದೇನಾಗಿರಲಿ, ಹಳ್ಳಿಯ ಜನ ನನ್ನನ್ನು ಕೂಗಲು ಇರುವುದು ಒಂದೇ ಕಾರಣ! ತಕ್ಷಣ ನಾನು ಆ ಗುಂಡಿಯನ್ನು ಬಿಟ್ಟೆದ್ದು ಧ್ವನಿ ಬಂದತ್ತ ಓಡಿದೆ. ಅಷ್ಟು ಹತ್ತಿರಕ್ಕೆ ಬಂದಿದ್ದ ಚಿರತೆ ಈ ನನ್ನ ಹುಚ್ಚು ಓಟಕ್ಕೆ ದಿಗ್ಭ್ರಾಂತವಾಗಿ, ದಿಕ್ಕುತೋಚದೆ ನೆಲಕ್ಕಂಟಿದಂತೆ ಮಾಗಿ ಬಿಟ್ಟಿತು. ಅದನ್ನು ಲೆಕ್ಕಿಸದೆ ಓಡುತ್ತಿದ್ದ ನನಗೆ ಥಟ್ಟಾಗಿ ಅಡ್ಡಬಂದ ತೋಳವೊಂದು ಕಾಲಿಗೆ ತೊಡರಿ ಕ್ಯಾಪಾಲಾಗಿ ಓಡಿತು. ನಾನು ಅದೇ ವೇಗದಲ್ಲಿ ಓಡಿ ಕಣಿವೆಯ ನೆತ್ತಿಗೆ ಬಂದೆ. ನನ್ನನ್ನು ಇನ್ನೂ ಕೂಗುತ್ತಲೇ ಇದ್ದವನಿಗೆ ಅಲ್ಲಿಂದಲೇ ಕೂಗಿ ನಾನು ಬರುತ್ತಿದ್ದೇನೆಂದು ಉಸುರಿ, ಅದೇ ವೇಗದಲ್ಲಿ ಓಡಿ ಅವನಿಗೆ ಎದುರಾದೆ.

ಬೆಟ್ಟದ ಕೆಳಗಿನಿಂದ ಓಡಿಬಂದಿದ್ದ ಅವನು ಪರ್ವತಗಳೇ ಹಾರಿಹೋಗುವಂತೆ ಉಸಿರಾಡುತ್ತಿದ್ದ. ನಿಧಾನವಾಗಿ. ಹಾರುತ್ತಿದ್ದ ಉಸಿರನ್ನು ಹಿಡಿತಕ್ಕೆ ತಗೊಂಡು "ಇದೀಗ ತಾನೆ; ಈ ಹಳ್ಳಿಯಿಂದ ಅರ್ಧ ಮೈಲಿಗಳ ಕೆಳಗೆ ನರಭಕ್ಷಕಿ ಒಬ್ಬ ಹೆಂಗಸನ್ನು ಹಿಡಿದು ಬಿಟ್ಟಿದೆ ಎಂದು ಹೇಳಿದ. ಮೊದಲ ಸೂಚನೆ ಸಿಗುತ್ತಿದ್ದಂತೆ ಮಾತಾಡಲು ಆರಂಭಿಸಿದ. ನಾನು ಅವನ ಮಾತು ಮುಗಿಯುವುದರೊಳಗೆ ಹೆ... ತಲುಪಿದ್ದೆ. ಅಲ್ಲಿ ಸುತ್ತಲೂ ಜನ ಜಮಾಯಿಸಿದ್ದರು. ಆ...

ಭೀತ ಜನಜಂಗುಳಿಗೆ ನಾನು ಅಲ್ಲಿಗೆ ಬಂದಿದ್ದು ತಿಳಿಯಲೇ ಇಲ್ಲ. ನಾನು ಹಿಂದೆ ನಿಂತು ಕುತ್ತಿಗೆ ಎತ್ತರಿಸಿ ನೋಡಿದೆ... ಅವರ ಮಧ್ಯದಲ್ಲಿ ಗೋಡೆಗೊರಗಿ ರಕ್ತದಲ್ಲಿ ಅದ್ದಿ ತೆಗೆದಂತೆ ಕಾಣುತ್ತಿದ್ದ ಹರೆಯದ ಹೆಣ್ಣುಮಗಳೊಬ್ಬಳು ಈ ಲೋಕದ ಪರಿವೆ ಇಲ್ಲದಂತೆ ಕುಳಿತಿದ್ದಳು. ತಲೆಯನ್ನು ಹಿಂದಕ್ಕೆ ಹಾಕಿ, ಕೈಗಳನ್ನು ನೆಲದಮೇಲೆ ಬಸಾಡಿದಂತೆ ಕುಳಿತಿದ್ದ ಈ ಹೆಣ್ಣು ಮಗಳ ಮೇಲರ್ಧದ ಬಟ್ಟೆಗಳೆಲ್ಲಾ ಹರಿದು ಚಿಂದಿಯಾಗಿದ್ದವು. ಏರಿಳಿಯುತ್ತಿದ್ದ ಅವಳ ಎದೆಯನ್ನು ಬಿಟ್ಟರೆ ಅವಳು ಜೀವಂತವಿರುವುದಕ್ಕೆ ಇನ್ನೊಂದು ಸಾಕ್ಷಿ ಇರಲಿಲ್ಲ. ಅವಳ ಮುಖ.... ಕುತ್ತಿಗೆಯಿಂದ ಇಳಿದ ರಕ್ತ ಅವಳ ಸ್ತನಗಳ ಮೇಲಿಂದ ಸೋರಿ.... ಅದರಿಂದ ಕೆಳಗೆ ಹೆಪ್ಪುಗಟ್ಟಿದ ರಕ್ತ ರಾಶಿಯಲ್ಲಿ ಲೀನವಾಗುತ್ತಿತ್ತು.

ನಾನು ಇಲ್ಲಿಗೆ ಬಂದಿದ್ದು ಅರಿವಾಗುತ್ತಿದ್ದಂತೆ ಎಲ್ಲರೂ ನನಗೆ ದಾರಿ ಮಾಡಿಕೊಟ್ಟರು. ನಾನು ಹತ್ತಿರ ಹೋಗಿ ಅವಳ ಗಾಯಗಳನ್ನು ಪರೀಕ್ಷಿಸುತ್ತಿದ್ದರೆ..... ಇತ್ತ ಎಲ್ಲರೂ ಒಟ್ಟಾಗಿ ಆಗಿದ್ದೇನೆಂದು ಹೇಳುತ್ತಿದ್ದರು. ಹುಲಿಯ ಈವರೆಗಿನ ದಾಳಿಗಳಿಗೆ ಹೋಲಿಸಿದರೆ ಇದು ಬಹುಪಾಲು ಬಯಲಿನಲ್ಲಿ ಸಂಭವಿಸಿತ್ತು. ಆಗ ಸುತ್ತಮುತ್ತ ಈ ಹತದೃಷ್ಟೆಯ ಗಂಡನೊಂದಿಗೆ ಇನ್ನೂ ಅನೇಕರಿದ್ದರು. ಯಾವಾಗ ಹುಲಿ ಇವಳಿಗೆ ಬಾಯಿಹಾಕಿತೋ.... ಎಲ್ಲರೂ ತಟ್ಟನೆ ಚೀರಿ, ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಇವರೆಲ್ಲರ ಸಾಮೂಹಿಕ ಚೀರಿನ ಸದ್ದಿಗೆ ಹುಲಿಯೂ ಆ ಹುಡುಗಿಯನ್ನು ಅಲ್ಲೇ ಬಿಟ್ಟು ಕಾಡಿನತ್ತ ಓಡಿ ಹೋಗಿದೆ. ಇತ್ತ ಜನ ಹಳ್ಳಿಯತ್ತ ಓಡಿಹೋಗಿದ್ದಾರೆ. ಈ ಹುಡುಗಿಯೊಬ್ಬಳೇ ಹೊಲದ ನಡುವೆ ಬಿದ್ದಿದ್ದಾಳೆ. ಈ ಜನ ತಕ್ಷಣ ನನಗೆ ಮಾಹಿತಿ ರವಾನಿಸಲು ಆಳನ್ನು ಓಡಿಸಿದ್ದಾರೆ. ಅಷ್ಟು ಹೊತ್ತಿಗೆ ಆ ಹುಡುಗಿಗೆ ಪ್ರಜ್ಞೆ ಮರುಗಿದೆ. ಅವಳು ಅಲ್ಲಿಂದ ಎದ್ದು ಕನಸಿನಲ್ಲಿ ಬಂದವಳಂತೆ ಹಳ್ಳಿಗೆ ಹಿಂತಿರುಗಿದ್ದಾಳೆ. ಹಳ್ಳಿಗರೆಲ್ಲಾ ಬೆಚ್ಚಿಬಿದ್ದಾರೆ, ಅವಳ ಸುತ್ತಾ ಘೇರಾಯಿಸಿ ನನ್ನೊಂದಿಗೆ ಹೇಳುತ್ತಿದ್ದಾರೆ.... ಹೇಗಿದ್ದರೂ ಇನ್ನು ಒಂದೆರಡು ಕ್ಷಣಗಳಲ್ಲಿ ಈಕೆ ಸಾಯುತ್ತಾಳೆ.... ಇವಳನ್ನು ಹಾಗೇ ಹೊತ್ತೊಯ್ದು ಹುಲಿ ದಾಳಿ ಮಾಡಿದ ಜಾಗದಲ್ಲಿ ಹಾಕಿದರೆ....! ಇವಳ ಹೆಣದ ಮೇಲೆ ರಾತ್ರಿ ಹುಲಿಗಾಗಿ ನೀವು ಗೊತ್ತು ಕೂರಬಹುದು" ಎಂದು.

ಇವರ ಮಾತುಗಳು ನನ್ನಂತೆಯೇ ಆ ಹುಡುಗಿಯ ಶ್ರವಣ ಶಕ್ತಿಗೂ ದಕ್ಕಿರಬೇಕು ಎಂದು ನಾನು ಬಲವಾಗಿ ನಂಬಿದ್ದೇನೆ!! ಏಕೆಂದರೆ, ಆ ನಂತರ ಆಕೆಯ ಸ್ನಿಗ್ಧ ಕಣ್ಣುಗಳು ತದೇಕಚಿತ್ತದಿಂದ ನನ್ನನ್ನೇ ನೋಡುತ್ತಿದ್ದವು. ನನ್ನ ಚಲನವಲನವನ್ನು ತದೇಕಚಿತ್ತದಿಂದ ಆರ್ದ್ರವಾಗಿ ಹಿಂಬಾಲಿಸುತ್ತಿದ್ದವು.... ಗಾಯಗೊಂಡ ಅಸಹಾಯಕ ಪ್ರಾಣಿಯಂತೆ. ಇದು ನನ್ನ ಸಹನ ಶಕ್ತಿಯನ್ನು ಮೀರಿದ್ದಾಗಿತ್ತು. ಕೂಡಲೇ ನಾನು ಈ ಹುಡುಗಿಗೆ ಉಸಿರಾಡಲು ಜಾಗ ಬಿಡಿ... ಎಲ್ಲಾ ಇಲ್ಲಿಂದ ಹೋಗಿ... ಎಂದು ಎಲ್ಲರನ್ನೂ ದೂರಕ್ಕೆ ಕಳುಹಿಸಿದೆ. ಹುಲಿಯನ್ನು ಹೊಡೆಯಲು ಅವರು ಸೂಚಿಸಿದ್ದ ಮಾರ್ಗ ಮನುಷ್ಯ ಮಾತ್ರ ಆಲೋಚನೆಯಂತೆ ನನಗೆ ಕಾಣಲಿಲ್ಲ. ಅಷ್ಟು ಹೊತ್ತಿಗೆ ನನ್ನ ಸೂಚನೆಯನ್ನು ಅನುಸರಿಸಿ ನಮ್ಮವರು ಬಿಸಿ ನೀರನ್ನು ತಂದರು. ಆ ಕ್ಷಣದ ಚಿಕಿತ್ಸೆಗೆ ಬೇಕಾದ ಉಪಕರಣಗಳು ನನ್ನ ಬಳಿ ಇರಲಿಲ್ಲ. ಕೂಡಲೇ ನನ್ನ ಅಂಗಿಯನ್ನು ಬಿಚ್ಚಿ; ಹರಿದು, ಅದನ್ನೇ ಬಿಸಿನೀರಿನಲ್ಲಿ ಅದ್ದಿ; ಗಾಯಗಳನ್ನು ಒರೆಸಿ, ಉಳಿದದ್ದನ್ನು ಬ್ಯಾಂಡೇಜಿನಂತೆ ಕಟ್ಟಿದೆ. ಸದ್ಯಕ್ಕೆ ಲಭ್ಯವಿದ್ದ ಬಟ್ಟೆಗಳಲ್ಲಿ ನನ್ನ ಅಂಗಿಯೊಂದೇ ಹೆಚ್ಚು ಸ್ವಚ್ಛವಾದ-ಒಣಗಿದ ಬಟ್ಟೆಯಾಗಿತ್ತು. ಅಷ್ಟು ಹೊತ್ತಿಗೆ ಆ ಹುಡುಗಿ ಹುಚ್ಚು ಹಿಡಿದಂತಾಗಿದ್ದಳು. ಅವಳ ತಲೆಗೂದಲು ರಕ್ತದಲ್ಲಿ ನೆಂದು ಅಂಟಿನಂತಾಗಿಬಿಟ್ಟಿತ್ತು. ಸದ್ಯಕ್ಕೆ ಅದನ್ನು ಕತ್ತರಿಸಿ ಹಾಕುವದೊಂದೇ ನನ್ನ ಮುಂದಿದ್ದ ದಾರಿ. ನಾನು ಒಂದು ಕತ್ತರಿಗಾಗಿ ಹುಡುಕಾಡ ಹತ್ತಿದೆ. ಹಳ್ಳಿಯಲ್ಲಿ ಒಂದು ಕತ್ತರಿ ಇರುವ ವರ್ತಮಾನ ಬಂತು. ಇಲ್ಲೊಬ್ಬ ದರ್ಜಿ ಇದ್ದನಂತೆ, ಅವನು ಸತ್ತು ಬಹಳ ಕಾಲವಾಯಿತಂತೆ. ಆ ಕತ್ತರಿ ನನ್ನ ಕೈಗೆ ಬಂದಾಗ ನಾನು ಬೆಚ್ಚಿಬಿದ್ದೆ. ಅದು ಕತ್ತರಿಸ ಯಾವುದೇ ವಸ್ತುವನ್ನು ಕತ್ತರಿಸಲು ಯೋಗ್ಯವಾಗಿರಲಿಲ್ಲ. ವಿಷಯವೇನೆಂದರೆ: ಆ ದರ್ಜಿಯ ಹೆಂಡತಿ ಆತನ ನಂತರ ಅದನ್ನು ಆಲೂಗಡ್ಡೆ ಅಗೆಯಲು ಬಳಸುತ್ತಿದ್ದಳು. ನನಗೆ ಮತ್ಯಾವ ಹತಾರಗಳೂ ಸಿಗಲಿಲ್ಲ ಹಾಗಾಗಿ ಅವಳ ಕೂದಲನ್ನು ಹಾಗೇ ಬಿಡಬೇಕಾಯಿತು. ಆ ಹುಡುಗಿಗೆ ಅತ್ಯಂತ ಆಳವಾದ ಗಾಯಗಳಾಗಿದ್ದವು. ಹುಲಿಯ ಪಂಜದ ಏಟು ಎಳಿತ ಕಣ್ಣಿನಿಂದ ಆರಂಭವಾಗಿ ಬಲಕ್ಕೆ ಸೀಳಿದು ಹೆಕ್ಕತ್ತಿನವರೆಗೂ ಹೋಗಿತ್ತು. ಇನ್ನೊಂದು ಕಿವಿಯ ಪಕ್ಕದಿಂದ ಆರಂಭಿಸಿ ನೆತ್ತಿಯ ಮೇಲಿಂದ ಹಾಯ್ದು ಹಿಂಗಿವಿಯವರೆಗೆ ಹರಿದಿತ್ತು. ಈ ಎರಡೂ ಅವಳ ತಲೆಯನ್ನು ಆಳವಾಗಿ ಕಾಲುವೆ ತೋಡಿದಂತೆ ಭಾಗಮಾಡಿದ್ದವು. ಈ ಭಯಾನಕ ಸೀಳುಗಳೊಂದಿಗೆ ಎದೆಯ ಬಲಭಾಗದ ಮೊಲೆ ಮಧ್ಯಕ್ಕೆ ಸೀಳಿದಂತೆ ಹರಿದು ಹೋಗಿತ್ತು, ಬಲ ಭುಜ ಕತ್ತುಗಳ ಮೇಲೆ ಆಳವಾದ ಗಾಯಗಳಾಗಿದ್ದವು. ಜೊತೆಗೆ ಅವಳ ಬಲಗೈಯ ಹಿಂಭಾಗ ಸೀಳಿಹೋಗಿತ್ತು, ಅದು ಹುಲಿಯ ದಾಳಿಯ ಹೊತ್ತಿನಲ್ಲಿ ತನ್ನನ್ನು ರಕ್ಷಿಸಿಕೊಳ್ಳಲು ಅಪ್ರಜ್ಞಾಪೂರಕವಾಗಿ ಕೈಯನ್ನು ಹಿಡಿದಾಗ ಆಗಿದ್ದಿರಬಹುದು.

(ಮುಂದುವರೆಯುತ್ತದೆ)

ಹೋದವಾರ ಮಂಗಳೂರಿನಲ್ಲಿ ಕೋಮು ಸೌಹಾರ್ದ ವೇದಿಕೆ ಏರ್ಪಡಿಸಿದ್ದ 'ಮಾಧ್ಯಮ ಮತ್ತು ಕೋಮುವಾದ' ಶಿಬಿರಕ್ಕೆ ಖ್ಯಾತ ಬರಹಗಾರ್ತಿ, ಚಿಂತಕಿ ಅರುಂಧತಿ ರಾಯ್ ಬಂದಿದ್ದರು. ವೇದಿಕೆಯ ಕೆಲಸಗಳನ್ನು ಪ್ರಶಂಸಿಸಿದ ರಾಯ್ ಅವರನ್ನು ಡಾ. ವಾಸು 'ಲಂಕೇಶ್' ವಾರಪತ್ರಿಕೆಗಾಗಿ ಸಂದರ್ಶಿಸಿದರು. ಅದರ ಆಯ್ದ ಭಾಗವನ್ನು ಇಲ್ಲಿ ನೀಡಿದ್ದೇವೆ.



ಮಿಲಿಟರಿ ಪ್ರಭುತ್ವದಲ್ಲಿ ಜನರಿಗೆಲ್ಲಿ ನ್ಯಾಯ?

ಸಂದರ್ಶನ

ಡಾ. ವಾಸು ಎಚ್.ವಿ

● *ನೀವು ಬರಹಗಾರ್ತಿಯಾಗಿದ್ದವರು, ಈಗ ಒಬ್ಬ ಆಕ್ಟಿವಿಸ್ಟ್ ಆಗಿದ್ದೀರಿ, ಇದು ಹೇಗೆ?*

ಈ ರೀತಿಯಾಗಿ ಹೇಳುವುದು, ಇದು ಆಕ್ಟಿವಿಸ್ಟ್‌ನ ಅರ್ಥವನ್ನೂ ಕುಗ್ಗಿಸುತ್ತದೆ. ಬರಹಗಾರರ ಅರ್ಥವನ್ನೂ ಕುಗ್ಗಿಸುತ್ತದೆ. ನಾನು ಆಕ್ಟಿವಿಸ್ಟ್ ಎಂದು ಕರೆಸಿಕೊಳ್ಳಲ್ಪಡುವುದನ್ನು ಒಪ್ಪುವುದಿಲ್ಲ. ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಕೇವಲ ವೃತ್ತಿಪರವಾಗಿ ಅದರಲ್ಲಿ ತೊಡಗಿಕೊಳ್ಳುವವರ ಕೆಲಸ ಮಾತ್ರ ಆಗಿಬಿಟ್ಟರೆ ಹೇಗೆ? ಲಾಯರ್‌ಗಳು, ಡಾಕ್ಟರುಗಳು, ಸಂಗೀತಗಾರರು-ಹೀಗೆ ಎಲ್ಲರೂ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಹಾಗಿಲ್ಲದಿದ್ದರೆ ಅಂಥವರನ್ನೇ ಇನ್ನೊಂದು ಕ್ಯಾಟಗರಿ ಮಾಡಿಬಿಟ್ಟಂತಾಗುತ್ತದೆ ಅಷ್ಟೇ. ಇನ್ನು ಬರಹಗಾರ್ತಿಯಾಗಿ, ನಾನು ಬರೆದ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಸಹ ಬೇರಿನ್ನಾವುದರಷ್ಟೇ ಪೊಲಿಟಿಕಲ್ ಕೂಡಾ ಹೌದು. ನಾನು ಯಾರೋ ಒಬ್ಬ ನಟಿಯಂತೆ, ಒಂದು ಸರಕಿಗೆ -ಕೋಮುವಾದ ವಿರೋಧಿ ಸರಕಿಗೆ- ಜಾಹೀರಾತು ಕೊಡುವವಳಂತೆ ಅಲ್ಲ.

● *ಹಿಂಸೆ ಮತ್ತು ಅಹಿಂಸೆಗಳ ನಡುವಿನ ವಾಗ್ವಾದದಲ್ಲಿ ನಿಮ್ಮನ್ನು ನೀವು ಎಲ್ಲಿ ಗುರುತಿಸಿಕೊಳ್ಳಬಯಸುತ್ತೀರಿ?*

ನೋಡಿ ನನ್ನ ಪ್ರಕಾರ ಇಂದು ನಾವಿರುವುದು ಒಂದು ತುಂಬಾ ಮಹತ್ವದ ಕಾಲಘಟ್ಟ ಹಾಗೂ ಈ ಪ್ರಶ್ನೆಗಳನ್ನು ನಾವು ಚರ್ಚಿಸಲೇಬೇಕಾದ ಸಮಯ. ಇಂದು ಏನಾಗುತ್ತಿದೆಯೆಂದರೆ ಅಹಿಂಸಾತ್ಮಕ ಹೋರಾಟಗಳನ್ನು ನಿರ್ಲಕ್ಷಿಸಿ, ವ್ಯಂಗ್ಯ ಮಾಡಿ ಪಕ್ಕಕ್ಕೆ ತಳ್ಳುವ ಸರ್ಕಾರಗಳೇ ಹಿಂಸೆಗೆ ಕಾರಣವಾಗಿವೆ. ಅಂದರೆ ಇಂದು ನಡೆಯುತ್ತಿರುವ ಹಿಂಸೆಯು ಸರ್ಕಾರಗಳ ನೀತಿಗಳ ಫಲವಾಗಿದೆ.

ವೈಯಕ್ತಿಕವಾಗಿ ನನ್ನ ನಿಲುವು ಹೀಗಿದೆ: ಜನರು ಶಸ್ತ್ರ ಹಿಡಿದು ಹೋರಾಟ ಮಾಡುತ್ತೇವೆಂದು ಹೊರಟರೆ ಆದರಿಂದ ಅವರು ಎದುರಿಸಬೇಕಾಗಿ ಬರುವ ಭಯಾನಕ ದಮನದ ಅರಿವು ನನಗಿದೆ. ಅಂತಹ ದಮನಕ್ಕೊಳಗಾಗದ ನನ್ನಂಥವಳಿಗೆ "ನೀವು ಸಶಸ್ತ್ರ ಹೋರಾಟವನ್ನು ಮಾಡಿ' ಎಂದು ಬೇರೆಯವರಿಗೆ ಹೇಳುವ ಯಾವುದೇ ಹಕ್ಕಿಲ್ಲ. ಅದೇ ರೀತಿ 'ತಾವು ಹೋರಾಡಬೇಕಾದ ದಾರಿಯು ಅದೇ (ಸಶಸ್ತ್ರ ಹೋರಾಟವೇ) ಆಗಿದೆ' ಎಂದು ಅವರು ತೀರ್ಮಾನಿಸಿದರೆ ಅದನ್ನು ಖಂಡಿಸುವ ಹಕ್ಕೂ ನನಗಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ನಿಜಕ್ಕೂ? ಬದುಕಿನ ಬಿಸಿಗೆ ಗುರಿಯಾಗದವರು ಅದರ ಬಗ್ಗೆ ಸರಿಯಾಗಿ ಯೋಚಿಸದೆ ತಮ್ಮ ಅಭಿಪ್ರಾಯಗಳನ್ನು ಬಿಡುಬೀಸಾಗಿ ವ್ಯಕ್ತಪಡಿಸುವುದನ್ನು ಕಂಡರೆ ನನಗೆ ರೇಗುತ್ತದೆ. ಉದಾಹರಣೆಗೆ ನಮ್ಮಲ್ಲಿ 'ಎಂಥದೇ ಸಂದರ್ಭ ಬಂದರೂ ಹಿಂಸೆ (ಹಿಂಸಾತ್ಮಕ ಹೋರಾಟ) ನಡೆಯಬಾರದು' ಎಂದು ಹೇಳುವ ಮಧ್ಯಮ ವರ್ಗದ ಉದಾರವಾದಿಗಳು ಬಹಳಷ್ಟು ಜನರಿದ್ದಾರೆ. ಈ 'ಎಂಥದೇ ಸಂದರ್ಭ ಬಂದರೂ' ಅನ್ನುವುದರ ಅರ್ಥವೇನು? ಅಪಮಾನಕ್ಕೊಳಗಾಗುವುದು, ಒದೆಸಿಕೊಳ್ಳುವುದು, ಜೈಲಿಗೆ ತಳ್ಳಲ್ಪಡುವುದು, ನೀವೇನೂ ಮಾಡದಿದ್ದರೂ ಭಯೋತ್ಪಾದಕ ಎಂದು ಕರೆಸಿಕೊಳ್ಳಬೇಕಾಗಿ ಬರುವುದು. ಹೀಗೆ ಯಾವುದೇ ಬಗೆಯ ಅಪಮಾನ ಮತತು ಹಿಂಸೆಗೆ ಗುರಿಯಾದರೂ ಎಂದಿಗೂ ಹಿಂಸಾತ್ಮಕವಾಗಬಾರದು! ಇದರಿಂದ ಯಾರಿಗೆ ಅನುಕೂಲ? ಸರ್ಕಾರಕಕೆ ಮಾತರ.

● *ಇತರ ದೇಶಗಳಿಗ ಹೋಲಿಸಿದರೆ ಭಾರತದಲ್ಲಿ ಪ್ರಗತಿಪರ ಶಕ್ತಿಗಳೂ ಸಹ ಅಹಿಂಸೆಯನ್ನು ಎಂದಿಗೂ ಬದಲಾಗಬಾರದ ಒಂದು ಪವಿತ್ರವಾದ ತರ್ಕವನ್ನಾಗಿ ಎತ್ತಿ ಹಿಡಿಯುತ್ತವೆಯಲ್ಲ ಏಕೆ?*

ಅದು ಮಹಾತ್ಮರ ಪರಂಪರೆ. ಇಂದು ನೀವೇ ನೋಡಿ, ದಾವೋಸ್‌ನಲ್ಲಿ ಭಾರತ ಸರ್ಕಾರವು ಸತ್ಯಾಗ್ರಹದ ಪ್ರಚಾರ ನಡೆಸಿದೆ. ಅದರರ್ಥ ಅದು (ಸತ್ಯಾಗ್ರಹ) ಅವರಿಗೆ ಚೆನ್ನಾಗಿ ಹೊಂದುತ್ತಿದೆ ಎಂಬುದನ್ನು ನೀವು ತಿಳಿಯಬೇಕು. ಸದ್ಯಕ್ಕೆ ಅದೇ ಅವರ ಅಚ್ಚುಮೆಚ್ಚಿನ ಶಾಂಪೂ ಆಗಿದೆ. ಅವರು ಸ್ವಾತಂತ್ರ್ಯ ಸಂಗ್ರಾಮವನ್ನು ಅತ್ಯಂತ ಶಾಂತಿಯುತವಾಗಿತ್ತೆಂದು ಹೇಳುವರು. ಆದರೆ ದೇಶ ವಿಭಜನೆಯ ಸಂದರ್ಭದಲ್ಲಿ ಒಂದು ದಶಲಕ್ಷ ಜನಕ್ಕೂ ಹೆಚ್ಚು ಜನರನ್ನು ಕೊಲ್ಲಲಾಯಿತು. ಜೊತೆಗೆ ರಾಜಕಾರಣದಲ್ಲಿ ಧರ್ಮವನ್ನು ಬೆರೆಸಿದವರೇ ಗಾಂಧಿ ಎಂಬುದನ್ನು ಬಹಳ ಜನ ಮರೆಯುತ್ತಾರೆ. ಬಹುಶಃ ಗಾಂಧಿ ಅದನ್ನು ತನಗೆ ಬೇಕಾದ ಹಾಗೆ ನಿಯಂತ್ರಿಸಿದರು. ಹಾಗೆಯೇ ತನ್ನದೇ ಆದ ಸತ್ಯಾಗ್ರಹಕ್ಕೆ ತಕ್ಕ ಹಾಗೆ, ತನ್ನದೇ ಆದ ಒಳ್ಳೆಯತನಕ್ಕೆ ತಕ್ಕ ಹಾಗೆ ನಿಯಂತ್ರಿಸಿದರು. ಆದರೆ ಎಲ್ಲರೂ ಅಷ್ಟು ಒಳ್ಳೆಯವರಲ್ಲವಲ್ಲ, ಎಲ್ಲರೂ ಅಷ್ಟೊಂದು ಒಳ್ಳೆಯವರಾಗಬಲ್ಲ ಸಾಮರ್ಥ್ಯವನ್ನೇ ಪಡೆದಿಲ್ಲವಲ್ಲ. ಆ ರೀತಿಯ ಪಯಣವು ಗಾಂಧಿಯವರದ್ದಾಗಿರಬಹುದು; ಆದರೆ ನನ್ನ ಪಯಣ ಆ ರೀತಿಯದ್ದಲ್ಲ. ನನಗೆ ಅಷ್ಟೊಂದು ಒಳ್ಳೆಯವಳಾಗಿರಲು ಅಥವಾ ಸಂತಳಂತಿರಲು ಆಸಕ್ತಿಯಿಲ್ಲ (ನಗು).

ನನಗನ್ನಿಸುವುದು ಪ್ರಪಂಚದಲ್ಲಿ ಇನ್ನೆಲ್ಲೂ ಭಾರತದಷ್ಟು ಮಟ್ಟಿಗೆ ಶ್ರೀಮಂತರು ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಕೇವಲ ಈ ಅಹಿಂಸೆಯ ಕಾರಣದಿಂದ ಮಾತ್ರವಲ್ಲ. ಈ ದೇಶದಲ್ಲಿ ಪ್ರಚಲಿತದಲ್ಲಿರುವ ಮುಂದಿನ ಜನ್ಮದಲ್ಲಿ ಉತ್ತಮ ಸ್ಥಾನ ಪಡೆಯುವವೆಂಬ ನಂಬಿಕೆ, ಇಲ್ಲಿನ ಜಾತಿ ವ್ಯವಸ್ಥೆ ಯಥಾಸ್ಥಿತಿವಾದ ಇತ್ಯಾದಿ ಇತ್ಯಾದಿ ಅಸಂಖ್ಯಾತ ಕಾರಣಗಳಿವೆ. ನಮ್ಮ ಮಧ್ಯಮವರ್ಗವು ಈ ವ್ಯವಸ್ಥೆಯನ್ನು ಬುಡಮೇಲು ಮಾಡುವ ಯಾವುದೇ ಆಗಲಿ ಅಥವಾ ಹಿಂಸೆಯಿಂದಾಗಲೀ ಬಹಳ ಭಯಕ್ಕೊಳಗಾಗುತ್ತದೆ. ಅದರರ್ಥ ನಾನು ಭಯಕ್ಕೊಳಗಾಗುವುದಿಲ್ಲವೆಂದಲ್ಲ. ಆದರೆ ನನಗೆ ಗೊತ್ತಿರುವುದಿಷ್ಟೇ, ಈ ವ್ಯವಸ್ಥೆಯಲ್ಲಿ ನೋವನ್ನು ಅನುಭವಿಸದ ನನಗೆ 'ಎಂಥದೇ ಸಂದರ್ಭ ಬಂದರೂ' ನೀವು ಶಸ್ತ್ರಾಸ್ತ್ರ ಹಿಡಿಯಬಾರದು ಎಂದು ಜನರಿಗೆ ಬೋಧಿಸುವ ಹಕ್ಕಿಲ್ಲ. ಅದು ನನ್ನ ಕೆಲಸವಲ್ಲ. ನನ್ನ ಮಟ್ಟಿಗೆ ಆ ರೀತಿ ಹೇಳುವುದು ಅಪ್ರಾಮಾಣಿಕವಾದುದು.

ಹಾಗೆಯೇ ಶಸ್ತ್ರವನ್ನು ಹಿಡಿಯಿರಿ ಎಂದು ಹೇಳುವುದೂ ಸಹ. ಕಾಡಿನಲ್ಲಿ ಒಬ್ಬ ಗೆರಿಲ್ಲಾ ಆಗಿ ಹೋರಾಡುವುದಕ್ಕೆ ನಾನು ತಯಾರಿಲ್ಲ. ಅದನ್ನು ಒಪ್ಪಿಕೊಳ್ಳುವಷ್ಟು ನಾನು ಪ್ರಾಮಾಣಿಕಳಿದ್ದೇನೆ. ಆದರೆ ಬೇರೆಯವರಿಗೆ ಶಸ್ತ್ರ ಹಿಡಿಯುವುದು ತಪ್ಪು ಎಂದು ಹೇಳಲೂ ಸಹ ನಾನು ಸಿದ್ಧಳಿಲ್ಲ.

● *ಕೆಲವು ಬುದ್ಧಿಜೀವಿಗಳು 'ಭಾರತದ ಪ್ರಜಾಪ್ರಭುತ್ವದ ಹಾರ್ಡ್‌ವೇರ್ ಚೆನ್ನಾಗಿದೆ, ಸಮಸ್ಯೆಯಿರುವುದು ಅದರ ಸಾಫ್ಟ್‌ವೇರ್‌ನಲ್ಲಿ' ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?*

ಇದು ಬಹಳ ಮೇಲ್‌ಸ್ತರದ ಮತ್ತು ಉದಾರವಾದಿ ತಿಳಿವಳಿಕೆಯಷ್ಟೇ. ನೀವು ಪ್ರಬಲರ ದೃಷ್ಟಿಕೋನದಿಂದ ನೋಡಿದರೆ ಎಲ್ಲವೂ ಚೆನ್ನಾಗಿಯೇ ಕಾಣುತ್ತದೆ. ಆದರೆ ನೀವು ತಿಳಿಯಬೇಕಾದ್ದು ನೀವೇನೂ ದೇವರ ಧ್ವನಿಯಲ್ಲ. ನೀವು ಮಾತನಾಡುತ್ತಿರುವುದು ನೀವು ಎಲ್ಲಿ ನಿಂತಿದ್ದೀರೋ ಅಲ್ಲಿಂದ. ಹಾಗಾಗಿಯೇ ಈ ಬುದ್ಧಿಜೀವಿಗಳು ನಿಂತಿರುವ ಜಾಗದಿಂದ ನೋಡಿದರೆ ಎಲ್ಲವೂ 50-50ರ ಥರದಲ್ಲಿ ಕಾಣುತ್ತದೆ. ಒಂದು ವೇಳೆ ನೀವು ಇಲ್ಲಿ ನಿಂತಿಲ್ಲದೆ, ಛತ್ತೀಸ್‌ಗಡದ ಆದಿವಾಸಿಯಾಗಿದ್ದರೆ? ಒಂದೋ ನೀನು ಸಲ್ವಾಜುಡುಂ ಜೊತೆ ಸೇರಬೇಕು ಇಲ್ಲವಾದರೆ ನೀನು ಮಾವೋವಾದಿಗಳ ಜೊತೆ ಇದ್ದಂತೆ ಎಂದು ಹೇಳಿದರೆ? ಆಗ ನೀವು ಹಾರ್ಡ್‌ವೇರ್ ಚೆನ್ನಾಗಿದೆ, ಸಾಫ್ಟ್‌ವೇರ್‌ದಷ್ಟೇ ಸಮಸ್ಯೆ ಎಂದು ಹೇಳುತ್ತೀರಾ?

ಸಂವಿಧಾನದ ಬಗ್ಗೆ ಹೇಳುವುದಾದರೆ, ಬಹುಶಃ ಅದು ಒಂದು ಅತ್ಯುತ್ತಮ ದಸ್ತಾವೇಜೇ ಆಗಿರಬಹುದು. ಆದರೆ ಅಂಬೇಡ್ಕರ್ ಹೇಳಿದಂತೆ 'ನೀವು ಸಂವಿಧಾನದ ಆಶಯವನ್ನು ಸಂಪೂರ್ಣವಾಗಿ ಬದಲಾಯಿಸಲು ಅದರ ಒಂದು ಸಾಲನ್ನೂ ಬದಲಯಿಸುವ ಅವಶ್ಯಕತೆಯಿಲ್ಲ.' ಇಂದು ಫ್ಯಾಸಿಸ್ಟರು ಪ್ರಜಾತಂತ್ರದಲ್ಲಿ ಅಡಕವಾಗಿರುವ ಅದೇ ಅಂಶಗಳನ್ನು ಹಿಡಿದುಕೊಂಡೇ ತಮ್ಮ ಆಗತ್ಯಗಳಿಗೆ ಬಳಸುತ್ತಿದ್ದಾರೆ. ಬಹುಮತವನ್ನು ಪಡೆಯಲು ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟುವುದು ಇಂದು ಈ ಪ್ರಜಾಪ್ರಭುತ್ವದಲ್ಲಿ ಅಡಕಗೊಂಡಿರುವ ಪ್ರಮುಖ ಅಂಶವಾಗಿದೆ. ಇಂದಿರಾಗಾಂಧಿ ಸ್ವರ್ಣಮಂದಿರದ ವಿಷಯದಲ್ಲಿ ಮಾಡಿದ್ದು ಮತ್ತು ಬಿಜೆಪಿ ಇಂದು ಮಾಡುತ್ತಿರುವುದೂ ಸಹ ಇದೇ. ಹಾಗಾಗೇ ಕೆಲವು ಜನರು 'ಭಾರತವು ಬಚಾವಾಯಿತು' ಎಂದು ಹೇಳಿದಾಗ ಅವರೇನು ಹೇಳುತ್ತಿದ್ದಾರೆಂಬುದೇ ಅರ್ಥವಾಗುವುದಿಲ್ಲ.

ಅಂದರೆ ನಿಮ್ಮದೇ ಜನರನ್ನು ನಿರ್ದಯವಾಗಿ ದಮನಿಸಿ, ದೇಶ ಬಚಾವಾಯಿತು ಎಂದು ಹೇಳುವುದು ಅಷ್ಟೊಂದು ಅದ್ಭುತವಾದ ಸಾಧನೆಯೇನು? ಆರ್ಥಿಕತೆಯು ಅದ್ಭುತವಾಗಿದೆ ಆದರೆ ಪ್ರಪಂಚದಲ್ಲಿ ಇನ್ನಾವ ದೇಶದಲ್ಲೂ ಇರದಷ್ಟು, ಬಡವರು ನಮ್ಮಲ್ಲಿದ್ದಾರೆ, ಆಫ್ರಿಕಾದ ಬಡದೇಶಗಳಿಗಿಂತಲೂ ಕೆಳಗೆ ನಮ್ಮ ಜನರ ಪೌಷ್ಟಿಕ ಆಹಾರದ ಮಟ್ಟವಿದೆ. ನಮ್ಮಲ್ಲಿ ಮಿಲಿಯಗಟ್ಟಲೆ ಎತ್ತಂಗಡಿಯಾದ ಜನರಿದ್ದಾರೆ.....

ಇನ್ನೂ ಕೆಲವರು ಹೇಳುತ್ತಾರೆ, 'ಹೌದು ದೆಹಲಿಯಲ್ಲಿ ಸಿಖ್ಖರ ಹತ್ಯಾಕಾಂಡವಾಯಿತು, ಗುಜರಾತ್‌ನಲ್ಲಿ ಮಾರಣಹೋಮವು ನಡೆಯಿತು; ಆದರೆ ಪ್ರಜಾಪ್ರಭುತ್ವವು ಅದೆಲ್ಲವನ್ನೂ ಸರಿ ಮಾಡಿತು' ಎಂದು. ಆದರೆ ವಾಸ್ತವದಲ್ಲಿ ಇಂದು ಗುಜರಾತ್‌ಗೆ ಹೋಗಿ ನೀವು ನೋಡುವುದಾದರೆ ಅಲ್ಲಿ ಪೊಲೀಸ್, ನ್ಯಾಯಾಂಗ, ಗುಪ್ತದಳ ಹೀಗೆ ಎಲ್ಲಾ ಸಂಸ್ಥೆಗಳೂ ಕೋಮುವಾದೀಕರಣಗೊಂಡಿರುವುದನ್ನು ನೋಡುತ್ತೇವೆ. ಅಲ್ಲಿ ಸರಿ ಮಾಡಿರುವುದು ಏನನ್ನು?

● *ಈ ರೀತಿಯಲ್ಲಿ ಭಾರತದ ಪ್ರಜಾತಂತ್ರ ಬಿಕ್ಕಟ್ಟಿನಲ್ಲಿದೆ ಎನ್ನುವುದಾದರೆ, ಅದು ಉಳಿಯುತ್ತದೆಯಾ? ಇಲ್ಲಾ ಅಳಿದು ಹೋಗುತ್ತದೆಯಾ?*

ನನಗನ್ನಿಸುವುದು ನಮಗೆ ಸ್ವಾತಂತ್ರ್ಯ ಬಂದ ಕಾಲದಿಂದಲೂ ನಾವು ಒಂದು ಬಿಕ್ಕಟ್ಟಿನಿಂದ ಇನ್ನೊಂದಕ್ಕೆ ದಾಟಿಕೊಳ್ಳುತ್ತಾ ಬಂದಿದ್ದೇವೆ. ನೀವು ಅದನ್ನು ಒಬ್ಬ ವರದಿಗಾರರಾಗಿ ನೋಡಿದರೆ ಎಲ್ಲವೂ ನಡೆಯಿತು ಮತ್ತು ಪರಿಹಾರವಾಯಿತು ಅಷ್ಟೆ. ನೀವು ಪ್ರತಿಯೊಂದು ಸಾರಿಯೂ ಹೊಸದಾಗಿ ಸೇರಿಕೊಳ್ಳುತ್ತಾ ಹೋದ ಪರಿಣಾಮಗಳನ್ನು ಗಮನಿಸಬೇಕು. Structurally ಈ ದೇಶಕ್ಕೆ ಇಂದು ಏನಾಗುತ್ತಿದೆ ಎಂಬುದನ್ನು ನೋಡಿ.

ಅದು ನಮ್ಮ ಜಲಸಂಪನ್ಮೂಲಗಳಿಗಾಗುತ್ತಿರುವುದೇ ಇರಬಹುದು ಅಥವಾ ಎಸ್‌ಇಜೆಡ್‌ಗಳೇ ಇರಬಹುದು. ಹಾಗೆ ನೋಡಿದರೆ ನಮ್ಮ ಬಹುತೇಕ ಖನಿಜ ಸಂಪತ್ತು ಅರಣ್ಯ ಪ್ರದೇಶಗಳಲ್ಲಿದೆ. ನೀವು ಒಂದೋ ಅರಣ್ಯವನ್ನು ಆರಿಸಿಕೊಳ್ಳಬೇಕು, ಇಲ್ಲವೇ ಅದನ್ನು ನಾಶ ಮಾಡಿ ಖನಿಜಗಳನ್ನು ಪಡೆಯಬೇಕು. ಇದರಿಂದ ಲಕ್ಷಾಂತರ ಜನರನ್ನು ಎತ್ತಂಗಡಿ ಮಾಡುತ್ತಲಿರುವುದರಿಂದ, ನಿಮ್ಮ ಸುತ್ತಲೂ ಇರುವುದು ಕೇವಲ ಮಿಲಿಟರಿ ಹಾಗೂ ಪೊಲೀಸರಿಂದ ಆಳಲ್ಪಡುತ್ತಿರುವ ಪ್ರಭುತ್ವವಾಗಿದೆ. ಇದೆಲ್ಲದರ ನಡುವೆಯೂ ಪ್ರಜಾಪ್ರಭುತ್ವದ ಗಿಳಿಪಾಠವನ್ನು ಕೇಳುತ್ತಲೇ ಇರುತ್ತೀರಿ. ಏಕೆಂದರೆ ನೀವು ಬಹಿರಂಗವಾಗಿ ಇದು ಮಿಲಿಟರಿ ಪ್ರಭುತ್ವವೆಂದು ಘೋಷಿಸಲಾಗುವುದಿಲ್ಲ. ನಿಮಗೆ ಬಂಡವಾಳವೂ ಹರಿದು ಬರಬೇಕು, ನಿಮ್ಮ ಬಾಲಿವುಡ್‌ನ ಥಕಥೈ ಬಿಕರಿಯಾಗಬೇಕು, ಪ್ರತಿವಾರವೂ ಒಂದೊಂದು ಯೂರೋಪಿಯನ್ ದೇಶದಿಂದ ಆಹ್ವಾನ ಬರಬೇಕು. ಈಗ ಜಿನೇವಾದಲ್ಲಿ ನೀವು ಭಾರತವನ್ನು ಪುನರ್‌ಸೃಷ್ಟಿಸಲು ಹೊರಟಿದ್ದೀರಿ. ಅಲ್ಲಿ ಭಾರತದ ಬಣ್ಣಗಳಿರುತ್ತವೆ; ರಾಷ್ಟ್ರಧ್ವಜವಿರುತ್ತದೆ, ಬಾಲಿವುಡ್‌ನ ರಂಗು ಇರುತ್ತದೆ. ಈ ಎಲ್ಲಾ ಪ್ರಚಾರ ತನ್ನದೇ ಆದ ಬುದ್ಧಿಜೀವಿಗಳನ್ನು, ಸಿನೆಮಾವನ್ನು, ತನ್ನದೇ ಆದ ಯಂತ್ರಾಂಗವನ್ನು ಹೊಂದಿರಬೇಕಾಗುತ್ತದೆ. ಜೊತೆಗೆ ಸರ್ಕಾರಿ ಇಲಾಖೆಯು ದಾವೋಸ್‌ನಲ್ಲಿ ವಿತರಿಸುವ ಬ್ರೋಷರ್‌ಗಳಂತಿರುವ ಲೇಖನಗಳನ್ನು ಬರೆಯುವ ಬರಹಗಾರರೂ ಇರುತ್ತಾರೆ. ಆದರಲ್ಲಿ ಕಾಶ್ಮೀರದಲ್ಲಿ, ಈಶಾನ್ಯ ಭಾರತದಲ್ಲಿ, ಛತ್ತೀಸ್‌ಗಡದಲ್ಲಿ ಅಥವಾ ಇಲ್ಲಿ ಏನು ನಡೆಯುತ್ತಿದೆಯೋ ಅದನ್ನು ಕಿರಿದು ಮಾಡಿ 'ಚಲೋ ಯಾರ್ ಥೋಡಾ ರೀಕ್ ಹೈ, ಥೋಡಾ ಸಾಲ್ಟ್ ಔರ್ ಥೋಡಾ ಸ್ವೀಟ್ ಹೈ' ಅನ್ನುವ ಥರ ಬರೆಯಲಾಗಿರುತ್ತದೆ.

● *ಮಾವೋವಾದಿ ಚಳುವಳಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಪ್ರಸ್ತುತದಲ್ಲಿ ಅವರು ಅನುಸರಿಸುತ್ತಿರುವ ಕಾರ್ಯತಂತ್ರದಿಂದ ಅವರು ವಿಜಯ ಸಾಧಿಸುತ್ತಾರೆಯೇ?*

ವಾಸ್ತವದಲ್ಲಿ ನಾನು ಛತ್ತೀಸ್‌ಗಡ ಅಥವಾ ಆಂಧ್ರ ಪ್ರದೇಶದ ಭೂಗತ ಚಳುವಳಿಯು ನಡೆಯುತ್ತಿರುವ ಪ್ರದೇಶಗಳಿಗೆ ಹೋಗಿಲ್ಲ. ಅಲ್ಲಿ ಏನಾಗುತ್ತಿದೆಯೆಂಬುದರ ಬಗ್ಗೆ ನಾನೇನು ತಜ್ಞಳಲ್ಲ. ಇದುವರೆಗೆ ಕಾಶ್ಮೀರದಲ್ಲಿ ಪರಿಸ್ಥಿತಿ ಬರ್ಬರವಾಗಿತ್ತು. ಅದೇ ಬರ್ಬರತೆ ಇಂದು ಇಲ್ಲಿಗೆ ಬರುತ್ತಿದೆ. ಭಾರತ ಸರ್ಕಾರದ ವಿರುದ್ಧದ ಯುದ್ಧವನ್ನು ಸೇನಾತ್ಮಕವಾಗಿ ಗೆಲ್ಲಲಾಗುವುದಿಲ್ಲ. ಅದಂತೂ ಖಂಡಿತ. ಇದನ್ನು ಮಾವೋವಾದಿಗಳು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಅವರು ಎಂದಿಗೂ ತಮ್ಮನ್ನು ಬೆಂಬಲಿಸುವ ಜನಸಮೂಹದಿಂದ ಬೇರ್ಪಡಲಾಗದು. ಅವರು ಸಶಸ್ತ್ರ ದಳಗಳನ್ನು ಹೊಂದಿದ್ದಾಗ, ಅವರ ರಾಜಕೀಯ ಹೋರಾಟಗಾರರು ಠಕ್ಕರು ಮತ್ತು ಸುಲಿಗೆಕೋರರಾಗುವ ಸಾಧ್ಯತೆಯಿದೆ ಮತ್ತು ಅವರಿಂದ ಜನರ [illegible] ಬೇಕಾಗುತದೆ. ಆದರೆ ಸದ್ಯದಲ್ಲಿ ಅವರಿಗೆ ಬೆಂಬಲ ಹೆಚ್ಚುತ್ತಿದೆ. ಸಶಸ್ತ್ರ ಚಳುವಳಿಯನ್ನು [illegible] ಅತ್ಯಂತ ಕಷ್ಟಕರವಾದುದೇನೇಕು. [illegible] ಅವರು ಹೋರಾಡುವುದರ ಜೊತೆಗೆ ಅಗತ್ಯ ಬಿದ್ದಾಗ [illegible]ಗೊಂಡಿರುವ ಪರ್ಯಾಯ ವ್ಯವಸ್ಥೆಯು ಇರಬೇಕು

ಈ ಬಿಜೆಪಿಗಳ್ಯಾಕ್ಲ ಹಿಂಗಾದ್ರೊ

ಇದ್ದಕ್ಕಿದ್ದಂತೆ ಸೀರ ಹಾರೆಂದು ನಗಾಡಿ ಸುಮ್ಮನಾದ.

"ಅದೇನು ಕಾಗ್ಸೋ ಮಾವ ಅಂಗೆ ನಗಾಡಿದಲ್ಲಾ" ಎಂದಳು ಜುಮ್ಮಿ.

"ಅವುನ್ಯಾವನೋ ಬಿಜೆಪಿ ಯಮ್ಮೆಲ್ಲೆಯಂತೆ ಕಂದ್ಯ. ಯಾವಳ್ನೋ ಹಿಡಕಂಡು ಮುತ್ತು ಕೊಟ್ಟನಂತೆ. ಅವುಳದ ಫೋಟಾ ತೆಗಿ ಪೇಪ್ರಿಗೆ ಕೊಟ್ಟಿದ್ದಾಳಂತೆ. ಈ ಬದ್ದಿ ತ್ಯೆದ ತಲೆಮರಿಸಿಗಂಡಿದ್ದನಂತೆ" ಎಂದು ಮತ್ತೂ ನಗಾಡಿದ. ಅದನ್ನು ಕುತೂಹಲದಿಂದ ಕೇಳಿದ ಕಾಳಮಾವ,

"ಅವುನ್ಯಾರ್ಲ ಅಂತ ಗುಣಿಗ್ಯಟ್ಟ ನನ್ನ ಮಗ?" ಎಂದ.

"ಹೊನ್ನಾಳಿ ಯಮ್ಮೆಲ್ಲೆ ಕಣ ಮಾವ" ಎಂದ ಉಗ್ರಿ.

"ಮದಿವಾಗಿಲವೆ ಅವುನು?"

ಕಟ್ಟೆಪುರಾಣ
■ ಬಿ. ಚಂದ್ರೇಗೌಡ

"ಮದಿವಾಗಿದ್ದನಂತೆ. ಆದ್ರು ಯಾವಳೋ ನರ್ಸ್ ಇಟ್ಟಗಂಡಿದ್ದನಂತೆ. ಅವುಳ ಮುಕ ಮುಸುಡಿ ತುಟಿಗ್ಯಲ್ಲ ಮುತ್ತು ಕೊಡದ ಪೋಟಾ ತಗಿಸಿಗಂಡಿದ್ದನಂತೆ.

"ಪೋಟೋ ಯಾಕೆ ತಗಿಸಿಗಂಡಿದ್ದಾ?"

"ಅದೊಂತರ ತಿಕ್ಕಲ ಬಡ್ಡೆತ್ತುದ್ದು. ಇಬ್ರು ಚೆನ್ನಾಗಿದ್ದಾಗ ತಗಿಸಿಬುಟ್ಟವನೆ. ಈಗ ಆ ಪೋಟಾ ಅವುನೆಲ್ಲೂ ತಲೆ ಎತ್ತದಂಗೆ ಮಾಡ್ಯವೆ!"

"ಅಲ್ಲಾ ಕಂದ್ಯ ಹೆಂಗುಸಿಗೆ ಮುತ್ತು ಕೊಡೋ ಪೋಟಾ ತಗಿಸಿಕೊಂಡವುನೆ ಅಂದ್ರೆ ಅವುನಿನ್ನಂತಾ ಎಮ್ಮೆಲ್ಲೆ?"

"ಅವು ಡೂಪ್ಲಿಕೇಟ್ ಪೋಟೋ ಅಂತಾ ಹೇಳ್ತ ಅವುನೆ ದ್ವಡಪ್ಪ" ಎಂದ ವಾಟಿಸ್ಸೆ.

"ಅವುಳ ಮಕ ಹಿಡಕಂಡು ಮುತ್ತು ಕೊಡೋ ಪೋಟಾ ನಾನೇ ನೋಡಿದ್ದೀನಿ. ಅದ್ಯಂಗೆ ದೂಪಳಿಕೇಟ್ಯಾ" ಎಂದಳು ಜುಮ್ಮಿ.

"ಅಕ್ಕಾ, ಈಗ ಪ್ರಿಂಟಿಂಗಲಿ ಭಾರೀ ಟೆಕ್ನಾಲಜಿ ಬಂದದಂತೆ. ಈ ರೇಣುಕಾಚಾರ್ಯ ಯಳನೀರು ಕುಡಿವಾಗಲ ಪೋಟೋ ತಕ್ಕಂಡು ಅದಕ್ಕೆ ನರ್ಸ್ ಜಯಲಕ್ಷ್ಮಿ ತಲೆ ಸೇರಿಸಿಬುಟ್ಟವುರೆ ಅಂತ ಯಮ್ಮೆಲ್ಲೇ ಕಡಿಯೋರು ಹೇಳ್ತಾ ಅವುರೆ. ಇದಕ್ಯೇನೇಳ್ತೀ?"

"ಯಳನೀರು ಕುಡಿವಾಗ ತುಡಿಯಂಗೆ ಮಾಡ್ತರೆ. ಮುತ್ತುಕೊಡುವಾಗ ಯಂಗೆ ಮಾಡ್ತರೆ ಅಂತ ನಿನಗೊತ್ತಿಲವೇನ್ಲ?"

"ನನಿಗ್ಗೊತ್ತದೆ ಕಣಕ್ಕ, ಆದ್ರೆ ಈ ವನ್ನಾಳಿ ಎಮ್ಮೆಲ್ಲೆ ಯಂತಾ ಪೊಲಿಸ್‌ಫೆಲೊ ಅಂದ್ರೆ, ಕೊಟ್ಟರೊ ಮುತ್ತು ಮರೆತು ಪೋಟೋ ಡೂಪ್ಲಿಕೇಟ್ ಅಂತಾ ಅವುನೆ. ವಳ್ಳೆ ರೇಣುಕಾ ಚಾರಿ."

"ಆಚಾರಿನೇನ್ಲ ಅವುನು?" ಎಂದ ಸೀರ.

"ಲಿಂಗಾಯಿತರಂತೆ ಚಿಗಪ್ಪ. ಆದರಲ್ಲೂ ಲಿಂಗಾಯಿತ್ರಲ್ಲಿ ಶ್ರೇಷ್ಟವಾದ ಐನೋರು ಪೈಕಿಯಂತೆ."

"ವಳ್ಳೆ ಸೇಸ್ಟವಾದ ಕ್ಯಲಸನೆ ಮಾಡ್ಯವನೆ ಬುಡತ್ತಗೆ" ಎಂದ ಕಾಳಮಾವ.

"ಕಟಿಗಂಡೆಡತಿ ಇದ್ರೂ ನರಸಿಟಗಂಡವುನೆ ಅಂದ್ರೆ ಅವುನಿನ್ನಂಥ ಕಚ್ಚರಕಿದ್ದನೂ" ಎಂದ ಸೀರ.

"ಚಿಗಪ್ಪ, ಅವುನೇನು ಮಾಡಬಾರ್ದ ಮಾಡಿಲ್ಲ, ಇವತ್ತು ಅಂಗೇ ನೋಡಿದ್ರೆ ಯಲ್ಲಾ ಮಿನಿಸ್ಟ್ರು, ಎಮ್ಮೆಲ್ಲೆಗಳು ಮಾಡ್ತಯಿರೋ ಕ್ಯಲಸನೆ ಇವುನು ಮಾಡ್ತ ಅವುನೆ. ಯಾಕಂದ್ರೆ ಇವುನು ಪಟೇಲ್ರು ಶಿಷ್ಯಾಗಿದ್ನಂತೆ. ಈಗ ಎಡೂರನ ಪಾಲೋಯರು."

"ಅಂಗರೆ ಬುಡುಮತ್ತೆ ತಿರಗ ಮಾತ್ಯಾಕೆ?"


"ಯಾವ ಪಾರ್ಟಿ ಅವುನೂ?" ಎಂದ ಕಾಳಮಾವ.

"ಎಡೂರನ ಪಾಲೋಯರು ಅಂದ್ರೆ ಗೊತ್ತಾಗಲಿಲವೆ ದ್ವಡಪ್ಪ? ಬಿಜೆಪಿ ಎಮ್ಮೆಲ್ಲೆ"

"ಆ ಬಿಜೆಪಿ ಬಡ್ಡೆತ್ತವ್ಯಾಕೆ ಹಿಂಗಾದ್ರೊ?"

"ಆಗದೇನೂ ಅವಿದ್ದಿದ್ದೆ ಅಂಗೆ. ಯಲ್ಲ ಈಗ ಈಚೆಗೆ ಬತ್ತ ಅದೆ. ನೋಡಾಗ್ಲೆ ಎಡೂರಪ್ಪ ಯಾವ ಎಗ್ಗೂ ಇಲ್ದೆ ಶೋಭಾ ಕರಂದ್ಲಾಜೆ ಕಟಿಗಂಡು ಉಳ್ಳಾಲದಲ್ಯಲ್ಲ ವಳ್ಳಾಡತಯಿದ್ದನಂತೆ" ಎಂದ ಉಗ್ರಿ.

"ಅವುನೇನೂ ಹೆಡತಿ ಸತ್ತೋನು, ಯಾವೆಂಗುಸನಾರ ಕಟಿಗಂಡು ತಿರುಗ್ಲಿ. ಸರೀಳದಲ್ಲ ಕಸುವಿದ್ದಾಗ ಮನಸು ಕೇಳ್ಯತೆ. ಆದ್ರೆ ಇವುರ ಕತೆಯೇಳು?" ಎಂದ ಸೀರ.



"ಎಡೂರಪ್ಪನಿಗಾಗ್ಲೆ ವಯಸಾಗಿಲವೆ ಮಾವ" ಎಂದಳು ಜುಮ್ಮಿ.

"ಅವುನಿಗ್ಯಾವ ವಯಿಸಾಗಿದ್ದಕ್ಲ? ಅವುನಿನ್ನೂ ... ವಯುಸಿನೋನು" ಎಂದ ಸೀರ.

"ನಿನ್ನ ವಯುಸಿನೋನು ಅಂತಿ, ಜಗಲಿಮ್ಯಾಲೆ ಮನಿಕ... ಎರಡೂಪ್ಪ ಶೋಬನ ಜೊತೆ ತಿರುಗ್ತನೆ" ಎಂದಳು ಜುಮ್ಮಿ.

"ಅದೊಂತರ ಇದು ಕಂದ್ಯ, ಹೆಡತಿ ಇದ್ದೊ... ಅಲ್ಲವ್ರುಳಿ ಅನ್ನಕಂಡು ಸುಮ್ಮನಿರತನೆ. ಇಲ್ಲೊದು ಅಯ್ಯಯ್ಯೋ... ಹೆಡತಿನೆ ಇಲವಲಪ್ಪ ಅಂತ ಯಾವಾಗ್ಲೂ ಆದರಮ್ಯಾಲೆ... ಗ್ಯಾನ ಮಾಡ್ತನೆ. ಆಗೊ ಅಂಗೆ, ಅವ್ನಲ್ಲ ಒಂದಿದು..." ಎಂದು ಸೀರ ತತ್ವ ಜ್ಞಾನಿಯಂತೆ ಮುಖ ಮಾಡಿದ.

"ರಾಜಕಾರಣಕ್ಕೆ ಬಂದಮ್ಯಾಲೆ ಅದೊಂದು ವಿಸಿಯದಲ್ಲಿ... ಸರಿಯಾಗಿರಬೇಕು ಕಂದ್ಯ" ಎಂದ ಕಾಳಮಾವ.

"ಇನ್ಯಲ್ಲ ವಿಸಿಯದಲ್ಲೂ ಹಾಳಾಗ್ಯೋಗಬವುದೊ?" ಎಂದ ವಾಟಿಸ್ಸೆ.

"ಅಂಗಲ್ಲ ಕಂದ್ಯ, ಈ ವಿಸಿಯದಲ್ಲಿ ಸರಿಯಾಗಿ... ಜನ ಎಲ್ಲೋದ್ರು ಬ್ಯಲೆ ಕೊಡ್ತರೆ, ಬಾವುಣ... ಅಂತ ವಿಸಿಯದಲ್ಲಿ ದ್ಯಾವೇಗೌಡುನ್ನ ಯಾರ... ಬೆಟ್ಟು ಮಡಚಂಗಿದ್ವತೆ."

"ಅಂಥೊನ್ನಟ್ಟೆಲಿ ಹುಟ್ಟಿರೊ ಮಕ್ಕ... ನೋಡಿದ್ದೀಯಾ"

"ಅವೇನಾರ ಹಾಳಂಬದ್ದ್ಯಾಗಿ... ಆದ್ರುವುನ್ಯಂಗಿದ್ದ."

"ಅವುನಪ್ಪನಂಗಿರೋರವುರೆ ದ್ವಡಪ್ಪ, ಅ... ಒಂದು ಪರಮಾಸಿ ಗುಣ ಅನ್ನಂಗೇಳಬ್ಯಾಡ... ದ್ಯಾವೇಗೌಡನ ನೇಚರ್ರೆ ಆಂಗಿದ್ರೆ ನೀನೇಳದೇನು... ವಿಶೇಷ ಅಲ್ಲ ಬುಡು"

"ಇವತ್ತು ರೇಣುಕಾಚಾರಿಗೆ ಸಮಾಜದ... ಬ್ಯಲೆ ಇದ್ದತ್ಲ?"

"ಈಗ ಸದ್ದಿಕಲ್ದಿಯಿರಬೌದು... ಆದ್ರೆ ಮುಂದ... ಅವುನು ಗಳಿಸಿಕೋಬೇಕು ದ್ವಡಪ್ಪ."

"ಹೋದ ಮಾನ ತಿರಗಬಂದತೆ?" ಎಂದ... ಸೀರ.

"ಬರದಿಲ್ಲ, ಹೂಸು ಬುಟ್ಟಾಯ್ತು, ಅದ... ವಾಸಿನಿಗೆ ಮೂಗ ಮುಚಗಂಡಾಯ್ತು, ಅದ... ಕತೆ ಮುಗೀತು. ಆದ್ರೆ ಮುಂದೆ ಉಸಾರಾಗಿರಬೇಕ... ನ್ನಡಿಯೋ ಕಾಲು ಎಡುವುತವೇ ವರತು ಕುಂತಿರೋ... ಕಾಲು ಎಡಿಗ್ಯವೆ?" ಎಂದ ಉಗ್ರಿ.

ಕೊಲೆ ಸಂಖ್ಯೆ ಏರಿದಷ್ಟೂ ರೌಡಿ ಘನತೆ ಹೆಚ್ಚುತ್ತೆ

ಪತ್ರಿಕಾಲಯದ ಮೇಲೆ ದಾಳಿ.

ಇದೇನು ಹೊಸ ಸುದ್ದಿ ಅಲ್ಲ, ಇಂತಹ ದಾಳಿ ನಡೆಯುತ್ತಲೇ ಇರುತ್ತವೆ. ಯಾವುದೋ ಒಂದು ಕಾರಣ ಸಿಕ್ಕಿದರೆ ಸಾಕು.

ಈಗಿನ ದಾಳಿಗೆ ಏನು ಕಾರಣ?

ಸುದ್ದಿ ಸರಿಯಾಗಿ ವರದಿಯಾಗಿಲ್ಲ!

ಸರಿಯಾಗಿ ವರದಿ ಮಾಡದಿರುವುದೇ ಇಂದಿನ ಹಲವು ಪತ್ರಕರ್ತರ ವೈಶಿಷ್ಟ! ಇದರಲ್ಲಿ ಏನು ಹೆಚ್ಚುಗಾರಿಕೆ?

ಸಂದರ್ಭವೇ ಹಾಗಿದೆ. ಈಗ ಒಬ್ಬ ಪ್ರಖ್ಯಾತ ರೌಡಿಯ ಕೊಲೆಯಾಗಿದೆ.

ರೌಡಿ ಎಂದಮೇಲೆ ಕುಖ್ಯಾತ ಆಗಬೇಕು, ಪ್ರಖ್ಯಾತಿ ಹೇಗೆ?

ಕುಖ್ಯಾತ ರೌಡಿ ಎನ್ನುವುದು ಆ ಕಾಲ, ಪ್ರಖ್ಯಾತ ರೌಡಿ ಎನ್ನುವುದು ಈ ಕಾಲ!

ಆಯಿತು. ವರದಿ ಎಲ್ಲಿ ತಪ್ಪಾಗಿದೆಯಂತೆ?

ಕೊಲೆಗಾರರ ಹೆಸರು ಸರಿ ಇಲ್ಲವಂತೆ.

ಹಾಗಾದರೆ ಅವರು ಮಾಡಿದ್ದರಲ್ಲಿ ತಪ್ಪಿಲ್ಲ, ಟಿವಿಯಲ್ಲಿ ಬರುವ ಪಾತಕಿ ಸುದ್ದಿ ಧಾರಾವಾಹಿಂಗಳಂತೆ ಮರ್ಯಾದಸ್ತರ ಬದುಕನ್ನೂ ಹರಾಜಿಗೆ ಹಾಕಿದ್ದರೆ ಹಾಗೆ ಮಾಡಿದ್ದೇ ಸರಿ.

ಈಗ ದಾಳಿ ಮಾಡಿರುವವರು ಕೊಲೆಗಾರರು!

ಅವರ ಹೆಸರನ್ನು ಹೆಸರಿಸಿದ್ದಕ್ಕೆ ಕೋಪವೆ?

ಅಲ್ಲ, ಸರಿಯಾಗಿ ಹೆಸರಿಸದಿದ್ದಕ್ಕೆ!

ಅಂದರೆ ಏನು ನಿಮ್ಮ ಮಾತಿನ ಅರ್ಥ?

ರೌಡಿ ಆಂಜನೇಯನ ಗುಂಪು ಕೊಲೆ ಮಾಡಿದೆ ಎಂದು ವರದಿಯಾಗಿದೆಯಂತೆ.

ಇದಕ್ಕೆ ಅವರ ವಿರೋಧವೆ?

ಹೌದು.

ಯಾಕೆ, ಅವರೇ ಅಲ್ಲವೆ ಕೊಲೆಗಾರರು?

ಅವರೇನೆ. ಅವರ ವಿರೋಧ ಅವರು ಕೊಲೆಗಾರರು ಎಂಬುದಕ್ಕಲ್ಲ.

ಇನ್ನು ಯಾವುದಕ್ಕಂತೆ?

ರೌಡಿ ಆಂಜನೇಯ ಎಂಬುದಕ್ಕೆ.

ಇನ್ನೇನು ಇರಬೇಕಂತೆ?

ರೌಡಿ ಅಟ್ಯಾಕ್ ಆಂಜಿ!

ಈಗ ನನಗೆಲ್ಲ ಸ್ಪಷ್ಟ ಆಯಿತು. ಹಿಂದೆಲ್ಲ ರೌಡಿ, ಕೊಲೆ, ಪಾತಕಿ, ರೇಪ್ ಕೃತ್ಯಗಳನ್ನು ಮಾಡಿದರೂ ಅದು ಬಹಿರಂಗವಾಗದಂತೆ ಜಾಗರೂಕತೆ ವಹಿಸುತ್ತಿದ್ದರು. ಅಕಸ್ಮಾತ್ತಾಗಿ ಅದು ಬಹಿರಂಗ ಆದರೆ ಅವರು ನೊಂದುಕೊಳ್ಳುತ್ತಿದ್ದರು. ಮುಖ ತೋರಿಸಲೂ ಬೆದರಿ ಟವೆಲ್ಲಿನಿಂದಲೋ, ಕರ್ಚೀಫಿನಿಂದಲೋ, ಅದು ಯಾವುದೂ ಸಿಗದಿದ್ದರೆ ಬರಿ ಕೈಯ್ಯಲ್ಲಿಯೋ ಮುಖ ಮುಚ್ಚಿಕೊಳ್ಳುತ್ತಿದ್ದರು. ಆಗ ಪಾತಕತನಕ್ಕೆ ಒಂದು ಘಟನೆ ಎಂಬುವುದೇ ಇರಲಿಲ್ಲ, ಈಗ ನೋಡಿ ಕ್ರಿಮಿನಲ್ ಅಂದರೆ ಒಂದು ಇದು. ಹಾಫ್ ಮರ್ಡರ್ ಮಾಡವ್ನೆ ಅಂದರೆ ಇನ್ನೂ ಬಚ್ಚ ಅಂತಾರೆ. ಫುಲ್‌ಮರ್ಡರ್ ಅಂದರೆ ಪರವಾಗಿಲ್ಲ ಅಂತ. ರೇಪುಗೀಪು ಅವೆಲ್ಲ ಅಂತಹ ಹೇಳಿಕೊಳ್ಳುವಂತಹವಲ್ಲ, ಆದರೂ ಅಣ್ಣ ಅನ್ನಿಸಿಕೊಳ್ಳಬೇಕಾದರೆ ಒಂದು ಹತ್ತು ಮರ್ಡರು, ಇಪ್ಪತ್ತೈದೇ ಮುವ್ವತ್ತೋ ಹಾಫ್ ಮರ್ಡರು, ಒಂದು ನಲವತ್ತೈವತ್ತು ರೇಪಾದರೂ ಮಾಡಿರಬೇಕು. ಆಗಲೇ 'ಅಣ್ಣ' ಪದವಿಗೆ ಒಂದು ಜೆಲ್ಲೆ!

ಹೀಗೇ ಯೋಚಿಸುತ್ತಾ ಇದ್ದವನಿಗೆ ಜೊಂಪು ಬಂದ ಹಾಗಾಯಿತು.

ಒಂದು ಕೊಲೆ. ಮಾಮೂಲಿನಂತೆ ಪೊಲೀಸರು, ಕೊಲೆಗಾರರು, ಪತ್ರಿಕೆಯವರು.

'ಇವನ್ಯಾರೋ ಹೊಸಬ ಇದ್ದಂಗವ್ನೆ, ಯಾರೋ ಮರಿ ನೀನು?' ರೌಡಿಯ ಪ್ರಶ್ನೆ.

ಟಿವಿ ವರದಿಗಾರ ಮರಿ ತನ್ನ ಪ್ರವರ ಒಪ್ಪಿಸಿತು.

'ಹೈಕ್ಲಾಸಾಗಿ ಬರ್ಬೇಕು. ಮೊಕ ಹಂಗೇ ಎದ್ದು ಕಾಣಬೇಕು'

'ಆಗ್ಲಣ್ಣ'

'ಲಾಂಗು ರಕ್ತ ಎಲ್ಲ ಹಂಗೇ ಬರ್ಬೇಕು.'

'ಆಗ್ಲಣ್ಣ.'

'ಅದೇನು ನೋಡ್ಕಳೋ ಅವನ್ನ' ಮರಿರೌಡಿಗೆ ಹೇಳಿದ ಮಾತು.

ಮರಿ ರೌಡಿ ನೋಡಿಕೊಂಡಿತು.

ಟಿವಿಯಲ್ಲಿ ಬಂದಿತು. ಪ್ರಖ್ಯಾತ ರೌಡಿ ಅಟ್ಯಾಕ್ ಅಂಜಿ ಗುಂಪು ಹಾಡುಹಗಲಿನಲ್ಲಿಯೇ ರೌಡಿ ಲಾಂಗ್ ಲಕ್ಷ್ಮನನ್ನು ಲಾಂಗಿನಿಂದ ತರಿದು ಹಾಕಿತು. ಸುತ್ತಲಿದ್ದ ಜನ ಭಯಭೀತರಾಗಿ ಓಡಲಾರಂಭಿಸಿದರು, ಇತ್ಯಾದಿ....

ಪರಿಣಾಮ: ಅಟ್ಯಾಕ್ ಅಂಜಿಯ ಘನತೆ ಹೆಚ್ಚಿತು!

ದೃಶ್ಯ ಬದಲಾವಣೆ ಆಯಿತು.

'ಲೇ ಹೆಂಗೈತೆ ಮೈಗೆ.'

'ಯಾಕಣ್ಣ?'

'ನಮ್ಮಣ್ಣನ ಏನಂತ ತಿಳ್ಕಂಡಿದೀಯಾ?'

'.....?'

'ಮೊನ್ನೆ ದಿನ ಆಯ್ತಲ್ಲ ಅದು ಇಪ್ಪತ್ತೆರಡನೆ ಮರ್ಡರು... ನೀನೇನಂತ ಬರ್ದಿದ್ದೀಯಾ?'

'ಇಪ್ಪತ್ತು ಅಂತಾವ.'

'ಇನ್ನೆರಡನ್ನೇನು ನಿಮ್ಮಪ್ಪ ಮಾಡ್ನೋ ನೀನ... ಮಾಡ್ನೊ...ಈಗ್ಲಿಂದೀಗ್ಲೆ ಇಪ್ಪತ್ತೆರಡು ಅಂತ ಸರಿಯಾ... ಬರಿ... ಇಲ್ಲ.... ನೀನು ಇಪ್ಪತ್ತು ಮೂರನೆಯವನಾಗ್ತೀಯ...'

ಮತ್ತೆ ದೃಶ್ಯ ಬದಲಾವಣೆ.

ಕೊಲೆ ಅಪರಾಧದ ಮೇಲೆ ಬಂಧಿತರಾಗಿರುವ ಮ... ವಾತಾವರಣ ಹೇಗಿರಬಹುದು ಎಂಬುದನ್ನು ನೋಡಲು... ಅವರ ಮನೆಗೆ ಹೋದೆ.

ಒಂದು ಅಳು ಇಲ್ಲ, ಒಂದು ದುಃಖ ಇಲ್ಲ, ಎಲ್ಲೆಲ್ಲೂ... ಸಂಭ್ರಮದ ವಾತಾವರಣ. ಅಪರಾಧಿಯ ಹೆಂಡ... ಕುರ್ಚಿಯಲ್ಲಿ ಆಸೀನರಾಗಿದ್ದರು. ಅವರ ಹಿಂದೆ ಅಕ್ಕಪಕ್ಕ... ಸೈಂಧವರಂತೆ ಇದ್ದ ಹಲವರು ನಿಂತಿದ್ದರು.

ಫೋನ್ ಟ್ರಿನ್ ಗುಟ್ಟಿತು.

ಒಬ್ಬ ಸೈಂಧವ ಎತ್ತಿಕೊಂಡ.

'ಅಕ್ಕಾ, ಅಣ್ಣಾರು.'

ಫೋನು ಅಕ್ಕನ ಕೈಗೆ ಬಂತು. ಅದೇನು ಸು... ಬಂದಿತೋ ಏನೋ. ಅಕ್ಕಾವರ ಮುಖ ಮೊರದಗ... ಆಯಿತು.

ಅಣಾಕ್
■ ಎಚ್.ಎಲ್. ಕೇಶವಮೂರ್ತಿ

'ಹೊರಗಿರುವ ಆಯಮ್ಮನ ಕರಿ.'

'ಆಯಮ್ಮ ಬಂದಿತು.'

'ಅಣ್ಣಾರು ಈಗ ತಾನೆ ಹೇಳಿದರು. ತಂದಿದೀರಾ...'

ಬ್ರೀಫ್‌ಕೇಸ್ ಮುಂದೆ ಬಂತು.

'ಎಷ್ಟಿದೆ?'

'ನಾಲ್ಕು.'

'ಅಣ್ಣಾರು ಐದು ಅಂದವ್ರೆ.'

'ಹಂಗೇ ಆಗಲಿ. ಕೆಲಸ ಮುಗಿದ ಮೇಲೆ ಇನ್ನೊಂದು... ಕೊಡ್ತೀನಿ.'



"ಸೀನಿನ್ನೇನು ಮಾತಾಡಿ ತಗೊ" ಎಂದ ಸೀರ.

"ಎನೊ ಒಂಥರಾ ಅಂತಿಯಲ್ಲೊ ಮಾವನ ನೀನು. ವೇನು ಆ ರೇಣುಕಾಚಾರಿ ಪರವಯಿಸಿಗಂಡು ಾತಾಡ್ತಯಿಲ್ಲ. ಆ ಮುಂಡೆ ಮಗ ಜಯಲಕ್ಷ್ಮಿ ಸವಾಸ ಾಡಿದಾಗ ಉಸಾರಾಗಿರಬೇಕಾಗಿತ್ತು. ಸಾಯಿಸ್ತಿನಿ, ಿಡ್ತಾಕ್ತೀನಿ ಅಂದ್ರೆ ಯಾವ ಹೆಂಗಸತಾನೆ ುಗಿಬೀಳದಿಲ್ಲ?"

"ಅವುಳು ಜೋರಾಗ್ಯವುಳೆ ಕಂಡ್ಯ" ಎಂದಳು ಜುಮ್ಮಿ.

"ಏ, ಆ ಮುದುಕಿನೆ ಬುಡ್ತಯಿಲ್ಲ."

"ಯಾವ ಮುದುಕೀ?"

"ಪ್ರಮೀಳ ನೇಸರಗಿ ಅಂತ ವಬ್ಬವುಳೆ. ಹೆಂಗಸರಿಗೆ ಾದ್ರು ಅನ್ಯಾಯಾದ್ರೆ ಇಚಾರಣೆ ಮಾಡು ಅಂತ ಅವುಳಿಗೆ ಾಬ್ದಾರಿ ಕೊಟ್ಟವುರೆ. ಅವುಳಿಗೇ ಇವುಳು ತಿರುಗಿ ದ್ದವಳೆ."

"ಯಾಕೇ?"

"ಯಾಕೆ ಅಂದ್ರೆ ಅವುಳು ರಾಜಕಾರಣದೊಳು. ಒಂದು ರ್ಟಿಲಿದ್ದೊಳಿಂದ ನ್ಯಾಯಸಿಗದಿಲ್ಲ ಅನ್ನೊ ದವುಟು ಂದದೆ ಈ ಜಯಲಕ್ಷ್ಮಿಗೆ. ಅದ್ಕೆ ತಿರುಗಿಬಿದ್ದವುಳೆ."

"ಅವುಳು ಮಾತ್ನು ತಗಬೇಕು ಬುಡು."

"ಅಲ್ಲಾ, ವಳ್ಳೆ ವಬ್ಬ ಅಪ್ಪಂಥೋನು ಈ ಸರಕಾರದ್ವಳಗೆ ಲವಲ್ಲಾ, ಕತಿಯಂಗೆ?" ಎಂದ ಸೀರ.

"ಇನ್ನೂ ಎಡೂರ ಮುಖ್ಯಮಂತ್ರಿಯಾದಾಗ ್ಯಂತ್ಯಂತ ಜನ ಬತ್ತರೊ ನೋಡಿವಿರು ಚಿಗಪ್ಪ. ಈಗೇನೂ ುತ್ತುಕೊಟ್ಟು ಪೋಟೋ ವಡಿಸಿಗಳೋನು ಸಿಕ್ಕವುನೆ. ಮ್ಯಾಲೆ ಬ್ಲೂಪಿಲಂ ಆಕ್ಟರುಗಳು ಬರಬಹುದು" ಎಂದ ಟಿಸ್ಸೆ.

"ಬರಬವುದೇನು, ಈಗಾಗ್ಲೆ ಇರಬವುದು ಕಣೊ. ಚಿಕ್ಕಮಗಳೂರು ಸಿ.ಟಿ.ರವಿ ನೋಡು ಯಂಕಾಣ್ತನೆ, ವುನಿಗಿಂತ ಆ ಬಳ್ಳಾರಿ ಕಡೆ ಯಮ್ಮೆಲ್ಲೆಗಳು ನೋಡು ಂಗವುರೆ" ಎಂದ ಉಗ್ರಿ.

"ಬಿಜೆಪಿ ಬಾಳವಳ್ಳೆ ಪಕ್ಷ, ವಳ್ಳೆ ಜನವುರೆ ಅನ್ನಕಂಡಿದ್ದೊ. ವುರಿಗೋಲಿಸಿದ್ರೆ ಕಾಂಗ್ರೆಸ್ಸಿನೋರು ಸಾವುರಪಾಲುತ್ತುಮ" ಂದ ಸೀರ. ■

'ಅವನ ಫೋಟೋ ಕೊಡಿ.'

ಅದೂ ಕೈಸೇರಿತು.

'ಇವನೇ ತಾನೆ ನಿಮ್ಮ ಗಂಡ. ವಿವರ ಹೇಳಿ.'

ಕೊಲೆಯಾಗಬೇಕಾದವನ ಹೆಂಡತಿ ವಿವರ ತಿಳಿಸಿದಳು.

'ನಿಮ್ಮ ಕೆಲಸ ಆದಂಗೇನೆ. ನೀವು ನಾಳೆಯಿಂದ ುಂಡೆ ಅನ್ನಳಿ.'

ಕೋಟ್ಯಂತರ ರೂಪಾಯಿ ಆಸ್ತಿ. ಹಾಳಾದ ಗಂಡ ುನ್ನುವವನೊಬ್ಬ ಅಡ್ಡ ಇದ್ದ. ಅವನ ಕತೆ ಮುಗಿಸಿದರೆ ಲ್ಲವೂ ತನಗೇ! ಖುಷಿಯಾದಳು ಆ ಹೆಂಗಸು. ್ಕನವರೂ ಖುಷಿಯಾದರು. ಒಂದು ತರಹ ವಿನ್-ವಿನ್ ುಯೇಷನ್ ಇದ್ದಂಗಿತ್ತು ವ್ಯವಹಾರ. ಲಲ್ಲೂಪ್ರಸಾದ್ ಾದವ್ ಯಾವುದೋ ಕೇಸಲ್ಲಿ ತಗುಲಾಕಿಕೊಂಡು ೀಕೃಷ್ಣ ಜನ್ಮ ಸ್ಥಾನಕ್ಕೆ ಹೋಗಲೇಬೇಕಾದ ಿವಾರ್ಯತೆಯುಂಟಾದಾಗ ರಾಜಕೀಯ ಜ್ಞಾನವೇ ಇಲ್ಲದ ್ಮ ಹೆಂಡತಿಯನ್ನೇ ಮುಖ್ಯಮಂತ್ರಿ ಪಟ್ಟಕ್ಕೆ ಏರಿಸಿದರಲ್ಲ, ರಕ್ಕಿಂತಲೂ ಇದು ಉತ್ತಮ ಅನ್ನಿಸಿತು. ಯಾಕೆಂದರೆ ್ಕ'ನವರು ಈಗಾಗಲೇ ಈ ವ್ಯವಹಾರದಲ್ಲಿ ಸಾಕಷ್ಟು ಗಿದ್ದರು.

ಯಾವುದೋ ಮೈಕು ಅರಚಿದಂತಾಯಿತು.

ನೋಡಿದೆ. ಸನ್ಮಾನ ಸಮಾರಂಭ!

ಯಾರಿಗೆ ಸನ್ಮಾನ? ಯಾತಕ್ಕಾಗಿ ಸನ್ಮಾನ?

ಶ್ರೀಯುತರು ಇಪ್ಪತ್ತೈದು ಕೊಲೆಗಳನ್ನು ಯಶಸ್ವಿಯಾಗಿ ರೈಸಿದ್ದಕ್ಕಾಗಿ ಸನ್ಮಾನ!

ರಜತ ಪದಕಾನೂ ನೀಡುತ್ತಾರೋ ಏನೋ!

ಭಯಂಕರ ಎನ್ನಿಸಿ ಎಚ್ಚರ ಆಯಿತು. ಮೈಯ್ಯಲ್ಲಿ ರು ಕಿತ್ತುಕೊಂಡು ಬರುತ್ತಿತ್ತು.


ಸಮಾಧಾನ ತಂದುಕೊಂಡು ಹಾಗೇ ಯೋಚಿಸದೆ: ವಿದ್ಯಾನಿಲಯಗಳು ಎಂತೆಂತಹವ್ರೋ ಪದವಿ ನೀಡ್ತವೆ. ಪದವಿ, ಡಾಕ್ಟರೇಟ್ ಪದವಿ, ಡಬ್ಬಲ್ ಡಾಕ್ಟರೇಟ್ ್ಯದಿ ಹಾಗೇನೆ....

ಐದು ಕೊಲೆ ಮಾಡಿದವರಿಗೆ- ಬ್ಯಾಚುಲರ್ ಆಫ್ ಿಸಲ್ಸ್

ಹತ್ತು ಕೊಲೆ ಮಾಡಿದವರಿಗೆ-ಮಾಸ್ಟರ್ ಆಫ್ ಿಸಲ್ಸ್

ಇಪ್ಪತ್ತು ಕೊಲೆ ಮಾಡಿದವರಿಗೆ-ಡಾಕ್ಟರ್ ಆಫ್ ಿಸಲ್ಸ್

ನಲವತ್ತು ಕೊಲೆ ಮಾಡಿದವರಿಗೆ-ಡಬ್ಬಲ್ ಡಾಕ್ಟರೇಟ್ ಈ ತರಹ ಪದವಿ ಪ್ರಧಾನ ಮಾಡುವುದನ್ನು ೀಚಿಸಬಹುದಲ್ಲವೆ....!! ■



'ಲಾಸ್ಟ್ ಎಂಪರರ್'

ಮರೆಯುವ ಮುನ್ನ



ಪಿ. ಲಂಕೇಶ್ ಡಿಸೆಂಬರ್ 18, 1988

ಈತ ಹುಟ್ಟುತ್ತಾನೆ. ಎಲ್ಲರಂತೆ, ಮುಖ ಮೊಣಕಾಲು ಮುಂದೆ ಮಾಡಿಕೊಂಡು. ನಮ್ಮೆಲ್ಲರಂತೆ ಕುಟುಂಬವೊಂದಕ್ಕೆ ಬರದೆ ಅರಮನೆಯಲ್ಲಿ ಜನಿಸುತ್ತಾನೆ. ಅರಮನೆಯೇ ಸೆರೆಮನೆಯಾಗುತ್ತಾ ಹೋಗುತ್ತದೆ. ಈತ ರಾಜಕುಮಾರ, ಈತ ಮನುಷ್ಯನಾಗಿ ನಿಮಿತ್ತ ಮಾತ್ರ. ಅರಮನೆ ಮತ್ತು ಅಲ್ಲಿಯ ಸಂಪ್ರದಾಯ ರಾಜತ್ವ ಕಲಿಸುತ್ತದೆ; ತನ್ನದೇ ಆದ ನುಡಿಕಟ್ಟು ಕೂಡ ಇಲ್ಲದಂತೆ ಬೆಳೆಯುತ್ತಾನೆ. ಈತನ ರಾಜ್ಯದಲ್ಲಿ ಆಳುತ್ತಿರುವ ರಾಜಮಾತೆ ರಾಜ್ಯವನ್ನು ಇವನಿಗೊಪ್ಪಿಸಿ ಸಾಯುತ್ತಾಳೆ. ದೊರೆ ಈತ. ಆದರೆ ಆಳುವವರು ರಾಷ್ಟ್ರದ ಪಾಳೇಗಾರರು. ಈತ ನೆಪಕ್ಕೆ ಮಾತ್ರ ರಾಜ. ನಾನು ರಾಜನೆಂದು ಹೇಳಿಕೊಂಡಾಗಲೆಲ್ಲಾ ಪಾಳೇಗಾರರು ಇವನಿಂದ ಅಧಿಕಾರ ಕಸಿದುಕೊಳ್ಳುತ್ತಾರೆ. ಇಬ್ಬರನ್ನು ಮದುವೆಯಾಗುತ್ತಾನೆ. ಅಲ್ಲಿ ಕೂಡ ಗಂಡನಲ್ಲ. ತನ್ನ ಬುಡಕಟ್ಟಿನ ರಾಜ್ಯ ಹುಡುಕಿಕೊಂಡು ಹೋಗುತ್ತಾನೆ. ಆದರೆ ಆ ರಾಜ್ಯ ಜಪಾನೀಯರ ಕೈಗೊಂಬೆಯಾಗಿದೆ. ಅಷ್ಟರಲ್ಲಿ ಚೈನಾದ ಕ್ರಾಂತಿ ಎಲ್ಲೆಲ್ಲೂ ಆವರಿಸಿದೆ. ಈತ ಎಲ್ಲದರಿಂದ ತಪ್ಪಿಸಿಕೊಳ್ಳಲೂ ಆಗುವುದಿಲ್ಲ. ಚೈನಾದ ಕ್ರಾಂತಿಕಾರರಿಂದ ಸೆರೆಹಿಡಿಯಲ್ಪಟ್ಟು ಅನೇಕ ವರ್ಷ ದೈಹಿಕ ದುಡಿಮೆಗೆ ಹಚ್ಚಲ್ಪಡುತ್ತಾನೆ. ಅವರು ಭೂತಕಾಲವನ್ನು ಮತ್ತೆಮತ್ತೆ ತಂದು ಅವನ ಮುಖಕ್ಕೆ ಎರಚುತ್ತಾರೆ.

ಕ್ರಾಂತಿ ಯಾವಾಗಲೂ ಜಡಗೊಂಡ ರಾಜ್ಯಕ್ಕೆ ಚಿಕಿತ್ಸೆ. ಆದರೆ ಕ್ರಾಂತಿ ಕೂಡ ಜಡಗೊಂಡು ಕ್ರೂರವಾಗುತ್ತದೆ. ರಾಜರ ಫ್ಯಾಸಿಸ್ಟ್ ವ್ಯವಸ್ಥೆಯ ವಿರುದ್ಧ ಹೋರಾಡಿ ಬಂದ ಕ್ರಾಂತಿ ತನ್ನದೇ ಫ್ಯಾಸಿಸ್ಟ್ ಗುಣ ಪಡೆದುಕೊಂಡು ಸಾಂಸ್ಕೃತಿಕ ಕ್ರಾಂತಿ-ಕಲ್ಚರಲ್ ರೆವಲ್ಯೂಶನ್ ಎಂಬ ಮುಖವಾಡದಲ್ಲಿ ಹಿಂಸಿಸತೊಡಗುತ್ತದೆ.

'ಲಾಸ್ಟ್ ಎಂಪರರ್' ಚಿತ್ರವನ್ನು ನೀವು ನೋಡಿರಬಹುದು. ಈ ಸಂಸಾರ ದುಃಖದಿಂದ ಕೂಡಿದ್ದು, ಈ ಜೀವನ ನೋವಿನಿಂದ, ಬಂಧನದಿಂದ ತುಂಬಿದ್ದು ಎಂಬುದನ್ನು ಹೇಳುವ ಚಿತ್ರ. ಮೋಕ್ಷ ಎನ್ನುವುದು ಒಳ್ಳೆಯದೆನ್ನಿಸುವುದು ಈ ಮೂಲಭೂತ ದುಃಖವನ್ನು ಕಂಡಾಗ.

ಫ್ಯಾಸಿಸಂ

ಮೇಲಿನದನ್ನು ಬೇಕೆಂತಲೇ ಸೂಚಿಸಿ ಇನ್ನೊಂದು ವಿಷಯಕ್ಕೆ ಬರುತ್ತೇನೆ. ಅದು ನಾವು ಮೊನ್ನೆ ಇಟ್ಟುಕೊಂಡಿದ್ದ ಚರ್ಚೆಯನ್ನು ಕುರಿತದ್ದು. ನಮ್ಮ ಜನ ಎಷ್ಟು ಒಳ್ಳೆಯವರು, ತಾಳ್ಮೆ ಮತ್ತು ಪ್ರೀತಿಯವರು ಎಂದರೆ, ಇಲ್ಲಿ ಫ್ಯಾಸಿಸ್ಟ್ ಎಂಬ ಪದಕ್ಕೆ ತಕ್ಕ ಪದವೇ ಇಲ್ಲ. ಪಾಳೇಗಾರಿಕೆ, ಜನದ್ರೋಹ, ಹಿಂಸೆ, ಅಂಧ ಪ್ರಚೋದನೆ ಮುಂತಾದ ಯಾವ ಮಾತೂ ಫ್ಯಾಸಿಸ್ಟ್ ಪದದ ಅರ್ಥ ನೀಡುವುದಿಲ್ಲ. ಇದಕ್ಕೆ ವಿರುದ್ಧವಾದ ಅರ್ಥ ಬರುವ ಉದಾರನೀತಿ, ಪ್ರಜಾಸತ್ತಾತ್ಮಕ ನಿಲುವು, ಸಮಾಜವಾದ ಮುಂತಾದವನ್ನು ನೋಡಿದರೆ ಈ ಪದದ ಅಪಾಯ ತಿಳಿದೀತು.

ಫ್ಯಾಸಿಸ್ಟ್ ಪದವನ್ನು ಮೊದಲು ಬಳಸಿದವನು ಮುಸೋಲಿನಿ, ಇಟಲಿಯ ನಾಯಕನೀತ. 1919ರಲ್ಲಿ ಈತ ಮೊದಲು ಬಳಸಿದ. ಯಾವನೇ ಒಬ್ಬ ನಾಯಕ ತನ್ನ ವ್ಯಕ್ತಿತ್ವವನ್ನು ವೈಭವೀಕರಿಸಿಕೊಂಡು ತನ್ನ ಅನುಯಾಯಿಗಳಲ್ಲಿ ವ್ಯಕ್ತಿಪೂಜೆ ಪ್ರೇರೇಪಿಸಿ ಜನರನ್ನು ಅವರ ಅತ್ಯಂತ ಕೀಳು ಕಾಮನೆಗಳನ್ನು ಉದ್ರೇಕಿಸುವುದರ ಮೂಲಕ ಅಧಿಕಾರಕ್ಕೆ ಬರಲು ಯತ್ನಿಸಿದರೆ ಆತ ಫ್ಯಾಸಿಸ್ಟ್. ಈ ನಾಯಕ ಮತ್ತು ಈತನ ಗುಂಪಿಗೆ ಸಿದ್ಧಾಂತವಾಗಲಿ, ಕಾರ್ಯಕ್ರಮವಾಗಲಿ, ಜನಪ್ರೇಮವಾಗಲಿ ಇರುವುದಿಲ್ಲ. ಇದಕ್ಕೆ ಚಿರಂತನ ಉದಾಹರಣೆ ಹಿಟ್ಲರ್. ಈತ ಜರ್ಮನಿಗೆ ಮೊದಲನೆ ಮಹಾಯುದ್ಧದಲ್ಲಿ ಆಗಿದ್ದ ಸೋಲು, ಅದರಿಂದ ಬಂದ ಬಡತನ, ನಿರುದ್ಯೋಗ, ಅವಮಾನವನ್ನೆಲ್ಲ ಬಳಸಿಕೊಂಡು ಯಹೂದ್ಯರ ವಿರುದ್ಧ, ಪರ ರಾಷ್ಟ್ರಗಳ ವಿರುದ್ಧ ಜನರನ್ನು ಪ್ರಚೋದಿಸಿದ. ಹತ್ತು ಸುಳ್ಳುಗಳ ಜೊತೆಗೆ ಒಂದು ನಿಜ ಸೇರಿಸಿ ಜರ್ಮನರಲ್ಲಿ ಕ್ರೋಧ ಹುಟ್ಟಿಸಿದ. ಜರ್ಮನ್ ಭಾಷೆ, ಸಂಸ್ಕೃತಿಯ, ಆರ್ಯನ್ ಪರಿಶುದ್ಧತೆಯ ಬಗ್ಗೆ ಬೊಗಳೆ ಬಿಟ್ಟ. ಜರ್ಮನರಲ್ಲಿ ಹುಸಿಕನಸು ಬಿತ್ತಿದ, ನಾಯಕನಾದ. ಹುಚ್ಚೆದ್ದ ಅನುಯಾಯಿಗಳ ನೆರವಿನಿಂದ ಲಕ್ಷಾಂತರ ಯಹೂದ್ಯರನ್ನು ಕೊಂದುಹಾಕಿದ, ಎರಡನೇ ಮಹಾಯುದ್ಧಕ್ಕೆ ಕಾರಣನಾಗಿ ಜರ್ಮನಿಯ ಅಸಂಖ್ಯಾತ ಜನ ಸಾಯಲು, ಜರ್ಮನಿ ನುಚ್ಚುನೂರಾಗಲು ಕಾರಣನಾದ.

ಇದು ಫ್ಯಾಸಿಸಂ. ಇದರ ಸ್ವರೂಪ ಮತ್ತು ಇದಕ್ಕೆ ವಿರುದ್ಧವಾದ ಉದಾರವಾದರೂ ಶಿಸ್ತುಳ್ಳ, ವರ್ಣರಂಜಿತವಲ್ಲದಿದ್ದರೂ ಜನರನ್ನು ಆರೋಗ್ಯವಾಗಿಡಬಲ್ಲ, ವ್ಯಕ್ತಿಯನ್ನು



ಮೀರಿದ ಸಿದ್ಧಾಂತ, ಕಾರ್ಯಕ್ರಮ ಪಡೆದ ಜನತಂತ್ರದ ಶೈಲಿ ಕುರಿತು ಚರ್ಚಿಸಿದೆವು.

ಇದನ್ನು ಬರೆಯುವಾಗಲೇ ಬೆಂಗಳೂರಿನ ಕುಂಬಾರಹಳ್ಳಿಯ ಐವರು ಯುವಕರು ಬಂದು ನನ್ನನ್ನು ಆಹ್ವಾನಿಸುತ್ತಿದ್ದಾರೆ; ತಮ್ಮ ಬಡಾವಣೆಯಲ್ಲಿ ಹೆಚ್ಚುತ್ತಿರುವ ಸುಳ್ಳರು, ಫ್ಯಾಸಿಸ್ಟರು, ಜನವಿರೋಧಿಗಳಾದ ಜನರ ಗುಂಪಿನ ಬಗ್ಗೆ ದೂರು ನೀಡುತ್ತಿದ್ದಾರೆ. ಪೆನ್ ಕೆಳಗಿಟ್ಟು ಕೂತು ಕೇಳುತ್ತೇನೆ.


ಹಳ್ಳಿ-ಹಣ

ನಮ್ಮ ಹಳ್ಳಿಗಳು ಯಾವ ಸ್ಥಿತಿಗೆ ಹೋಗಿವೆ! ಮೊನ್ನೆ ಚಳ್ಳಕೆರೆ ತಾಲ್ಲೂಕಿನ ನಾಲ್ಕು ಹಳ್ಳಿಗಳಲ್ಲಿ ಸಭೆ. ಒಬ್ಬ ಮಂಡಲ್ ಪ್ರಧಾನ ಬಂದಿದ್ದರು. ಹೆಸರು ರಾಜಶೇಖರಪ್ಪ. ಈತ ಮಾತಾಡುತ್ತಾ ಹೋದಂತೆ ನನಗೆ ಈತನ ಮಾತಿನ ನೋವು ತಟ್ಟತೊಡಗಿತು. ಮುಂಚೆ ತಿಂಗಳ ನಾಲ್ಕು ವಾರವೂ 'ಪತ್ರಿಕೆ'ಯನ್ನು ಕೊಂಡು ಓದುತ್ತಿದ್ದ ಈತ ಈಗ ಎರಡು ವಾರ ಬೇರೆಯವರಿಂದ ಕಡ ಪಡೆದು ಓದುತ್ತಾರಂತೆ. ಇನ್ನೊಬ್ಬ ರೈತನಾಯಕರು. ಚೇಡರೆಡ್ಡಿ ಹಳ್ಳಿಯ ಇವರ ಬಗ್ಗೆ ಒಮ್ಮೆ ಬರೆದಿದ್ದೇನೆ. ಇವರು ಧಾರವಾಡದ ಸಭೆಯೊಂದಕ್ಕೆ ಗೆಳೆಯರೊಂದಿಗೆ ಹೋಗಿದ್ದರಂತೆ. ಬರುವಾಗ ಬಸ್ಸಿಗೆ ಹಣ ಸಾಲಲಿಲ್ಲ. ಲಾರಿಯಲ್ಲಿ ಕೂತರು. ಲಾರಿ ಅಪಘಾತದಲ್ಲಿ ಸಿಕ್ಕಿಹಾಕಿಕೊಂಡು ಇವರ ಗೆಳೆಯರಿಬ್ಬರು ತೀವ್ರವಾಗಿ ಗಾಯಗೊಂಡರು. ಹಾಗೆ ನೋಡಿದರೆ ಈತ ಲಾರಿಯಲ್ಲಿ ಓಡಾಡುವಷ್ಟು ಬಡವರಲ್ಲ, ಮೂವತ್ತೆಕರೆ ಜಮೀನಿದೆ. ಆದರೆ ಕೃಷಿ ಲಾಭದಾಯಕವಾಗಿಲ್ಲ.

ಇನ್ನೊಂದು ಹಳ್ಳಿಯ ಹೆಸರು ಮೀರಾಸಾಬಿಹಳ್ಳಿ. ಇಲ್ಲಿ ಸಾಬರೇ ಕಡಿಮೆ. ಸಭೆಯಲ್ಲಿದ್ದ ಜನರನ್ನು ನೋಡಿದರೆ, ಅವರ ಬಡತನ, ಅಸಹಾಯಕತೆ ಗೊತ್ತಾಗುತ್ತದೆ. ಸಭೆಯಲ್ಲಿದ್ದ ಒಬ್ಬ ಸ್ವಲ್ಪ ಕುಡಿದಿದ್ದರೂ ಮುಪ್ಪಿನ ಜೀವವಾದ್ದರಿಂದ ತೂರಾಡತೊಡಗಿದ್ದ. ನನ್ನನ್ನು ಕಂಡೊಡನೆ, ಹಲವಾರು ಪುಢಾರಿಗಳು ಬುರುಡೆ ಬಿಡುತ್ತಿದ್ದುದು ನೋಡಿದೊಡನೆ 'ನಾನು ನಾಲ್ಕು ಮಾತಾಡಬೇಕು' ಅಂದ. ವ್ಯವಸ್ಥಾಪಕರು 'ಬೇಡ' ಅಂದರು. ನಾನು 'ಮಾತಾಡಿ ಪರವಾಗಿಲ್ಲ' ಅಂದೆ. ಈತ ನಿಜಕ್ಕೂ ಅತ್ಯುತ್ತಮ ಭಾಷಣ ಮಾಡಿದ. ಹರಿಜನರ ಈತ ಗಾರೆ ಕೆಲಸ ಮಾಡುವವನು. ತನ್ನಂಥ ಹತ್ತಾರು ಬಡ ಕುಟುಂಬಗಳು ಸರ್ಕಾರದಿಂದ ವಂಚಿತರಾಗಿ, ಅಂಗೈ ಅಗಲ ನೆಲಕ್ಕಾಗಿ ಹತ್ತಾರು ವರ್ಷ ಪರದಾಡಿದ ನೋವನ್ನು ಹೇಳಿದ. ಚಿತ್ರದುರ್ಗ ಪಡೆದ ಅತ್ಯುತ್ತಮ



ಜಿಲ್ಲಾಧಿಕಾರಿಗಳಲ್ಲಿ ಒಬ್ಬರಾದ ಕೋಟಿಯವರು ಕೂಡ ಇವರಿಗೆ ನೆರವಾಗಲಾಗಲಿಲ್ಲ. ತನ್ನ ನೋವನ್ನೆಲ್ಲ ತೋಡಿಕೊಂಡ ಈತ (ಹೆಸರು ನರಸಿಂಹಯ್ಯ ಎಂದು ನೆನಪು) ತಾನು 'ಪತ್ರಿಕೆ' ಓದಲು ಪಟ್ಟ ಕಷ್ಟವನ್ನೆಲ್ಲ ಹೇಳಿದ. ಪತ್ರಿಕೆಯಿಂದ ಆದದ್ದು ಮತ್ತು ನಿರೀಕ್ಷೆಯನ್ನೆಲ್ಲ ಹೇಳಿದ. ನನ್ನ ಕಣ್ಣು ಕಂಬನಿಯಿಂದ ಮಂಜಾದವು.



ತಾಯಿ ದೊರಕುತ್ತಾಳೆ
ಇಲ್ಲಿ ಅಗ್ಗದ ದರದಲ್ಲಿ
ತಾಯಿಯ ತಾಯ್ತನ ಬಂದಿತು
ವ್ಯಾಪಾರೀಕರಣದ ಕಕ್ಷೆಗೆ
ಜಾಗತೀಕರಣದ ಉದ್ಯಮಕೆ.

ತಾಯಿಯ ಗರ್ಭವೂ ಬಿಡದೆ
ಮಾರುಕಟ್ಟೆಗೆ ತಂದಿದ್ದೇವೆ
ದುಡ್ಡಿನ ಧಣಿಗಳೇ ಬನ್ನಿ
ಮಾರಾಟದ ಬೋಲಿಗಳನು
ಎಗ್ಗಿಲ್ಲದೆ ಕೂಗಬನ್ನಿ.

ಹರಿದು ಬಂದವು ಮಾರುಕಟ್ಟೆಗೆ
ಹಲವು ಹದಿನಾರು ಉದ್ಯೋಗಗಳು
ಹೊಸದೊಂದು ಸೇರ್ಪಡೆ ಅದಕೆ
ಗರ್ಭಕೋಶದ ಉದ್ಯಮ.

ಅಗ್ಗದ ದರದಲ್ಲಿ ಸಿಕ್ಕುತ್ತಾರೆ
ಮಾರುಕಟ್ಟೆಯಲ್ಲಿ ಮಾತೆಯರು
ವಿದೇಶಿ ಗ್ರಾಹಕರಿಗಾಗಿಯೇ
ಇದಾರಿಲ್ಲಿ ಅಗ್ಗದ ತಾಯಂದಿರು.

ಹೊಸದೊಂದು ದಂಧೆಯಾಗಿ
ಬಾಡಿಗೆಯ ತಾಯ್ತನ
ಸಂತಾನೋದ್ಯಮದ ಕೆಲಸ
ಸಂತಾನಹೀನರಿಗೆ ಆಕರ್ಷಕ ತಾಣ.

ಧರ್ಮದ ಠೇಕೇದಾರರೇ ಬನ್ನಿ
ಮಾತೃದೇವೋಭವದ ನಾಡಿನಲಿ
ತುತ್ತಿನ ಚೀಲ ತುಂಬಿಕೊಳ್ಳಲು
ತಾಯ್ತನ ಮಾರಾಟಕ್ಕಿದೆ ಬನ್ನಿ.

■ ಕೆ. ಷರೀಫಾ
ಹರಿಹರ

ನೂಲಿನಂತೆ ಸೀರೆ, ರಾಜನಂತೆ ಪ್ರಜೆಗಳು, ಮುಖ್ಯಮಂತ್ರಿಯಂತೆ....?

ಕಣ್ಣಾ ಮುಚ್ಚಾಲೆ

ವಿ.ಎನ್.ಶ್ರೀವತ್ಸ, ಬೆಂಗಳೂರು

ಮದುವೆಯ ನಂತರದ ಜೀವನವೇ ವಂಡರ್‌ಫುಲ್ ಆಗಿದೆ ಎಂದು ಐಶ್ವರ್ಯ ರೈ ಇತ್ತೀಚೆಗೆ ಹೇಳಿ ಬಿಟ್ಟಳಲ್ಲಾ?

◆ ಹನಿಮೂನ್ ಇನ್ನೂ ಮುಗಿದಿಲ್ಲ ಎಂದರ್ಥ!

ರಾಂಚಂದ್ರಕೊಪ್ಪಲು, ಅರಳಾಪುರ

ವಾಟಾಳ್‌ರ ಕನ್ನಡಕವನ್ನು, ಎಸ್ಸೆಂ ಕೃಷ್ಣರ ವಿಗ್‌ನ್ನು ದೇವೇಗೌಡ್ರಿಗೆ ಹಾಕಿದ್ರೆ ಹ್ಯಾಗಿರುತ್ತೆ...?

◆ ಅದರ ಜೊತೆ ಚೆನ್ನಿಗಪ್ಪನ ಡೈಲಾಗುಗಳನ್ನು. ಕುಮಾರಸ್ವಾಮಿಯ ದೌಲತ್ತನ್ನೂ ಹಾಕಿದರೆ ಸಕತ್ತಾಗಿರುತ್ತೆ!

ಮಂಚಾಲಿ ಗುರುರಾಜಚಾರು, ಬಳ್ಳಾರಿ

ರೇಣುಕಾಚಾರ್ಯ ಮತ್ತು ಜಯಲಕ್ಷ್ಮೀ ಪ್ರಸಂಗವನ್ನು ಧಾರಾವಾಹಿ ಮಾಡಿದರೆ?

◆ ನಿರ್ದೇಶಕನಿಗೆ ಸಾರಿಡಾನ್ ಸಪ್ಲೈ ಮಾಡಲು ಎಲ್ಲರೂ ಸಿದ್ಧರಾಗಬೇಕು.

ಎಸ್. ಶಶಿಧರ, ದಾವಣಗೆರೆ

ರಾಜಕಾರಣಿಗಳಿಗೆ ಆಸ್ತಿ ಮಾಡಿಕೊಳ್ಳುವಾಗ ಇರುವ ಅವಸರ ಆಸ್ತಿ ವಿವರ ನೀಡುವಾಗ ಏಕಿರುವುದಿಲ್ಲ?

◆ ರಾಮ-ಕೃಷ್ಣ ಲೆಕ್ಕದಲ್ಲಿ ಸ್ವಲ್ಪ ಗೊಂದಲ ವಾಗಿರುತ್ತದೆ.

ಡಿ.ಎಲ್.ಚಂದ್ರಿಕಾ, ಹರಪನಹಳ್ಳಿ

ಕುಮಾರಣ್ಣ ರಾಮನಾದರೆ, ಯಡ್ಡಿ?

◆ ಶಬರಿಯ ತದ್ರೂಪಿ!

ಡಿ.ಎಲ್.ಸುರೇಶ್, ಹರಪನಹಳ್ಳಿ

ಉತ್ತರ 'ಕುಮಾರ'ನ ಪೌರುಷ ಎಲ್ಲಿಯವರೆಗೆ?

◆ ಮಹಿಮಾನಂತಹ ಪೆದ್ದರು ಆತನ ಹಿಂದೆ ಇರುವ ತನಕ.

ಖಲಂದರ್ ಅಜೀಜ್, ಜಾವಗಲ್

ಒಳ್ಳೆಯವರೆಲ್ಲಾ ಎಲ್ಲಿ ಹೋದರು?

◆ ಕೆಟ್ಟದ್ದು ಕಾಣಲಾರದ ಆರದಿ ಮೂರದಿ ಜಾಗಕ್ಕೆ.

ಡಿ.ಎಲ್. ನಾಗರಾಜ್, ಹರಪನಹಳ್ಳಿ

ಆಳುವ ಗಂಡಸಿಗೆ ಆರು ಹೆಂಡತಿಯರು ಎಂಬ ಗಾದೆಯೇ ಇರುವಾಗ ಕುಮ್ಮಿಯ ಚನ್ನವೀಡು ಬಗ್ಗೆ ಯಾಕಿಷ್ಟು ಕುತೂಹಲ?

◆ ಆತ ಆಳುವವನಲ್ಲ, ಬದಲಾಗಿ ನಮ್ಮೆಲ್ಲರ ಸೇವಕ ಅದಕ್ಕೆ.

ಕವಿತಾ ಮಧುಸೂದನ್, ದಾವಣಗೆರೆ

ತಮ್ಮ ಪಂಚೆ ಪ್ರಕರಣವನ್ನು ಮರು ಪರಿಶೀಲಿಸುವಂತೆ ಪುನರೂರು ಅರ್ಜಿ ಸಲ್ಲಿಸುತ್ತಾರೆಯೇ?

◆ ಸಾಕ್ಷಿ ನೀಡುವವರೇ ಇಲ್ಲದಿರುವಾಗ ಪಂಚೆಯುದಿಯಲ್ಲಿವುದರ ಬಗ್ಗೆ ಯಾರು ಮರು ಪರಿಶೀಲಿಸಿಯಾರು?

ಉಮಾ ಗುರುರಾಜಚಾರು, ಬಳ್ಳಾರಿ

ಮೂವರು ಮಹಿಳೆಯರು ಸೇರಿದರೆ ಮಾತು, ಮೂರು ನದಿಗಳು ಸೇರಿದರೆ ಸಂಗಮ, ಮೂವರು ರಾಜಕಾರಣಿ ಗಳು ಸೇರಿದರೆ?

◆ ಬಿಸಿಬೇಳೆ ಬಾತ್ ಸರ್ಕಾರ.

ಎಂ. ವಿಕ್ರಂಪಾಷ, ಕೊಳ್ಳೇಗಾಲ

ನಮ್ಮ ಸಿಎಂಗೆ ಜಾತ್ಯತೀತ ಅರ್ಥ ಈಗ ಆಗಿದೆಯಂತೆ?

◆ ಯಾವ ಬೋಧಿವೃಕ್ಷದಡಿ ಜ್ಞಾನೋದಯವಾಯಿತು ಅಂತ ನಾವಂತೂ ಹುಡುಕುತ್ತಿಲ್ಲ ಬಿಡಿ.

ಬಹುಮಾನಿತ ಪ್ರಶ್ನೆ

ಡಿ.ಎಲ್.ಶ್ವೇತಾ, ಹರಪನಹಳ್ಳಿ

ನೂಲಿನಂತೆ ಸೀರೆ, ರಾಜನಂತೆ ಪ್ರಜೆಗಳು, ಮುಖ್ಯಮಂತ್ರಿಯಂತೆ....?

◆ ಅವರ ವಂಶ.



ಟಿ.ಯು.ಕುಮಾರ, ರಾಮದುರ್ಗ

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಒದೆ ಕೊಟ್ಟವರಾರು?

◆ ಒದೆ ಕೊಡಲಿರುವುದು *BSP.*

ಅಳ್ಳಿಮಾರನಹಳ್ಳಿ ಹರೀಶ್, ಗಾಣಾಳು

ಕುಮಾರಣ್ಣನ ಪ್ರಕಾರ ಹೆಣ್ಣೆಂಗಸು ಅಂದ್ರೆ ಯಾರು?

◆ ಅವರ ಕಣ್ಣಿಗೆ ಹಲವು ಗಂಡಸರೂ ಹೆಂಗಸರಂತೆ ಕಂಡಿರುವುದರಿಂದ ಹೆಣ್ಣು + ಹೆಂಗಸು ಎರಡನ್ನೂ ಸೇರಿಸಿ ಹೆಣ್ಣೆಂಗಸು ಎಂದಿರಬಹುದು.

ವಾರದ ಪ್ರಶ್ನೆ:

ರೇಣುಕಾಚಾರ್ಯನನ್ನು ಚೆಡ್ಡಿಗಳು ಇನ್ನೂ ಯಾಕೆ ಸಸ್ಪೆಂಡ್ ಮಾಡಿಲ್ಲ?

ಮೇ 23ರ ಸಂಚಿಕೆಯ ನಮ್ಮ ಪ್ರಶ್ನೆ: ಪುನರೂರರ ಪಂಚೆ ಎಳೆದದ್ದು ಯಾರು?

ನಿಮ್ಮ ಉತ್ತರ: ಪಂಚೆ ಎಳೆದದ್ದು ಯಾರೇ ಇರಲಿ. ಒಳಗೆ ಚೆಡ್ಡಿ ಇತ್ತೆಂಬುದೇ ನೆಮ್ಮದಿಯ ವಿಷಯ!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ.ಎಸ್. ರಾಜಲಕ್ಷ್ಮಿ, ಬೆಂಗಳೂರು

ಕೋಮುವಾದಿ, ಕುಟುಂಬವಾದಿ ಪಕ್ಷಗಳಿಗೆ ಪರ್ಯಾಯ


ತ್ರೆ ಹೊಗಳಿಕೆ ಟೀಕೆ

ಸೆಂಪನ್ಮೂಲಭರಿತ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆ ಮತ್ತು ಭಾಜಪ, ಗೂಂಡಾಗಿರಿಯನ್ನೇ ಸರ್ಕಾರೀಕರಣ ಗೊಳಿಸಿದ ಮುಲಾಯಂಸಿಂಗ್ ಯಾದವ್, ಇವರುಗಳನ್ನು ಸೋಲಿಸಿ ಜಯಭೇರಿ ಬಾರಿಸಿರುವ ಮಾಯಾವತಿಯವರು ನಿಜಕ್ಕೂ ಅಭಿನಂದನಾರ್ಹರು. ನೀವು ಹೇಳಿರುವಂತೆ ಕರ್ನಾಟಕದಲ್ಲಿಯೂ ಬಿಎಸ್‌ಪಿಗೆ ಅವಕಾಶಗಳಿವೆ ಮತ್ತು ಅದಕ್ಕೊಂದು ಕರ್ನಾಟಕದಲ್ಲಿ ಪ್ರಭಾವಿ ನಾಯಕನೊಬ್ಬನ ಅವಶ್ಯಕತೆಯೂ ಇದೆ.

ಸಿ.ಎಂ. ಇಬ್ರಾಹಿಂ, ಇಂದಿರಾ ಗಾಂಧಿಯವರನ್ನು ಬಯ್ಯುತ್ತಿದ್ದಂತೆ ಸಿದ್ದರಾಮಯ್ಯನವರು ದೇವೇಗೌಡರನ್ನು ಬಯ್ಯುವುದೊಂದನ್ನೇ ಸಿಂಗಲ್ ಪಾಯಿಂಟ್ ಪ್ರೋಗ್ರಾಂ ಮಾಡಿಕೊಳ್ಳದೆ, ಬೆನ್ನೆಲುಬಿಲ್ಲದ ಅಸಂಖ್ಯಾತ ನಾಯಕರಿರುವ ಕಾಂಗ್ರೆಯನ್ನು ತೊರೆದು ಬಿಎಸ್‌ಪಿಗೆ ಹೋಗುವುದು ಒಳಿತು. ಇದರಿಂದ ಬಿಎಸ್‌ಪಿ ಮತ್ತು ಸಿದ್ದರಾಮಯ್ಯ ಇಬ್ಬರಿಗೂ ಒಳ್ಳೆಯದಾಗುತ್ತದೆ. ರಾಜ್ಯ ಬಿಎಸ್‌ಪಿ ನಾಯಕರಾದ ಗೋಪಾಲ್ ಮತ್ತು ಮುನಿಯಪ್ಪನವರು ಹೃತ್ಪೂರ್ವಕವಾಗಿ ಸಿದ್ದರಾಮಯ್ಯನವರನ್ನು ಬಿಎಸ್‌ಪಿಗೆ ಸ್ವಾಗತಿಸಿ, ಈ ಮೂವರೂ ಒಟ್ಟಿಗೆ ಕೈಜೋಡಿಸಿ ಈಗಿನಿಂದಲೇ ಕಾರ್ಯಪ್ರವೃತ್ತರಾದರೆ ಮುಂದಿನ ಚುನಾವಣೆಯಲ್ಲಿ ಕರ್ನಾಟಕದ ಮತದಾರ ಬಿಎಸ್‌ಪಿಯ ಕೈ ಹಿಡಿಯುವುದು ಖಂಡಿತ. ಭ್ರಷ್ಟ ಕಾಂಗ್ರೆ, ಕೋಮುವಾದಿ ಭಾಜಪ ಮತ್ತು ಕುಟುಂಬವಾದಿ ಜೆಡಿಎಸ್‌ಗಳ ವರಸೆಗಳನ್ನೆಲ್ಲಾ ನೋಡಿರುವ ಈ ರಾಜ್ಯದ ಮತದಾರರಿಗೆ ಬಿಎಸ್‌ಪಿ ಹೊರೆಯೇನೂ ಆಗಲಾರದು. ಸಿದ್ದರಾಮಯ್ಯ ಕಾಂಗ್ರೆಸ್‌ನಲ್ಲಿಯೇ ಮುಂದುವರೆದರೆ ಹತ್ತು ಹೌದಪ್ಪಗಳ ಜೊತೆ ಹನ್ನೊಂದನೆಯವರಾಗುತ್ತಾರಷ್ಟೆ.

-ಎಸ್.ಎಸ್. ವೆಂಕಟೇಶ್,

ಸೊಂದೇಕೊಪ್ಪ



ಮೇ 23ರ ಸಂಚಿಕೆಯ ಮುಖಪುಟ ವಿಶೇಷವಾಗಿತ್ತು, ರಾಜ್ಯ ರಾಜಕೀಯದ ಸುದ್ದಿ ಹೊತ್ತ ನಮ್ಮ 'ಲಂಕೇಶ್' ವಿಭಿನ್ನವಾಗಿದ್ದು ಸಿದ್ದುರವರಿಗೆ ಆದ ಅನ್ಯಾಯ, ಕಾಂಗ್ರೆಸ್ ನಾಯಕರ ಅಧಿಕಾರ ಲಾಲಸೆ, ದುರ್ಬುದ್ಧಿ, ಅವಿವೇಕ, ಕಾಲೆಳೆಯುವ ತಂತ್ರವನ್ನೆಲ್ಲ ಬಯಲಿಗೆಳೆದಿತ್ತು.

ಶಿವಸುಂದರ್‌ರವರ ಲೇಖನ '1857ರ ಮಹಾ ಸಂಗ್ರಾಮ 1947 ಮಹಾದ್ರೋಹ'- ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಅದೆಷ್ಟೋ ವಿಚಾರಗಳನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಿದರು. ಅಂದು ನಮ್ಮ ಹಿರಿಯರು ಬ್ರಿಟಿಷರ ವಸಾಹತುಶಾಹಿ, ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟ ನಡೆಸಿದ್ದರು. ಇಂದು ನಾವುಗಳು ಜಾಗತೀಕರಣ ಮತ್ತು ಉದಾರೀಕರಣ ವಿರುದ್ಧ ಹೋರಾಡಬೇಕಾಗಿರುವುದು ವಿಪರ್ಯಾಸ. ಇದು ನಮ್ಮ ಪ್ರಜಾಪ್ರತಿನಿಧಿಗಳ ಕೊಡುಗೆ.

-ಡಿ.ಎಲ್. ಮಂಜು,

ಕೇರಳ

ಬಿಎಸ್‌ಪಿ ಪಾರ್ಟಿ ಒಂದು ರಾಷ್ಟ್ರೀಯ ಪಕ್ಷವಾಗಿದ್ದರೂ, ನಮ್ಮ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಅದನ್ನು ಒಂದು ರೀಜನಲ್ ಪಾರ್ಟಿ ಎಂದು ಹೇಳಿರುವುದು ಅವರ ಅಜ್ಞಾನಕ್ಕೆ ಹಿಡಿದ ಇನ್ನೊಂದು ಕನ್ನಡಿ.

-ಓದುಗ



ಈ ಪತ್ರ ಬರೆಯಲು ಕಾರಣವೇನೆಂದರೆ ಹಿಂದೂ ಸಮಾಜದಲ್ಲಿ ಮೇಲು-ಕೀಳು ಭಾವನೆ ಇದೆ, ದಲಿತರ ಮೇಲೆ ದಬ್ಬಾಳಿಕೆ ನಡೆಯುತ್ತದೆ ಎಂಬುದನ್ನು ಬರೆಯುತ್ತೀರಿ. ಅದರೆ ಮುಸ್ಲಿಮರಲ್ಲೂ ಮೇಲು-ಕೀಳು ಭಾವನೆ ಇದೆ ಎಂದು ನೀವು ಯಾಕೆ ಬರೆಯುವುದಿಲ್ಲಾ?

ವಿದೇಶದಲ್ಲಿ ಶಿಯಾ-ಸುನ್ನಿ ಎಂದು ಬೀದಿ ನಾಯಿಗಳ ತರ ಕಚ್ಚಾಡುತ್ತಾರೆ. ಭಾರತದಲ್ಲಿ ನದಾಫ, ಭಾಗವಾನ, ದರವೇಶಿ, ಸುನ್ನಿ, ಶೀಯಾ, ಚಪ್ಪರಬಂದ ಇತ್ಯಾದಿ ಜಾತಿಗಳೆಂದು ಜಗಳವಾಡುತ್ತಾರೆ.

ನಾನೊಬ್ಬ ನದಾಫ ಸಮುದಾಯಕ್ಕೆ ಸೇರಿದವನು. ಅದಕ್ಕಾಗಿ ಎಲ್ಲಾ ಮುಸ್ಲಿಮರು ನನ್ನನ್ನು ಅಯೋಗ್ಯ, ನಾಲಾಯಕ್ ಎಂದು ಬಯ್ಯುತ್ತಾರೆ.

ಇಸ್ಲಾಮ್ ಧರ್ಮ ಸ್ವೀಕರಿಸುವವರು ಮುಸ್ಲಿಮರು, ಉಳಿದವರು ಕಾಫೀರರು ಎಂದು ಪ್ರವಾದಿ ಮೊಹಮದರು ಪ್ರತಿಪಾದಿಸುತ್ತಾರೆ. ಹಾಗೆಯೇ ಕಾಫೀರರನ್ನು ಗೌರವ ಮನೋಭಾವದಿಂದ ಕಾಣಬೇಕೆಂದೂ ಹೇಳುತ್ತಾರೆ.

ಹುತಾತ್ಮನ ರಕ್ತಕ್ಕಿಂತ ಕವಿ ಲೇಖನಿ (ಪೆನ್) ದೊಡ್ಡದು ಎಂದು ಹೇಳಿದ್ದಾರೆ.

ಆದರೆ ಇಲ್ಲಿನ ಮುಸ್ಲಿಮರು ಪರಸ್ಪರ ದ್ವೇಷ ಮತ್ತು ಹಿಂಸೆಯನ್ನೇ ಪ್ರಮುಖ ಉದ್ಯೋಗ ಮಾಡಿಕೊಂಡಿರುವುದು ದುರದೃಷ್ಟಕರವಾಗಿದೆ.

ಹಿಂದೂ ಧರ್ಮದಲ್ಲಿದ್ದಂತೆ ಮುಸ್ಲಿಮ್ ಧರ್ಮದಲ್ಲೂ ಉಸಿರು ಕಟ್ಟುವ ವಾತಾವರಣವಿದೆ. ಮುಸ್ಲಿಮರ ಬಾಹ್ಯ ಮತ್ತು ಆಂತರಿಕ ದಬ್ಬಾಳಿಕೆಯಿಂದ ಇಡೀ ಸಮುದಾಯದ ಜನ ರೋಸಿಹೋಗಿದ್ದಾರೆ.

-ಅಬ್ದುಲ್ ರೆಹಮಾನ್,

ಬಿಜಾಪುರ

ಅದು ಬಸವ ಜಯಂತಿ ಆಚರಣೆಯ ಸಂದರ್ಭ. ಇದೇ ಸಮಯದಲ್ಲಿ ಲೇಖಕ ಡಾ. ಬಂಜಗೆರೆ ಜಯಪ್ರಕಾಶರ 'ಅನುದೇವಾ ಹೊರಗಣವನು...' ಎಂಬ ಕೃತಿ ಒಳ್ಳೆ ಸುದ್ದಿ ಮಾಡಿತ್ತು. ಕುತೂಹಲಕ್ಕಾಗಿ 'ಲಂಕೇಶ್' ಕಚೇರಿಯಿಂದ ಅದನ್ನು ತರಿಸಿ ಓದಿದೆ. ಸಾಹಿತ್ಯದ ವಿದ್ಯಾರ್ಥಿ ಹಾಗೂ ವಚನ ಸಾಹಿತ್ಯದ ಮಗನಾದ ನನಗೆ ಹೊಳೆದದ್ದು ಇಷ್ಟು:

ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆ ಮಾಡಿರುವ ಲೇಖಕರು ಒಂದು 'ಅನುಮಾನಿತ ಸತ್ಯ'ದ ಬೆನ್ನು ಹತ್ತಿ ಬಸವಣ್ಣ ಮಾದಿಗ ಜಾತಿಗೆ ಸೇರಿದವನು ಎಂಬ ಸತ್ಯವನ್ನು ಕಾಣಲು ಸಾಕಷ್ಟು ಹೆಣಗಾಡಿದ್ದಾರೆಂದೆನಿಸುತ್ತದೆ. ಬಸವಣ್ಣ ಮಾದಿರಾಜನ 'ಮನೆ ಮಗ' ಎಂದು ಹೇಳಲು ಅವರು ನೀಡಿರುವ ಮರುಳಸಿದ್ಧರ ಕಥೆ, ಮಾದಪ್ಪನ ಕಥೆ, ಕಾಡುಗೊಲ್ಲರ ಜುಂಜಪ್ಪನ ಕಥೆ ಮುಂತಾದವುಗಳು ಸಹ ಪೌರಾಣಿಕ ಕಥೆಗಳು ಹಾಗೂ ಮೌಖಿಕ ಕಾವ್ಯಗಳು ಎಂದಾದ ಮೇಲೆ ಬಸವಣ್ಣನವರ ಜಾತಿ ವಿಷಯದಲ್ಲಿ ಅವರು ತರ್ಕ ಮಾಡಿರುವ ಬಾಲ ಬಸಪ್ಪಗಳು ಸಹ ಎಷ್ಟರಮಟ್ಟಿಗೆ ಸತ್ಯ!



ಈ ಹಿಂದೆ ಬಸವಣ್ಣನನ್ನು ಅಕ್ಕಸಾಲಿಗರು, ಕುರುಬರ ಜಾತಿಗೆ ಸೇರಿದವರು ಎಂದು ಸಂಶೋಧಿಸಿದಂತೆ ಬಂಜಗೆರೆಯವರು ಇದೀಗ ಆತ ಮಾದಿಗ ಜಾತಿಗೆ ಸೇರಿದ್ದಾನೆ ಎಂದಿದ್ದಾರಷ್ಟೆ!

-ಶಿವರಂಜನ್ ಸತ್ಯಂಪೇಟೆ,

ಗುಲ್ಬರ್ಗಾ


ಕಳೆದ ವಾರದ ತಮ್ಮ ಸಂಚಿಕೆಯ 'ಕಂಡಹಾಗೆ' ಬಹಳ ಮನಮುಟ್ಟುವಂತಿತ್ತು.

ಛತ್ತೀಸ್‌ಘಡದ ಬಿನಾಯಕ್ ಸೇನ್‌ರವರ ಮೇಲೆ ಅಲ್ಲಿನ ಸರ್ಕಾರ ಇಲ್ಲದ ಆರೋಪಗಳನ್ನು ಹೊರಿಸಿ ಅವರನ್ನು ಜೈಲಿಗೆ ಕಳುಹಿಸಿದ ಪ್ರಕರಣವನ್ನು ಓದಿ ಬಹಳ ಬೇಸರವಾಯಿತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪರವಾಗಿ ದನಿಯೆತ್ತಿದ ಮಾತ್ರಕ್ಕೆ ಅವರನ್ನು ಈ ರೀತಿ ಶೋಷಣೆಗೀಡುಮಾಡಿರುವುದು ನಿಜಕ್ಕೂ ಖಂಡನಾರ್ಹ.

ನಿರಂಜನ್, ಹುಣಸನಹಳ್ಳಿ

ನಾನು ಕಟ್ಟಿಸುತ್ತಿದ್ದ ಹೊಸ ಮನೆಯನ್ನು ನೋಡಿದ ನಂತರ ಅಪ್ಪಾಜಿ "ಕಂದಾ, ನೀನು ಚೆನ್ನಾಗಿರ್ತೀಯ.... ನೀನು, ನಿನ್ನ ಹೆಂಡ್ತಿ, ಮಕ್ಕಳು ಚೆನ್ನಾಗಿರ್ತೀರ. ನೀವು ಜೀವನದುದ್ದಕ್ಕೂ ಹಿಂಗೇ ಇರ್ತೀರ. ರಾಜನ ತರಹ... ರಾಜಕುಮಾರನ ತರಹ ನೀನು ಇರ್ತಿಯ" ಎಂದು ಹಾರೈಸಿದರು. ಇದು ನನ್ನ ಜೀವನದಲ್ಲಿ ನನ್ನ ಅಪ್ಪಾಜಿ ನನಗೆ ಹೇಳಿದ ಕೊನೆಯ ಮಾತು!!


ಅಪ್ಪಾಜಿ ನನಗೆ ಹೇಳಿದ ಕೊನೇ ಮಾತು...



ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಸಹೋದರನ ...ನದಿಂದ ಅಪ್ಪಾಜಿ ಜರ್ಜರಿತರಾದರು; ಮೌನವಾದರು. ...ಪತ್ರೆಯಲ್ಲಿ ಸಹೋದರನ ಪಾರ್ಥೀವ ಶರೀರವನ್ನು ...ಡಿದಾಕ್ಷಣ "ನನ್ನನ್ನು ಬಿಟ್ಟು ಹೋಗ್ಬಿಟ್ಯಾ....." ಎಂದು ...ದೇ ಸಮನೆ ಅತ್ತರಂತೆ. ಆದಾದ ನಂತರ ...ದೆಷ್ಟೋ ಹೊತ್ತು ಅವರು ಯಾರೊಂದಿ... ಮಾತನಾಡಲಿಲ್ಲ, ರಾತ್ರಿಯೂ ಅಷ್ಟೇ, ...ನೆಯಲ್ಲಿ ಮೌನವಾಗಿ, ಏಕಾಂಗಿಯಾಗಿ ...ಲ ಕಳೆದರು.

ಇಂಥ ಸಂದರ್ಭದಲ್ಲಿ ಅವರ ಹಿರಿಯ ...ಗನಾಗಿ ಅವರ ಜೊತೆ ಒಂದೆರಡು ...ನಗಳ ಕಾಲ ಇದ್ದು ಸಾಂತ್ವನ ಹೇಳು...ದು ನನ್ನ ಕರ್ತವ್ಯ ಎಂದು ಭಾವಿಸಿದೆ. ...ದರೆ ಜೈಪುರದಲ್ಲಿ ಸಾವಿರಾರು ಜನ ... ಒಬ್ಬನ ಆಗಮನಕ್ಕಾಗಿ ಕಾದು...ತಿದ್ದರು. ಅಪ್ಪನ ಜೊತೆ ಇರಲಾ? ...ಥವಾ ಕಾಯಕವೇ ಕೈಲಾಸ ...ದು ಜೈಪುರಕ್ಕೆ ಮರಳಿ ...ೋಗಲಾ? ಎಂಬ ತಳಮಳ ...ಳಗಾದೆ.

ಆಗ ಅಪ್ಪಾಜಿ ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ...ಳಿದ್ದ ಮಾತುಗಳು ನೆನಪಾದವು. "ಅನ್ನ ಕೊಡುವ ...ರ್ಮಾಪಕರಿಗೆ ನಮ್ಮಿಂದ ಯಾವುದೇ ತೊಂದರೆ ...ಬಾರದು" ಎಂಬ ಮಾತುಗಳು ಅವು, ಅಂದೇ ...ತ್ರಿ ಅಪ್ಪಾಜಿಯವರೊಂದಿಗೆ ಮಾತನಾಡಿ "ಅಪ್ಪಾಜಿ ...ೆ ನಾನು ಜೈಪುರಕ್ಕೆ ಶೂಟಿಂಗಿಗೆ ಹೊರಡಲಾ?" ...ದು ಕೇಳಿದೆ. ಆಗ ಅವರು "ಹೌದೌದು ಕಂದಾ, ...ನು ಮೊದಲು ಶೂಟಿಂಗಿಗೆ ಹೊರಡು. ಅಲ್ಲಿ ನಿನಗೆ ...ಬಾ ಜನ ವೆಯ್ಟ್ ಮಾಡ್ತಾರಲ್ವಾ? ಅವರಿಗೆ ...ಂದರೆಯಾಗಬಾರದು. ...ಮ್ಮಾಡೋದು ...ಳು? ಪರ್ವಾಗಿಲ್ಲ ...ನು ...ರಟುಬಿಡು" ...ದರು. ನನ್ನ ...ತಃಸತ್ವದ ...ವು ಮತ್ತು ...ಪ್ಪಾಜಿಯ ಒಲವು ...ಡೂ ಒಂದೇ ...ತ್ತು.



ಅಪ್ಪಣ್ಣನನ್ನು ಮಣ್ಣು ಮಾಡಿದ ಮರುದಿನವೇ ...ು ಜೈಪುರಕ್ಕೆ ಹೊರಟುನಿಂತೆ. ನನ್ನ ಆಶ್ಚರ್ಯಕ್ಕೆ ...ದು ವಿಮಾನ ನಿಲ್ದಾಣಕ್ಕೆ ನನ್ನನ್ನು ಡ್ರಾಪ್ ಮಾಡಲು ಸ್ವತಃ ಅಪ್ಪಾಜಿಯೇ ಹೊರಟುನಿಂತರು. ಅವರೆಂದೂ ನಾನು ಶೂಟಿಂಗಿಗೆ ಹೊರಟಾಗ ವಿಮಾನ ನಿಲ್ದಾಣಕ್ಕೆ ಬಂದವರೇ ಇಲ್ಲ. ಸಹೋದರನ ನಿಧನದಿಂದ ಅವರ ಮುಖ ಕಳಾಹೀನವಾಗಿತ್ತು, ಸಾಕಷ್ಟು ವೀಕ್ ಆಗಿದ್ದರು, ರಾತ್ರಿ ಊಟ ಕೂಡಾ ಮಾಡಿರಲಿಲ್ಲ, ನಡೆದಾಡಲು ಸಹ ಸ್ವಲ್ಪ ಕಷ್ಟಪಡುತ್ತಿದ್ದರು. ಆದರೂ "ನೀವು ಬರಬೇಡಿ" ಎಂದು ಹೇಳುವ ಧೈರ್ಯ ನನಗಿರಲಿಲ್ಲ,

ಬೆಂಗಳೂರಿನ ಟ್ರಾಫಿಕ್ ಮತ್ತು ಶಬ್ಧದ ನಡುವೆ ನಾವಿಬ್ಬರೂ ಕಾರಿನಲ್ಲಿ ಮೌನವಾಗಿಯೇ ಸಾಗುತ್ತಿದ್ದೆವು. ನಮ್ಮ ನಡುವೆ ಮಾತೇ ಇರಲಿಲ್ಲ, ಅವರ ಮುಖವನ್ನು ದಿಟ್ಟಿಸಿ ನೋಡೋಣವೆಂದರೆ ಅವರಿಗೆ ಅದು ಇಷ್ಟವಾಗುವುದಿಲ್ಲವೋ ಎಂದು ಸುಮ್ಮನಿದ್ದೆ, ನಾವು ವಿಮಾನ ನಿಲ್ದಾಣ ತಲುಪಿದಾಕ್ಷಣ ನನ್ನನ್ನು ಪಕ್ಕಕ್ಕೆ ಕರೆದು "ನೋಡು ಕಂದಾ... ಫೈಟಿಂಗ್ ಗೀಟಿಂಗ್ ಮಾಡುವಾಗ ಜಾಸ್ತಿ ರಿಸ್ಕ್ ತಕ್ಕೋಬೇಡ. ಜಾಗ್ರತೆಯಿಂದ ಆ್ಯಕ್ಟ್ ಮಾಡು" ಎಂದರು. ಇಂತಹ ಮಾತನ್ನು ಅಪ್ಪಾಜಿ ನನಗೆ ಯಾವತ್ತೂ ಹೇಳಿರಲಿಲ್ಲ, ಆದರೆ ಅವತ್ತಿನ ಸಂದರ್ಭ ಅರ್ಥಮಾಡಿಕೊಂಡು "ಆಯ್ತಪ್ಪಾಜಿ" ಎಂದೆ.


ಅವರು ಊಟ ಮಾಡದೇ ಬಂದಿದ್ದರಿಂದ "ಏನಪ್ಪಾಜಿ ನೀವು ಊಟಾನೂ ಮಾಡಿಲ್ಲ, ಏನಾದ್ರು ಊಟ ಮಾಡಿ" ಎಂದು ವಿಮಾನ ನಿಲ್ದಾಣದಲ್ಲೇ ತಿಂಡಿ ತರಿಸಿ ಅಪ್ಪಾಜಿಗೆ ನೀಡಿದೆ. ಸಾಧಾರಣವಾಗಿ ಅವರಿಗೆ ಊಟವೆಂದರೆ ಎಲೆ ಹಾಕಿ, ಚಕ್ಕಂಬಕ್ಕಳ ಕೂತು ತಿನ್ನಬೇಕು. ಆದರೆ ಅಂದು ಕಾರಿನ ಮೂಲೆಯಲ್ಲಿ ಕುಳಿತು ನಾನು ತರಿಸಿದ್ದ ತಿಂಡಿಯನ್ನು ಮೆಲ್ಲನೆ ತಿಂದರು. ಅವರ ಕಣ್ಣಂಚಿನಲ್ಲಿ ನೀರಿನ ಹನಿಯಿತ್ತು, ಆಗಾಗ ಕಾಣಿಸದ ದೇವರನ್ನು ನೆನೆಸಿಕೊಂಡು ಏನೇನೋ ಜಪಿಸುತ್ತಿದ್ದರು. ಅದನ್ನೆಲ್ಲ ಕಂಡು ನನ್ನ ಕಣ್ಣಿನಲ್ಲಿ ನೀರು. ಅಂತಹ ಸಂದರ್ಭದಲ್ಲಿ ನಾನು ನಿಜವಾಗಿಯೂ ಶೂಟಿಂಗ್‌ಗೆ ಹೋಗಲೇಬೇಕೆ ಎಂದು ಮತ್ತೊಮ್ಮೆ ನನ್ನನ್ನೇ ಪ್ರಶ್ನಿಸಿಕೊಂಡೆ.

ಇನ್ನೇನು ವಿಮಾನ ಹೊರಡಬೇಕು... ಅಪ್ಪಾಜಿಯನ್ನು ಆಲಿಂಗಿಸಿ, ಕೆನ್ನೆಗೆ ಮುತ್ತು ಕೊಟ್ಟು ಹೊರಟೆ. ಆದರೂ ಅಪ್ಪಾಜಿಗೆ ಸಮಾಧಾನವಾಗಲಿಲ್ಲ, ಕಾರಿನಿಂದ ಇಳಿದು ನನ್ನನ್ನು ವಿಮಾನ ನಿಲ್ದಾಣದ ಬಾಗಿಲಿನ ತನಕ ಬಿಟ್ಟು ಹಿಂತಿರುಗಿದರು.

ಅಪ್ಪಾಜಿ ಮನೆಗೆ ಹೋದ ನಂತರ ಏನು ಮಾಡಿದರು ಗೊತ್ತೇ? ನಾನು ಜೈಪುರ ತಲುಪುವ ತನಕ ಮನೆಯವರ ಕೈಯಲ್ಲಿ ಫೋನ್ ಮಾಡಿಸುತ್ತಾ ನಾನು ಸುರಕ್ಷಿತವಾಗಿ ತಲುಪಿದೆನಾ ಎಂದು ವಿಚಾರಿಸುತ್ತಲೇ ಇದ್ದರಂತೆ. ನನ್ನ ಪತ್ನಿ ಗೀತಾ ಹೇಳುವ ಪ್ರಕಾರ ಕನಿಷ್ಟ ಇಪ್ಪತ್ತು ಬಾರಿಯಾದರೂ ಅಪ್ಪಾಜಿ ಫೋನು ಮಾಡಿಸಿದರಂತೆ.

ತಮ್ಮನ ನಿಧನದ ನಂತರ ಬಹುಶಃ ಆ ಒಂದು ಪ್ರೀತಿ ಮತ್ತು ಮಮತೆ ಹಿರಿಯ ಮಗನಾದ ನನ್ನ ಕಡೆ ರೂಪಾಂತರಗೊಂಡಿರಬಹುದು ಎಂದು ನಾನು ಅಂದು ಕೊಂಡೆ.

ಜೈಪುರದಿಂದ ವಾಪಸ್ಸು ಬಂದ ನಂತರ ನಾನು ಅಪ್ಪಾಜಿಯವರನ್ನ ಸುಮ್ಮನೇ ಗಮನಿಸುತ್ತಿದ್ದೆ. ಅವರು ಹಿಂದಿನಷ್ಟು ಜೀವನೋತ್ಸಾಹದಲ್ಲಿರಲಿಲ್ಲ, ಆದರೆ ನಾವು ಆ ಬಗ್ಗೆ ಯಾವತ್ತೂ ಏನೂ ಕೇಳಲೇ ಇಲ್ಲ, ಹಾಗೆ ಕೇಳಬಾರದೆಂದೇ ನಾವು ನಿರ್ಧರಿಸಿದ್ದೆವು. ಇಂಥ ಸಂದರ್ಭದಲ್ಲಿ ನನ್ನ 'ಅಣ್ಣ ತಂಗಿ' ಚಿತ್ರ ಶತದಿನೋತ್ಸವ ಆಚರಿಸಿತು. ಆ ಚಿತ್ರದ ಶತದಿನೋತ್ಸವ ಸಮಾರಂಭವನ್ನು ಅಪ್ಪಾಜಿಯ ಅನಾರೋಗ್ಯದ ಕಾರಣ 25 ದಿನಗಳ ಕಾಲ ಮುಂದೂಡಿದ್ದೆವು.



ಆ ನಂತರ ನಾನೇ ನಿರ್ಮಾಪಕ ಪ್ರಭಾಕರ್ ಅವರಿಗೆ "ಇಂಥ ಸಂದರ್ಭದಲ್ಲಿ ನಾವು ಅಪ್ಪಾಜಿಯನ್ನು ಕರೆಸುವುದು ಸರಿಯಲ್ಲ. ಸಮಾರಂಭ ಮಾಡಿ ಮುಗಿಸೋಣ" ಎಂದೆ. ಅಪ್ಪಾಜಿಯ ಗೈರುಹಾಜರಿಯಲ್ಲಿ ನಡೆದ ಮೊದಲ ಮತ್ತು ಕೊನೆಯ ಸಮಾರಂಭ ಆದಾಗುತ್ತದೆ ಎಂದು ನಾನು ಮಾತ್ರ ಅಂದು ಕನಸು ಮನಸಲ್ಲೂ ನೆನೆಸಿರಲಿಲ್ಲ,

ಸಮಾರಂಭ ಮುಗಿದ ನಂತರ ಮನೆಗೆ ಬಂದಾಗ ನಿರ್ಮಾಪಕ ಪ್ರಭಾಕರ್ ನನಗೆ ಹಾಕಿದ್ದ ಚಿನ್ನದ ಚೈನ್ ಅನ್ನು ಅವರು ನೋಡಿದರು. ಅದನ್ನು ನನ್ನಿಂದ ಪಡೆದು ಭಕ್ತಿಯಿಂದ ಎರಡೂ ಕಣ್ಣುಗಳಿಗೆ ಒತ್ತಿಕೊಂಡರು. "ನಿನಗೆ ಪಿಕ್ಚರ್ ಮಾಡಿದ್ದಕ್ಕೆ ದುಡ್ಡೂ ಕೊಟ್ಟು, ಅವಾರ್ಡೂ ಕೊಟ್ಟು, ಜೊತೆಗೆ ಚೈನ್ ಬೇರೆ ಕೊಟ್ಟಿದ್ದಾರಲ್ಲಾ ಕಂದಾ ಆ ಪುಣ್ಯಾತ್ಮ. ಆತ ಚೆನ್ನಾಗಿರಬೇಕು. ಇದೆಲ್ಲಾ ಅವರು ನೀಡುವ ಪ್ರಸಾದ" ಎಂದು ಮತ್ತೊಮ್ಮೆ ಚೈನ್‌ಅನ್ನು ಕಣ್ಣಿಗೆ ಒತ್ತಿಕೊಂಡರು.

ಏನು ಅಪ್ಪಾಜಿ ಎಂದೂ ಚೈನ್ ನೋಡದವರಾ? ಆದರೆ ಅವತ್ತು ಅವರು ಆಡಿದ ಮಾತು ನನ್ನ ಮನೋಭಾವವನ್ನೇ ಬದಲಿಸಿತು. ಅಪ್ಪಾಜಿಯಂಥವರೇ ಒಂದು ಚೈನ್‌ಅನ್ನು ಅಷ್ಟೊಂದು ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡಿದ್ದು ನನ್ನ ಹೃದಯದಲ್ಲಿ ಮಿಂಚಿನ ಸಂಚಲನವನ್ನುಂಟುಮಾಡಿತು. ಅದರಿಂದ ಚೈನು ಪಡೆದುಕೊಂಡು ನಾನು ಕೂಡಾ ಅದನ್ನು ಕಣ್ಣಿಗೆ ಒತ್ತಿಕೊಂಡೆ.

ಇನ್ನು 'ಕುಮಾರರಾಮ' ಚಿತ್ರದ ಅಂತಿಮ ಹಂತದ ಚಿತ್ರೀಕರಣಕ್ಕಾಗಿ ನಾನು ಏಪ್ರಿಲ್ 7ರಂದು ಹಂಪಿಗೆ ಹೊರಡಬೇಕಾಗಿತ್ತು. ಅದರ ಮುನ್ನಾ ದಿನ ಅಂದರೆ 6ನೇ ತಾರೀಖು "ನಿನ್ನ ಮನೆ ಎಲ್ಲಿಯವರೆಗೆ ಆಗಿದೆ ನೋಡೋಣ ಕಂದಾ..." ಎಂದು ಹೇಳಿದರು. ನಾನು ಅಂದೇ ಅಪ್ಪಾಜಿಯನ್ನು ನಾನು ಕಟ್ಟಿಸುತ್ತಿದ್ದ ಹೊಸ ಮನೆಯನ್ನು ತೋರಿಸಲು ಕರೆದುಕೊಂಡು ಹೋದೆ.

ಮನೆ ಆವರಣ ತಲುಪುತ್ತಿದ್ದಂತೇ "ಈ ಮನೆ ನಿನ್ನ ಮನಸ್ಸಿನ ತರಹ ವಿಶಾಲವಾಗಿದೆ ಕಂದಾ. ಈ ಮನೆಯ ಒಳಗಡೆ ಬರುತ್ತಿದ್ದಂತೇ ಏನೋ ಒಂದು ಪವರ್ ಬಂದಂಗೆ ಆಗುತ್ತಿದೆ" ಎಂದು ಹೇಳಿದರು. ಹೆಚ್ಚೆಂದರೆ ಅಪ್ಪಾಜಿ ಒಂದರ್ಧ ಗಂಟೆ ಇಲ್ಲಿರುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ, ಆದರೆ ಸುಮಾರು ಎರಡು ಗಂಟೆಗಳ ಕಾಲ ಅಪ್ಪಾಜಿ ಅಲ್ಲೇ ಕಾಲ ಕಳೆದರು. ಅಲ್ಲಿದ್ದ ಕೆಲಸಗಾರರ ಜೊತೆಯೆಲ್ಲಾ ಫೋಟೋ ತೆಗೆಸಿಕೊಂಡರು. ಅಲ್ಲೇ ಇದ್ದ ನಾಗತ್ತೆಯನ್ನು ಕರೆದು "ನೋಡು, ನೋಡು ಈ ಮನೆಯಲ್ಲಿ ನನಗಾಗಿ ಒಂದು ವಿಶಾಲವಾದ ಕೋಣೆಯನ್ನು ಕಟ್ಟಿಸಿದ್ದಾನೆ ನೋಡು..." ಎಂದು ಹೆಮ್ಮೆಯಿಂದ ತೋರಿಸಿದರು. "ಆದಷ್ಟು ಬೇಗ ಮನೆ ಕೆಲಸ ಮುಗಿಸಿಬಿಡಪ್ಪಾ, ನಾನು ಇಲ್ಲಿ ಬಂದು ಹಾಯಾಗಿ ಕಾಲ ಕಳೀತೀನಿ" ಎಂದು ಹೇಳಿದರು.

ಆನಂತರ ಮತ್ತೆ ಮಾತು ಮುಂದುವರೆಸಿ "ನೀನು ಹುಟ್ಟಿದಾಗ ನಾನು ಯಾಕೆ ನಿನ್ನನ್ನು ಅಪ್ಪಾಜಿ ಅಂತ ಕರೀತಿದ್ದೆ ಗೊತ್ತಾ? ನಿನ್ನನ್ನು ನೋಡಿದಾಗ ನನ್ನ ಅಪ್ಪಾಜಿಯನ್ನು ನೋಡಿದ ಹಾಗೆ ಭಾಸವಾಗುತ್ತಿತ್ತು, ನಿನ್ನ ಹೃದಯ ತುಂಬಾ ಒಳ್ಳೇದು ಅಪ್ಪಾಜಿ...." ಎಂದು ಅಪ್ಪಾಜಿ ನನ್ನನ್ನು ಹೊಗಳಲು ಶುರುಮಾಡಿದರು. "ಅಪ್ಪಾಜಿ ಇದೆಲ್ಲಾ ಈಗ ಯಾಕೆ? ನೀವು ಹೀಗೆ ಹೇಳಿದರೆ ನನಗೆ ಸಂಕಟವಾಗುತ್ತೆ, ದಯವಿಟ್ಟು ಹೀಗೆಲ್ಲ ಹೇಳಬೇಡಿ" ಎಂದು ಸಂಕೋಚದಿಂದ ಹೇಳಿದೆ.

ಆಗ ಭಾವುಕರಾದ ಅಪ್ಪಾಜಿ "ಇಲ್ಲಾ ಕಂದಾ, ನೀನು ಚೆನ್ನಾಗಿರ್ತೀಯ.... ನೀನು, ನಿನ್ನ ಹೆಂಡ್ತಿ, ಮಕ್ಕಳು ಚೆನ್ನಾಗಿರ್ತೀರ. ನೀವು ಜೀವನದುದ್ದಕ್ಕೂ ಹಿಂಗೇ ಇರ್ತೀರ. ರಾಜನ ತರಹ... ರಾಜಕುಮಾರನ ತರಹ ನೀನು ಇರ್ತಿಯ" ಎಂದು ಹಾರೈಸಿದರು.


ಇದು ನನ್ನ ಜೀವನದಲ್ಲಿ ನನ್ನ ಅಪ್ಪಾಜಿ ನನಗೆ ಹೇಳಿದ ಕೊನೆಯ ಮಾತು!!

(ಮುಂದುವರೆಯುತ್ತದೆ)

ಥ್ರಿಲ್ಲರ್ ಮಂಜನ ಹೊಸ ಸ್ಟಂಟ್

ಗಾಂಧಿನಗರದಲ್ಲೇ 'ವರ್ಲ್ಡ್ ಫೇಮಸ್' ಆಗಿರುವ ಸ್ಟಂಟ್ ...ಾಸ್ಟರ್ ಥ್ರಿಲ್ಲರ್ ಮಂಜು ಮೊನ್ನೆ ಹೂಂಕರಿಸಿದ್ದಾರೆ.

"ಸತ್ಯ 'ಇನ್ ಲವ್' ಚಿತ್ರಕ್ಕಾಗಿ ಪೀಟರ್ ಹೇಯ್ನ್ಸ್ ಅವರನ್ನು ...ವತ್ತು ಲಕ್ಷ ಕೊಟ್ಟು ಕರೆಸುವ ಅಗತ್ಯವೇನಿತ್ತು? ಅದೇ ಫೈಟಿಂಗನ್ನು ಎರಡು ಮೂರು ದಿವಸದಲ್ಲೇ ನಾನು ಮುಗಿಸಿಬಿಡುತ್ತಿದ್ದೆ, ಪೀಟರ್ ಹೇಯ್ನ್ಸ್‌ರನ್ನು ಕರೆಸಿದವರಿಗೆ ನಮ್ಮ ಧಿಕ್ಕಾರ" ಎಂದು ಮಂಜು ಅರ್ಭಟಿಸಿದ್ದಾರೆ.



ಆದರೆ ಇದೇ ಮಂಜು ತೆಲುಗು ಮತ್ತು ತಮಿಳು ಚಿತ್ರಗಳಲ್ಲಿ ಸ್ಟಂಟ್ ಮಾಸ್ಟರ್ ಆಗಿ ಕೆಲಸ ಮಾಡಿದಾಗ ಅಲ್ಲಿಯವರೂ ಹೀಗೇ ಪ್ರತಿಕ್ರಿಯಿಸಿದ್ದರೆ ಇವರೇನು ಮಾಡುತ್ತಿದ್ದರು?


ಮತ್ತೆ ಒಂದಾದ ರಮ್ಯಾ-ರಕ್ಷಿತಾ

ರಮ್ಯಾ ಮತ್ತು ರಕ್ಷಿತಾ ಮತ್ತೆ ಒಟ್ಟಾಗಿದ್ದಾರೆ. ಹೀಗೆಂದಾಕ್ಷಣ ಕವಿತಾ ಲಂಕೇಶ್ 'ತನನಂ ತನನಂ ಭಾಗ-2' ಆರಂಭಿಸುತ್ತಿದ್ದಾರೆ ಎಂದು ಭಾವಿಸಬೇಡಿ. ಅಥವಾ ರಕ್ಷಿತಾ ಮದುವೆಯಾದ ನಂತರ ಮತ್ತೆ ಚಿತ್ರರಂಗಕ್ಕೆ ನಟಿಸಲು ಬರುತ್ತಿದ್ದಾಳೆಂದೂ ಊಹಿಸಬೇಡಿ. ವಿಷಯ ಏನೆಂದರೆ ಮುಂದಿನ ವಾರ ಸೆಟ್ಟೇರಲಿರುವ ಹೊಸ ಚಿತ್ರದ ಟೈಟಲ್ 'ರಮ್ಯಾ ರಕ್ಷಿತಾ'. ಈ ಚಿತ್ರವನ್ನು 'ಬೆಳ್ಳಿ ಬೆಟ್ಟ' ಚಿತ್ರದ ನಿರ್ಮಾಪಕರೇ ತಯಾರಿಸುತ್ತಿದ್ದು ಅದರಲ್ಲಿ ನಾಯಕ ನಾಯಕಿಯರಿಂದ ಹಿಡಿದು ಎಲ್ಲರೂ ಹೊಸಬರೇ ಇರುತ್ತಾರಂತೆ.

ಹಿಂದೆ ಮಾಲಾಶ್ರೀ, ಪ್ರೇಮಾ ಮೊದಲಾದ ನಾಯಕಿಯರ ಹೆಸರಿನಲ್ಲಿ ಚಿತ್ರಗಳು ಬಂದಿದ್ದವು. ಯಾವುದೂ ಬಾಕ್ಸಾಫೀಸಿನಲ್ಲಿ ಹಿಟ್ ಆಗಲಿಲ್ಲ, ಇನ್ನು ಚಲಾವಣೆಯಲ್ಲಿಲ್ಲದ ರಕ್ಷಿತಾ, ಮತ್ತು ಚಲಾವಣೆಗೆ ತುಂಬಾ ಭಾರಿ ಆಗಿರುವ ರಮ್ಯಾಳ ಹೆಸರುಗಳ ಈ ಚಿತ್ರ ಏನಾಗುತ್ತೋ?

ಐವರು ಸ್ಟಂಟ್ ಮಾಸ್ಟರ್‌ಗಳ ಹೊಸ ಸಾಹಸ

ಡಿಶುಂ ಡಿಶುಂ ಚಿತ್ರಗಳ ಪ್ರಿಯರಿಗೆ ಇಲ್ಲೊಂದು ವಿಶೇಷ ಸುದ್ದಿ. ವಿನೋದ್ ಪ್ರಭಾಕರ್ ನಟಿಸುತ್ತಿರುವ 'ಸರ್ಕಲ್ ರೌಡಿ' ಚಿತ್ರಕ್ಕೆ ಒಟ್ಟು ಐದು ಜನ ಸ್ಟಂಟ್ ಮಾಸ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. ಥ್ರಿಲ್ಲರ್ ಮಂಜು, ಟೈಗರ್ ಮಧು, ಕೌರವ ವೆಂಕಟೇಶ್, ಡಿಫರೆಂಟ್ ಡ್ಯಾನಿ ಮತ್ತು ನಿರ್ದೇಶಕ ಬಿ. ರಾಮಮೂರ್ತಿ- ಇವರೆಲ್ಲರೂ ತಲಾ ಒಂದೊಂದು ಫೈಟಿಂಗ್ ದೃಶ್ಯವನ್ನು ಸಂಯೋಜಿಸಿದ್ದಾರಂತೆ. ಈ ಐದೂ ಜನರು ಟೈಗರ್ ಪ್ರಭಾಕರ್ ಅವರ ಶಿಷ್ಯರಾಗಿದ್ದರಿಂದ ಹೀಗೆ ಒಟ್ಟಿಗೆ ಕೆಲಸ ಮಾಡಲು ಒಪ್ಪಿದ್ದಾರಂತೆ.




ಐದು ಫೈಟ್ ಮತ್ತು ಐದು ಸಾಂಗ್ ಚಿತ್ರದಲ್ಲಿದೆ ಎಂದರೆ ಈ ಚಿತ್ರ ಹೇಗಿರಬಹುದೆಂದು ನೀವು ಊಹಿಸಬಹುದು.

R.B.P. LANKESH, Kannada Weekly Price Rs. 10/- 6-6-2007 RNI No. KARKAN2005/14648 Regd.No.KA/BG(S)/2036/2005-0

ಕಾನ್‌ನಲ್ಲಿ ನಾಗತಿಹಳ್ಳಿ ಕಾಣಿಸಲಿಲ್ಲವಲ್ಲಾ?



ಪ್ರಖ್ಯಾತ ಕಾನ್ ಚಲನಚಿತ್ರೋತ್ಸವ ಇದೇ ಭಾನುವಾರ ಅಂತ್ಯಗೊಂಡಿದೆ. ಆ ಚಿತ್ರೋತ್ಸವದಲ್ಲಿ ನಮ್ಮ ಕನ್ನಡಿಗ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಅವರ ಕನ್ನಡರತ್ನಗಳಾದ 'ಮಾತಾಡು ಮಾತಾಡು ಮಲ್ಲಿ' ಅಂಡ್ 'ಅಮೃತಧಾರೆ' ಸಿನಿಮಾಗಳಿಗೆ ಎಂತಹ ಪ್ರತಿಕ್ರಿಯೆ ಸಿಕ್ಕಿರಬಹುದು ಎಂದು ಕುತೂಹಲಗೊಂಡು ಕಾನ್ ಚಿತ್ರೋತ್ಸವದ ವೆಬ್‌ಸೈಟಿಗೆ ಹೋದರೆ ಅಲ್ಲಿ ನಾಗತಿಹಳ್ಳಿ ಬಗ್ಗೆಯಾಗಲೀ, ಅವರ ಸಿನಿಮಾಗಳ ಬಗ್ಗೆಯಾಗಲೀ ಒಂದೇ ಒಂದು ಅಕ್ಷರವೂ ಇಲ್ಲ!



ಛೆ, ಛೆ, ಇದೆಂತಹ ಪ್ರಮಾದ?! ಇಂಗ್ಲಿಷ್, ಫ್ರೆಂಚ್ ಮತ್ತು ಸ್ಪಾನಿಷ್ ಸಿನಿಮಾಗಳ ಭಾರಾಟೆಯಲ್ಲಿ ನಮ್ಮ ಕನ್ನಡದ ಕೊಡುಗೆಗಳು ಕೊಚ್ಚಿ ಹೋಗಿರಬಹುದೇ? ಹೋಗಲಿ, ಬಡದೇಶಗಳಿಂದ ಬಂದ ಸಿನಿಮಾಗಳ ಪಟ್ಟಿಯಲ್ಲಾದರೂ ಇವು ಇರಬಹುದೇ ಎಂದು ನೋಡಿದೆವು. ಆದರೆ ಅಲ್ಲಿ ಅಧಿಕೃತವಾಗಿ ಭಾರತದಿಂದ ಪ್ರದರ್ಶನಗೊಂಡ 'ಲಗೆ ರಹೋ ಮುನ್ನಾ ಭಾಯ್' ಎಂಬ ಹಿಂದಿ ಸಿನಿಮಾ, 'ವೆಯಿಲ್' ಎಂಬ ತಮಿಳು ಸಿನಿಮಾ 'ದೊಸರ್' ಎಂಬ ಬಂಗಾಳಿ ಸಿನಿಮಾ, ಮತ್ತು 'ಗುರು' ಎಂಬ ಮಣಿರತ್ನಂರವರ ಹಿಂದಿ-ತಮಿಳು ಸಿನಿಮಾಗಳು ಮಾತ್ರ ಇದ್ದವೇ ಹೊರತು ಅಲ್ಲಿಯೂ ನಾಗತಿಹಳ್ಳಿ ಇಲ್ಲ, ಮಲ್ಲಿಗೆಯೂ ಇಲ್ಲ, ಅಮೃತಧಾರೆಯಂತೂ ಇಲ್ಲವೇ ಇಲ್ಲ!

ಏನಿದು ದುರಂತ? ನಾಗತಿಹಳ್ಳಿಯ ಸಿನಿಮಾಗಳನ್ನು ಕಾನ್‌ನಲ್ಲಿ ಪ್ರದರ್ಶಿಸಲೇ ಇಲ್ಲವೇ ಎಂಬ ಚಿಂತೆ ಶುರುವಾಗಿ 'ಗೂಗಲ್'ನಲ್ಲಿ 'ನಾಗತಿಹಳ್ಳಿ ಕಾನ್' ಎಂದು ಟೈಪ್ ಮಾಡಿ ಸರ್ಚ್ ಮಾಡಿದರೆ ಸಿಕ್ಕಿತು ನೋಡಿ....

ನಾಗತಿಹಳ್ಳಿ ಕಾನ್‌ಗೆ ಹೋಗುತ್ತಿದ್ದಾರೆಂದೂ, ಅವರ ಈ ಎರಡು ಚಿತ್ರಗಳು ಅಲ್ಲಿ ಪ್ರದರ್ಶನಗೊಳ್ಳುತ್ತಿವೆಯೆಂದೂ, ಇದು ಕನ್ನಡ ಚಿತ್ರರಂಗಕ್ಕೆ ಸಿಕ್ಕಿದ ಅಗ್ರಸ್ಥಾನವೆಂದೂ ಬೆಂಗಳೂರಿನ ಪತ್ರಕರ್ತರು, ಮಾಧ್ಯಮದವರು ಮಾಡಿದ್ದ ವರದಿಗಳು ಹೇರಳವಾಗಿದ್ದವು. ಅವುಗಳನ್ನು ಆಧರಿಸಿ ಇತರೆ ಪತ್ರಕರ್ತರೂ ಇನ್ನಷ್ಟು ತೌಡು ಕುಟ್ಟಿದ್ದರು. ಪ್ರತಿ ವರ್ಷ ಸಾವಿರಾರು ಜನರು ಹೋಗುವಂತೆ ನಾಗತಿಹಳ್ಳಿ ಕೂಡ ಈ ಬಾರಿ ಕಾನ್‌ಗೆ ಹೋಗಿದ್ದರು. ಹಾಗೆ ಹೋಗುವಾಗ 'ಅಮೃತಧಾರೆ' ಮತ್ತು ಇನ್ನೂ ಸಂಪೂರ್ಣಗೊಳ್ಳದಿರುವ 'ಮಾಮಾಮ' ಚಿತ್ರಗಳ ಡಿವಿಡಿಗಳನ್ನು ತೆಗೆದುಕೊಂಡು ಹೋಗಿದ್ದರು.

ಅಷ್ಟು ಮಾತ್ರಕ್ಕೆ ನಮ್ಮ ಪೆದ್ದ ಶಿಖಾಮಣಿ ಪತ್ರಕರ್ತರು ನಾಗತಿಹಳ್ಳಿಯವರ ಸಿನಿಮಾಗಳು ಕಾನ್ ಚಿತ್ರೋತ್ಸವಕ್ಕೆ ಆಯ್ಕೆಯಾಗಿವೆ ಎಂದೂ, ಅವನ್ನು ಅಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದೂ, ಇದು ಕನ್ನಡಕ್ಕೆ ಹೆಮ್ಮೆ ಎಂದೂ ಬರೆಯಬಹುದಾ? ಛಿ!

ಬೇರೆಯವರಿಗೆ ಏನು ದಾಡಿ?

ನಮ್ಮ ಎಲ್ಲ ಭಾಷೆಯ ಸಿನಿಮಾಗಳಲ್ಲಿ ಅದೆಷ್ಟೋ ಮುದಿ ನಟರು ತಾವಿನ್ನೂ ಯುವಕರೆಂಬಂತೆ ಪೋಸು ಕೊಡುತ್ತಾ ತಮಗಿಂತಾ ಮೂವತ್ತು ವರ್ಷ ಚಿಕ್ಕವರಾದ ಹದಿಹರೆಯದ ನಟಿಯರೊಂದಿಗೆ ತೆರೆಯ ಮೇಲೆ ರೋಮಾನ್ಸ್ ಮಾಡುವುದನ್ನು ನೋಡಿದ್ದೇವೆ. ಅಸಹ್ಯ ಪಟ್ಟುಕೊಂಡಿದ್ದೇವೆ.

ಅವರೆಲ್ಲರಂತೆ ದೇಶದಲ್ಲೇ ಅತಿ ಜನಪ್ರಿಯರಾದ ನಟ ಅಮಿತಾಭ್ ಬಚ್ಚನ್ ಕೂಡ ಹೀಗೆ ಚಿಕ್ಕಚಿಕ್ಕ ವಯಸ್ಸಿನ ಹುಡುಗಿಯರೊಂದಿಗೆ ನಟಿಸುವುದನ್ನು ಕಂಡಿದ್ದೇವೆ. ಆದರೆ ಅಸಹ್ಯಪಟ್ಟುಕೊಂಡಿಲ್ಲ. ಯಾಕೆಂದರೆ ಅಮಿತಾಭ್ ಬಚ್ಚನ್ ತೆರೆಯ ಮೇಲೂ ತನ್ನ ಪ್ರಾಯಕ್ಕೆ ತಕ್ಕದಾದ ಪಾತ್ರಗಳಲ್ಲಿ ನಟಿಸುತ್ತಾರೆ.

ಉದಾಹರಣೆಗೆ ಈ ವಾರ ಬಿಡುಗಡೆಯಾಗಿರುವ 'ಚೀನಿ ಕಮ್' (ಕಡಿಮೆ ಸಕ್ಕರೆ) ಎಂಬ ಚಿತ್ರವನ್ನೇ ತೆಗೆದುಕೊಳ್ಳಿ. ಈಗ 65 ವರ್ಷ ವೃದ್ಧರಾದ ಬಚ್ಚನ್‌ರವರು ಆ ಚಿತ್ರದಲ್ಲೂ 65 ವರ್ಷ ವಯಸ್ಸಿನ ಮನುಷ್ಯನ ಪಾತ್ರವನ್ನೇ ಮಾಡಿದ್ದಾರೆ. ಅಂದಹಾಗೆ ಅವರು ಈ ಚಿತ್ರದಲ್ಲಿ ಮೂವತ್ತರಆಸುಪಾಸಿನ ತಬೂಳನ್ನು ಪ್ರೀತಿಸುತ್ತಾರೆ. ಆದರೆ ತನಗಿಂತಾ ವಯಸ್ಸಾದವನನ್ನು ಮಗಳು ಪ್ರೀತಿಸುತ್ತಿರುವುದರ ಬಗ್ಗೆ ತಬೂಳ ತಂದೆ ತಕರಾರೆತ್ತುತ್ತಾನೆ. ಚಿತ್ರದ ಕತೆಯೇ ಮುದುಕನೊಬ್ಬ ಯುವತಿಯೊಬ್ಬಳನ್ನು ಪ್ರೀತಿಸುವುದರ ಬಗ್ಗೆ ಆಗಿರುವುದರಿಂದ ಇದು ಕೃತಕವಾಗಿ ಕಾಣಿಸುವುದಿಲ್ಲ.



ಅದೇರೀತಿ ಇತ್ತೀಚೆಗೆ ಬಚ್ಚನ್‌ರವರು 'ನಿಶಬ್ಧ' ಎಂಬ ಚಿತ್ರದಲ್ಲೂ ತಮಗಿಂತ ನಾಲ್ಕು ದಶಕಗಳಷ್ಟು ಕಿರಿಯವಳಾಗಿದ್ದ ಜಿಯಾಖಾನ್ ಎಂಬುವವಳೊಂದಿಗೆ ನಟಿಸಿದ್ದರು. ಆ ಚಿತ್ರದ ಕತೆ ಕೂಡ ಮುದುಕ-ಯುವತಿ ನಡುವಿನ ಆಕರ್ಷಣೆ ಕುರಿತದ್ದೇ ಆಗಿದ್ದರಿಂದ (ಪ್ರಖ್ಯಾತ ಲೇಖಕ ವ್ಲಾಡಿಮಿರ್ ನಬೊಕೋವ್ ಬರೆದಿದ್ದ 'ಲೋಲೀಟಾ' ಕಾದಂಬರಿಯನ್ನು ಆಧರಿಸಿತ್ತು) ಯಾರೂ ವಿರೋಧ ವ್ಯಕ್ತಪಡಿಸುವಂತಿರಲಿಲ್ಲ ಬಚ್ಚನ್‌ರವರ ಪಾತ್ರದ ಬಗ್ಗೆ.

ಮೂರನೆ ಉದಾಹರಣೆಯಾಗಿ 'ಬ್ಲಾಕ್' ಚಿತ್ರವನ್ನು ಹೆಸರಿಸಬಹುದು. ಆ ಸಿನಿಮಾದಲ್ಲೂ 25 ವರ್ಷ ವಯಸ್ಸಿನ ರಾಣಿ ಮುಖರ್ಜಿಯೊಂದಿಗೆ ಬಚ್ಚನ್ ನಟಿಸಿದ್ದರಲ್ಲದೆ, ಇಬ್ಬರ ನಟನೆಯೂ ಪ್ರಶಂಸೆ ಪಡೆದಿತ್ತು.

ಬಚ್ಚನ್‌ರಂತೆ ತಮ್ಮ ವಯಸ್ಸಿಗೆ ತಕ್ಕ ಹಾಗೆ ನಟಿಸಲು ಇತರೆ ನಟರಿಗೆ ಏನು ದಾಡಿ ಅಂತ?



ಮೂವರಲ್ಲಿ ಯಾರಿಗೆ ವಿಜಯ?



ಈ ಶುಕ್ರವಾರ ಯಾವುದೇ ಸಿನಿಮಾ ಬಿಡುಗಡೆಯಾಗಿಲ್ಲವಾದರೂ ಮುಂದಿನ ಶುಕ್ರವಾರ ದೊಡ್ಡ ತಾರಾ ಸಮರವೇ ನಡೆಯಲಿದೆ. ಸುದೀಪ್ ನಿರ್ದೇಶನ ಮತ್ತು ಅಭಿನಯದ 'ನಂ. 73 ಶಾಂತಿನಿವಾಸ', ದೇಸಾಯಿ ನಿರ್ದೇಶನದಲ್ಲಿ ವಿಷ್ಣು ನಟಿಸಿರುವ 'ಕ್ಷಣ ಕ್ಷಣ' ಮತ್ತು 'ಮುಂಗಾರು ಮಳೆ'ಯಿಂದ ಏಕ್‌ದಂ ಸ್ಟಾರ್ ಆಗಿ ಮಿಂಚುತ್ತಿರುವ ಗಣೇಶ್ ಅಭಿನಯದ 'ಹುಡುಗಾಟ' ಈ ಮೂರೂ ಚಿತ್ರಗಳೂ ಏಕಕಾಲದಲ್ಲಿ ಬಿಡುಗಡೆಯಾಗಲಿವೆ.

ಇನ್ನೊಂದು ವಿಶೇಷವೆಂದರೆ ಈ ಚಿತ್ರಗಳಿಗೆ ಹೂಡಿರುವ ಒಟ್ಟು ಹತ್ತು ಕೋಟಿ ರೂಪಾಯಿಗಳ ಭವಿಷ್ಯವು ಶುಕ್ರವಾರ ಬೆಳಿಗ್ಗೆ ಹನ್ನೆರಡು ಗಂಟೆಯೊಳಗೆ ಇತ್ಯರ್ಥವಾಗುತ್ತದೆ. ಹೀಗೆ ಮೂರ್ಮೂರು ಚಿತ್ರಗಳು ಬಿಡುಗಡೆಯಾದಾಗಲೆಲ್ಲ, ಸಾಮಾನ್ಯವಾಗಿ ಇಬ್ಬರು ನಿರ್ಮಾಪಕರನ್ನು ಪ್ರೇಕ್ಷಕ ಮನೆಗೆ ಕಳಿಸಿದ್ದಾನೆ. ಈಗ ಈ ಮೂವರಲ್ಲಿ ಇಬ್ಬರು ಯಾರು ಎಂಬುದು ಗಾಂಧಿನಗರದ ಜನರಿಗೆ ಎಲ್ಲಿಲ್ಲದ ಕುತೂಹಲ. ಇನ್ನೊಂದು ರೀತಿಯಲ್ಲಿ ಇದು ಮೂರು ಜನರ ಅಗ್ನಿಪರೀಕ್ಷೆಯ ಕಾಲವೂ ಹೌದು. 'ಮುಂಗಾರು ಮಳೆ' ಫ್ಲೂಕ್ ಅಲ್ಲ ಎಂಬುದನ್ನು ಗಣೇಶ್ ತೋರಿಸಬೇಕಾಗಿದೆ. ತನ್ನಲ್ಲಿನ್ನೂ ಪ್ರತಿಭೆಯಿದೆ ಎಂಬುದನ್ನು ದೇಸಾಯಿ 'ಕ್ಷಣ ಕ್ಷಣ' ಸಾಬೀತುಪಡಿಸಬೇಕಾಗಿದೆ. ಆಕಸ್ಮಾತ್ ಈ ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೆ ಮತ್ತೆ ಲೈಮ್ ಲೈಟಿಗೆ ಬರಲು ದೇಸಾಯಿಗೆ ಅಸಾಧ್ಯವೇ ಸರಿ. ಈ ಮಧ್ಯೆ ಕಳೆದ ಒಂದು ವರ್ಷದಿಂದ ತನು ಮನ ಧನವನ್ನು ಸುರಿದಿರುವ ಸುದೀಪ್‌ಗೂ 'ಶಾಂತಿನಿವಾಸ' ಶಾಂತಿಯನ್ನು ತಂದುಕೊಡಬೇಕಿದೆ.


ಕನ್ನಡದವರು ಹೀಗೆ ಪರಸ್ಪರ ಪೈಪೋಟಿಗೆ ಇಳಿದು ಶತಮಾನಗಳಿಂದ ಹಾಳಾಗುತ್ತಲೇ ಇದ್ದಾರೆ. ಮುಂದಿನವಾರ ಈ ಹಾಳಾದವರ ಪಟ್ಟಿಗೆ ಇನ್ನಿಬ್ಬರು ಸೇರುತ್ತಾರೆ.

'ಮೇಜರ್'ಗೆ ಪುನರ್ಜನ್ಮ

ವಿನೋದ್ ಪ್ರಭಾಕರ್ ತನ್ನ ತಂ... ಟೈಗರ್ ಪ್ರಭಾಕರ್‌ರವರ ಹಳೆ ಚಿ... ವೊಂದಕ್ಕೆ ಮರುಜನ್ಮ ನೀಡಲು ಹೊರ... ದ್ದಾರೆ. ಪ್ರಭಾಕರ್ ಏಳು ಪಾತ್ರಗಳ... ನಟಿಸಿದ್ದ 'ಮೇಜರ್' ಚಿತ್ರ ಸುಮಾರು ಶೇ. 70 ರಷ್ಟು ಮುಗಿದಿತ್ತು. ಈಗ ... ಚಿತ್ರದ ಶೇ. 30 ಭಾಗವನ್ನು ವಿನೋದ್ ಪ್ರಭಾಕರ್ ಕತ್ತರಿಸಿ ಬಿಸಾಡಿ, ಹೊಸದಾ... ಶೂಟಿಂಗ್ ಮಾಡಿ ಚಿತ್ರವನ್ನು ಮುಗಿ... ಲಿದ್ದಾರಂತೆ. "ಅಪ್ಪಾಜಿಯ ನಿಂತುಹೋ... ಈ ಚಿತ್ರವನ್ನು ಸಂಪೂರ್ಣಗೊಳಿ... ಅವರ ಹೆಸರನ್ನು ಅಜರಾಮರವಾಗಿಸ... ವುದು ನನ್ನ ಕರ್ತವ್ಯ ಎನ್ನುವ ಕಾರಣ... ಇದನ್ನು ಮಾಡುತ್ತಿದ್ದೇನೆ" ಎಂದ... ವಿನೋದ್ ಹೇಳಿದರು. ಮೊನ್ನೆ ಸೃಜನ... ಲೋಕೇಶ್ ಕೂಡ ತನ್ನ ತಂದೆಯ ಹೆಸ... ನಲ್ಲಿ ಎರಡು ದಿನ ನಾಟಕೋತ್ಸವವ... ಏರ್ಪಡಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದರು...

ಇವರನ್ನು ತಂದೆಗೆ ತಕ್ಕ ಮಕ್ಕ... ಎನ್ನಬಹುದೇ?

ಕಬಡ್ಡಿಗೂ ಬಂತು ಕಾಲ



'ಕಬಡ್ಡಿ' ಚಿತ್ರದ ನಿರ್ಮಾಪಕರಲ್ಲಿ ಒಬ್ಬರಾದ ನಟ ಕಿಶೋರ್ ದಿಲ್ ಖುಷ್ ಆಗಿದ್ದಾರೆ. ಕಾರಣವಿಷ್ಟೇ: ಅವರ ಚೊಚ್ಚಲ ಪ್ರಯತ್ನದ 'ಕಬಡ್ಡಿ' ಚಿತ್ರದ ಕ್ಲೈಮ್ಯಾಕ್ಸ್ ಮೊನ್ನೆ ಮಂಡ್ಯದಲ್ಲಿ ಮಳೆಯ ಕಾಟದ ನಡುವೆಯೂ ಚೆನ್ನಾಗಿ ಮೂಡಿಬಂತಂತೆ.

ಅಂದಹಾಗೆ ಈ ಚಿತ್ರಕ್ಕಾಗಿ ಇಪ್ಪತ್ತೈದು ಲಕ್ಷ ರೂಪಾಯಿ ವೆಚ್ಚದಲ್ಲಿ ರಾಷ್ಟ್ರೀಯ ಕಬಡ್ಡಿ ಟೂರ್ನಮೆಂಟನ್ನು ಆಯೋಜಿಸಲಾಗಿತ್ತು. "ಅರೆ, ಇಪ್ಪತ್ತೈದು ಲಕ್ಷ ಕೊಟ್ಟು ಟೂರ್ನಮೆಂಟ್ ಮಾಡುವ ಅಗತ್ಯವಿತ್ತಾ?" ಎಂಬ ಪ್ರಶ್ನೆಗೆ ಕಿಶೋರ್ ಉತ್ತರಿಸಿದ್ದು ಹೀಗೆ: "ಹೀರೋಗಳಿಗೆ ಐವತ್ತು, ಅರವತ್ತು ಲಕ್ಷ ಕೊಡುವುದಕ್ಕಿಂತ ಇದು ವಾಸಿ. ನಮ್ಮ ಚಿತ್ರದಲ್ಲಿ ಕಬಡ್ಡಿಯೇ ಹೀರೋ ಆಗಿರುವುದರಿಂದ ಆ ಆಟಕ್ಕಾಗಿ ಇಪ್ಪತ್ತೈದು ಲಕ್ಷ ಖರ್ಚು ಮಾಡಿದ್ದರಲ್ಲಿ ತಪ್ಪೇನಿದೆ?" 'ಕಬಡ್ಡಿ' ಚಿತ್ರದ ನಾಯಕ ಬೇರಾರೂ ಅಲ್ಲ; ಅಂತರರಾಷ್ಟ್ರೀಯ ಖ್ಯಾತಿಯ ಕರ್ನಾಟಕದ ಕಬಡ್ಡಿ ಆಟಗಾರ ಬಿ. ರಮೇಶ್. ಕ್ರಿಕೆಟ್ ಅಬ್ಬರದ ನಡುವೆ ಕಬಡ್ಡಿಗೆ ಇಷ್ಟೊಂದು ಪ್ರಾಮುಖ್ಯತೆ ಸಿಗುತ್ತಿರುವುದು ಸಂತೋಷದ ವಿಷಯವೇ ಸರಿ.

ಹಾರಲಿದೆ ಭಟ್ಟರ 'ಗಾಳಿಪಟ'



'ಮುಂಗಾರು ಮಳೆ'ಯ ನಂತರ ನಿರ್ದೇಶಕ ಯೋಗರಾಜ್ ಭಟ್ 'ಗಾಳಿಪಟ' ಎಂಬ ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾರೆ. ಆದರೆ ಅದಕ್ಕಿಂತಲೂ ಮುಖ್ಯ ಸುದ್ದಿಯಾವುದೆಂದರೆ, ಈ ಚಿತ್ರಕ್ಕಾಗಿ ಭಟ್ ಪಡೆಯುತ್ತಿರುವ ಸಂಭಾವನೆ ಒಂದೂಕಾಲು ಕೋಟಿ ರೂಪಾಯಿಗಳು. ಇಲ್ಲಿಯವರೆಗೆ ಯಾವ ನಿರ್ದೇಶಕನಿಗಾಗಲಿ, ನಟನಿಗಾಗಲಿ ಇಷ್ಟೊಂದು ಸಂಭಾವನೆ ಸಿಕ್ಕಿದ್ದ ಉದಾಹರಣೆ ಕನ್ನಡ ಚಿತ್ರರಂಗದಲ್ಲಂತೂ ಇಲ್ಲ.

ಈ ಚಿತ್ರವನ್ನು ತೆಲುಗಿನ ನಿರ್ಮಾಪಕರಾದ ಎ.ಎಂ. ರತ್ನಂರವರು ನಿರ್ಮಿಸುತ್ತಿದ್ದು ಅದನ್ನು ಏಕಕಾಲದಲ್ಲಿ ಕನ್ನಡ ಮತ್ತು ತೆಲುಗಿನಲ್ಲಿ ತಯಾರಿಸುತ್ತಿದ್ದಾರಂತೆ. ಅಂದಹಾಗೆ ಭಟ್ಟರನ್ನು ತೆಲುಗಿನ ರತ್ನಂ ಅವರಿಗೆ ಪರಿಚಯಿಸಿ ಈ ಡೀಲನ್ನು ಮಾಡಿಕೊಟ್ಟಿದ್ದು ಕನ್ನಡದ ಮತ್ತೊಬ್ಬ ನಿರ್ದೇಶಕ 'ಬಾ ಬಾರೋ ರಸಿಕ' ಖ್ಯಾತಿಯ ದಯಾಳ್.

ಗಾಯಕ ರಾಜೇಶ್ ಕೃಷ್ಣನ್, ಡೈಸಿ ಬೋಪಣ್ಣ, ಛಾಯಾಸಿಂಗ್ ಮತ್ತು ದಿಗಂತ್ ಈಗಾಗಲೇ ಈ ಚಿತ್ರಕ್ಕೆ ಆಯ್ಕೆಯಾಗಿದ್ದಾರೆ. ಇನ್ನೊಂದು ಯುವ ಜೋಡಿಗಾಗಿ ಶೋಧ ನಡೆಯುತ್ತಿದೆ.

'ಮುಂಗಾರು ಮಳೆ'ಯ ನಂತರ ಯೋಗರಾಜ್ ಭಟ್‌ಗೂ ಸಮೃದ್ಧಿಯ ಬೆಳೆ ಸಿಕ್ಕಂತಾಯಿತು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44